# ಇತಿಹಾಸ

## 1.ಭಾರತಕ್ಕೆ ಯುರೋಪಿಯನ್ನರ ಆಗಮನ

1. ಏಷ್ಯಾ ಮತ್ತು ಯುರೋಪ್ ನಡುವಿನ ವ್ಯಾಪಾರ ವ್ಯವಹಾರಗಳು ಈ ನಗರದ ಮೂಲಕ ನಡೆಯುತ್ತಿತ್ತು--

   A) **ಕಾನಸ್ಟಾಂಟಿನೋಪಲ್** B) ಕಾಪ್ಪಡ್ C) ಮೆಡಿಟರೇನಿಯನ್ D) ಈಜಿಪ್ಟ್

2. ಆಟೋಮನ್ ಟರ್ಕರು ಕಾನಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡ ವರ್ಷ----

   A) **1453**_ B) 1492 C) 1498 D) 1600

3. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿದವನು---

   A) ಹೆನ್ರಿ B) ಆಲ್ಫೋನ್ಸೊ ಅಲ್ಬುಕರ್ಕ್ C) **ವಾಸ್ಕೋಡಗಾಮ** D) ಥಾಮಸ್ ರೋ

4. ಜಲಮಾರ್ಗದ ಮೂಲಕ ಭಾರತಕ್ಕೆ ಬಂದ ಮೊದಲ ಯುರೋಪಿಯನ್ನರು--

   A) **ಪೋರ್ಚುಗೀಸರು** B) ಡಚ್ಚರು C) ಇಂಗ್ಲೀಷರು D) ಫ್ರೆಂಚರು

5. ನೀಲಿ ನೀರಿನ ನೀತಿಯನ್ನು ಜಾರಿಗೆ ತಂದವನು--

   A) ವಾಸ್ಕೋಡಗಾಮ B) ರಾಬರ್ಟ್ ಕ್ಲೈವ್ C) ಆಲ್ಫೋನ್ಸೊ ಅಲ್ಬುಕರ್ಕ್ D) **ಫ್ರಾನ್ಸಿಸ್ಕೊ ಡಿ ಆಲ್ಮೆಡ**

6. ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ ಎಂದು ಪ್ರಸಿದ್ಧನಾದವನು---

   A) ಜಹಾಂಗೀರ್ B) **ಆಲ್ಫೋನ್ಸೊ ಅಲ್ಬುಕರ್ಕ್** C) ಫ್ರಾನ್ಸಿಸ್ಕೊ ಡಿ ಆಲ್ಮೆಡ D) ಕೌಂಟ್ ಡಿ ಲಾಲಿ

7. ಡಚ್ಚರ ವ್ಯಾಪಾರವು ಸಾಂಬಾರು ದ್ವೀಪಗಳಿಗೆ ಮಾತ್ರ ಸೀಮಿತವಾಗಲು ಕಾರಣ----

   A) ಅರಬ್ಬರೊಂದಿಗಿನ ಪೈಪೋಟಿಯಿಂದ B) ಪೋರ್ಚುಗೀಸರ ಏಕಸ್ವಾಮ್ಯ

   C) **ಇಂಗ್ಲೀಷರು & ಫ್ರೆಂಚರ ಪೈಪೋಟಿ ಎದುರಿಸಲು ಸಾಧ್ಯವಾಗದ್ದರಿಂದ.** D) ಕಾರ್ನಾಟಿಕ್ ಯುದ್ಧಗಳು

8. ಫ್ರಾನ್ಸಿಸ್ಕೊ ಡಿ ಆಲ್ಮೆಡ ನೀಲಿ ನೀರಿನ ನೀತಿಯನ್ನು ಜಾರಿಗೆ ತರಲು ಕಾರಣ---

   A) **ಸಮುದ್ರದ ಮೇಲಿನ ಏಕಸ್ವಾಮ್ಯಕ್ಕೆ ನೌಕಾಶಕ್ತಿ ಬಲಪಡಿಸಲು.** B) ಭೂಮಿ ಮೇಲಿನ ಅಧಿಪತ್ಯಕ್ಕಾಗಿ.

   C) ಭಾರತದೊಂದಿಗೆ ವ್ಯಾಪಾರ ಮರುಸ್ಥಾಪಿಸಲು. D) ಬ್ರಿಟಿಷ್ ಶಕ್ತಿಗೆ ತಡೆಯೊಡ್ಡಲು.

9. ಮೊದಲ ಕಾರ್ನಾಟಿಕ್ ಯುದ್ಧವು ಈ ಒಪ್ಪಂದದೊಂದಿಗೆ ಮುಕ್ತಾಯಗೊಂಡಿತು----

   A) **ಏಕ್ಸ್-ಲಾ-ಚಾಪೆಲ್ ಒಪ್ಪಂದ** B) ಪಾಂಡಿಚೇರಿ ಒಪ್ಪಂದ C) ಮಂಗಳೂರು ಒಪ್ಪಂದ D) ಪ್ಯಾರಿಸ್ ಒಪ್ಪಂದ

10. ಸಿರಾಜ್-ಉದ್-ದೌಲ ಮತ್ತು ಬ್ರಿಟಿಷರ ನಡುವೆ 1757ರಲ್ಲಿ ನಡೆದ ಕದನ---

   A) ವಾಂಡಿವಾಷ್ ಕದನ B) ಬಕ್ಸಾರ್ ಕದನ C) ಎರಡನೇ ಕಾರ್ನಾಟಿಕ್ ಯುದ್ಧ D) **ಪ್ಲಾಸಿ ಕದನ**

11. ಈ ಕೆಳಗಿನವುಗಳಲ್ಲಿ ಪ್ಲಾಸಿ ಕದನಕ್ಕೆ ಕಾರಣವಾದ ಅಂಶ---

   A) ದಸ್ತಕಗಳ ದುರುಪಯೋಗ B) ಅನುಮತಿ ಇಲ್ಲದೆ ಕೋಟೆಯ ದುರಸ್ಥಿ

   C) ಕಪ್ಪು ಕೋಣೆ ದುರಂತ D) **ಮೇಲಿನ ಎಲ್ಲವೂ.**

12. ಬಕ್ಸಾರ್ ಕದನ ನಡೆದ ವರ್ಷ--

   A) 1600 B) 1602 C) **1764** D) 1765

13. ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದವನು---

   A) ಹೆಕ್ಟರ್ ಮನ್ರೋ B) **ರಾಬರ್ಟ್ ಕ್ಲೈವ್** C) ಮೀರ್ ಖಾಸಿಂ D) ಬುಸ್ಸಿ

14. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ನೆರವಿಗೆ ಬಂದ ವೈಜ್ಞಾನಿಕ ಆವಿಷ್ಕಾರಗಳು----

   A) ದಿಕ್ಸೂಚಿ B) ಆಸ್ಟ್ರೋಲೋಬ್ C) ಸಿಡಿಮದ್ದು D) **ಮೇಲಿನ ಎಲ್ಲವೂ**

15. ಕೆಳಗಿನವುಗಳಲ್ಲಿ ಭಾರತದಲ್ಲಿದ್ದ ಫ್ರೆಂಚರ 2 ವ್ಯಾಪಾರ ಕೋಠಿಗಳು ಯಾವುವು? *

   A) ಗೋವಾ-ಪಾಂಡಿಚೇರಿ B) **ಮಾಹೆ-ಪಾಂಡಿಚೇರಿ** C) **ಪಾಂಡಿಚೇರಿ-ಕಲ್ಕತ** D) ಕಲ್ಕತ-ಗೋವಾ

16. ವ್ಯಾಪಾರದ ಹೆಬ್ಬಾಗಿಲು ಎಂದು ಪರಿಗಣಿಸಲ್ಪಟ್ಟಿತ್ತು

A) ಕೊಚ್ಚಿನ್ B) **ಕಾನ್ಸ್ಟಾಂಟಿನೋಪಲ್** C) ಫ್ರಾನ್ಸ್ D) ಪೋರ್ಚುಗಲ್

17. ಪ್ರಾಚೀನ ಕಾಲದಿಂದಲೂ ಭಾರತದಿಂದ ಸಾಗುತ್ತಿದ್ದ ಸರಕು

A) ತಂಬಾಕು B) ಚಹಾ C) **ಮಸಾಲೆ ಪದಾರ್ಥ** D) ಮ್ಯಾಂಗನೀಸ್ ಅದಿರು

18. ಪೋರ್ಚುಗೀಸ್ ನಾವಿಕ ವಾಸ್ಕೋಡಗಾಮನು ಭಾರತದ ಕಲ್ಲಿಕೋಟೆಯನ್ನು ತಲುಪಿದ ವರ್ಷ

A) **1498** B) 1509 C) 1668 D) 1740

19. ಕಾನಸ್ಟಾಂಟಿನೋಪಲ್ ನಗರವನ್ನು ಅಟೋಮನ್ ಟರ್ಕರು ವಶಪಡಿಸಿಕೊಂಡ ವರ್ಷ

A) 1458 B) 1456 C) **1453** D) 1461

20. ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯ ಹೊಂದಿದ್ದವರು

A) ಇಂಗ್ಲೆಂಡ್ B) ಸ್ಪೇನ್ C) ಇಟಲಿ D) **ಅರಬರು**

21. ಯುರೋಪ್ ದೇಶಗಳ ಮೇಲೆ ವ್ಯಾಪಾರದ ಏಕಸ್ವಾಮ್ಯ ಹೊಂದಿದ್ದವರು

A) **ಪೋರ್ಚುಗೀಸರು** B) ಡಚ್ಚರು C) ಇಂಗ್ಲೀಷರು D) ಫ್ರೆಂಚರು

22. ನೀಲಿ ನೀತಿಯನ್ನು ಯಾರು ಜಾರಿಗೆ ತಂದರು

A) **ಫ್ರಾನ್ಸಿಸ್ಕೋ ಡಿ ಅಲ್ಮೆಡ** B) ರಾಬರ್ಟ್ ಕ್ಲೈವ್ C) ಕೌಂಟ್ ಡಿ ಲಾಲಿ D) ಆಲ್ಫೋನ್ಸೊ ಆಲ್ಬುಕರ್ಕ್

23.ಮೂರನೇ ಕರ್ನಾಟಕ ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಯಾಯಿತು

A) **ಪ್ಯಾರಿಸ್** B) ಏಕ್ಸ್-ಲಾ-ಚಾಪೆಲ್ ಒಪ್ಪಂದ C) ಪಾಂಡಿಚೇರಿ ಒಪ್ಪಂದ D) ಮಂಗಳೂರು ಒಪ್ಪಂದ

24. ಬಕ್ಸಾರ್ ಕದನದಲ್ಲಿ ಬ್ರಿಟಿಷ್ ಸೇನೆಯ ನೇತೃತ್ವ ವಹಿಸಿದ ಅಧಿಕಾರಿ ಯಾರು

A) ಆಲ್ಫೋನ್ಸೊ ಆಲ್ಬುಕರ್ಕ್ B) **ಹೆಕ್ಟರ್ ಮನ್ರೋ** C) ರಾಬರ್ಟ್ ಕ್ಲೈವ್ D) ಕೌಂಟ್ ಡಿ ಲಾಲಿ

25 .ಬಂಗಾಳದಲ್ಲಿ ಮುಕ್ತ ವ್ಯಾಪಾರ ನಡೆಸಲು ಕಂಪನಿಗೆ ದಸ್ತಕಗಳನ್ನು ನೀಡಿದ ದೊರೆ ಯಾರು

A) **ಫಾರೂಕಶಿಯಾರ್** B) ರಾಬರ್ಟ್ ಕ್ಲೈವ್ C) ಕೌಂಟ್ ಡಿ ಲಾಲಿ D) ಆಲ್ಫೋನ್ಸೊ ಆಲ್ಬುಕರ್ಕ್

## 2.ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

1. ಪ್ಲಾಸಿ ಮತ್ತು ಬಕ್ಸಾರ ಕದನದ ಮೂಲಕ ಬ್ರಿಟಿಷರು ಈ ಪ್ರಾಂತ್ಯದ ಮೇಲೆ ಸಂಪೂರ್ಣ ರಾಜಕೀಯ ಹಿಡಿತವನ್ನು ಸಾಧಿಸಿದರು

A) **ಬಂಗಾಳ** B) ಕರ್ನಾಟಿಕ್ C) ಮುಂಬಯಿ D) ಹೈದ್ರಾಬಾದ್

2. 1765ರ ಹೊತ್ತಿಗೆ ಬ್ರಿಟಿಷರು ಭಾರತದ ಈ ಭಾಗದ ಮೇಲೆ ಪ್ರಭುತ್ವ ಸಾಧಿಸಿದ್ದರು

A) ದಕ್ಷಿಣಭಾಗ B) **ಪೂರ್ವಭಾಗ** C) ವಾಯುವ್ಯ ಭಾಗ D) ಉತ್ತರ ಭಾಗ

3. ಮೊದಲನೇ ಆಂಗ್ಲೋ-ಮರಾಠಾ ಯುದ್ದದಲ್ಲಿ ಮರಾಠರು ಕಳೆದುಕೊಂಡ ಪ್ರದೇಶ

A) ಪುಣೆ B) ಮುಂಬಯಿ C) **ಅಹಮದಾಬಾದ** D) ಬೆಸ್ಸೀನ್

4. ಮೊದಲನೇ ಆಂಗ್ಲೋ-ಮರಾಠಾ ಯುದ್ದವು ಈ ಒಪ್ಪಂದದೊಂದಿಗೆ ಕೊನೆಯಾಯಿತು

A) ಪುಣೆ ಒಪ್ಪಂದ B) **ಸಾಲ್ಬಾಯ್ ಒಪ್ಪಂದ** C) ಮುಂಬಯಿ ಒಪ್ಪಂದ D) ಬೆಸ್ಸೀನ್ ಒಪ್ಪಂದ

5. ಮೊದಲನೇ ಆಂಗ್ಲೋ-ಮರಾಠಾ ಯುದ್ದದ ನಂತರ ಪೇಶ್ವೆಯಾದವರು

A) ನಾನಾ ಫಡ್ನವೀಸ್ B) **2ನೇ ಮಾಧವರಾವ್** C) ನಾರಾಯಣರಾವ್ D) ರಘುನಾಥರಾವ್

6. ಇವರು ಗವರ್ನರ್ ಜನರಲ್ ಆಗಿ ಭಾರತಕ್ಕೆ ಬಂದ ನಂತರ ಬ್ರಿಟಿಷರ ಸಮ್ರಾಜ್ಯ ವಿಸ್ತರಣೆಯು ದೊಡ್ಡ ಪ್ರಮಾಣದಲ್ಲಾಯಿತು

A) ಲಾರ್ಡ್ ಡಾಲ್ ಹೌಸಿ B) ರಾಬರ್ಟ್ ಕ್ಲೈವ್ C) ಸರ್ ಥಾಮಸ್ ರೋ D) **ಲಾರ್ಡ್ ವೆಲ್ಲಸ್ಲಿ**

7. ಮೊದಲನೇ ಆಂಗ್ಲೋ-ಮರಾಠಾ ಯುದ್ಧದ ನಂತರ ಪೇಶ್ವೆಯಾದವರು

A) ನಾನಾ ಫಡ್ನವೀಸ್ B) **2ನೇ ಮಾಧವರಾವ್** C) ನಾರಾಯಣರಾವ D) ರಘುನಾಥರಾವ್

**8. ಮೊದಲನೇ ಆಂಗ್ಲೋ-ಮರಾಠಾ ಯುದ್ಧದಲ್ಲಿ ಮರಾಠರು ಕಳೆದುಕೊಂಡ ಪ್ರದೇಶ**

A) ಪುಣೆ B) ಮುಂಬೈ C) **ಅಹ್ಮದಾಬಾದ್** D) ಬೆಸ್ಸಿನ್

**9. ಬ್ರಿಟಿಷರು ಅಖಂಡ ಭಾರತವನ್ನು ಗೆಲ್ಲುವ ಕಾರ್ಯ ಪೂರ್ಣಗೊಳಿಸಿದ ವರ್ಷ**

A) 1757–1857 B) **1818–1857** C) 1839–1857 D) 1800–1857

**10. ಸಿಖ್ಖರನ್ನು ಸಂಘಟಿಸುವಲ್ಲಿ ಯಶಸ್ವಿಯಾದವರು**

A) **ರಣಜಿತಸಿಂಗ್** B) ಅರ್ಜುನಸಿಂಗ್ C) ಮಾನಸಿಂಗ್ D) ಗುರು ರಾಮದೇವ

**11. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು**

A) **ಲಾರ್ಡ ವೆಲ್ಲಸ್ಲಿ** B) ಲಾರ್ಡ C) ಮೆಕಾಲೆ D) ಲಾರ್ಡ ಡಾಲಹೌಸಿ

**12. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಮಾಡಿದ ಮೊದಲ ರಾಜ್ಯ ಯಾವುದು?**

A) ಮೈಸೂರು ಸಂಸ್ಥಾನ B) ತಂಜಾವೂರು C) ಗ್ವಾಲಿಯರ್ D) **ಹೈದರಾಬಾದ ಸಂಸ್ಥಾನ**

**13. ನಿರಂತರ ಮೈತ್ರಿ ಒಪ್ಪಂದ ಯಾರ ನಡುವೆ ನಡೆಯಿತು?**

A) **ರಣಜಿತಸಿಂಗ್ ಮತ್ತು ಬ್ರಿಟಿಷರು** B) ಶಿವಾಜಿ ಮತ್ತು ಬ್ರಿಟಿಷರು

C) ಬ್ರಿಟಿಷರು ಮತ್ತು ರಘುನಾಥರಾವ್ D) ಬ್ರಿಟಿಷರು ಮತ್ತು ರಘುನಾಥರಾವ್

**14. ಡಾಲಹೌಸಿಯು ಜಾರಿಗೆ ತಂದ ವಿಸ್ತರಣಾ ನೀತಿ ಯಾವುದು?**

A) **ದತ್ತು ಮಕ್ಕಳಿಗೆ ಹಕ್ಕಿಲ್ಲ** B) ಸಹಾಯಕ ಸೈನ್ಯ ಪದ್ದತಿ

C) ನಿರಂತರ ಮೈತ್ರಿ ಒಪ್ಪಂದ D) ಹೊಸ ರಾಜ್ಯಗಳ ಮೇಲೆ ಯುದ್ಧ

**15. ಮೊದಲನೇ ಆಂಗ್ಲೋ-ಮರಾಠಾ ಯುದ್ಧಕ್ಕೆ ಕಾರಣವೇನು?**

A) ಮರಾಠರು 2ನೇ ಷಾ ಆಲಂನನ್ನು ದೆಹಲಿ ಸಿಂಹಾಸನದಲ್ಲಿ ಕೂಡಿಸಿದ್ದು

B) 2ನೇ ಷಾ ಆಲಂ ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದಗಳನ್ನು ಮರಾಠರಿಗೆ ನೀಡಿದ್ದು

C) ಮರಾಠರ ಬಲಿಷ್ಠ ಪೇಶ್ವೆ ಮಾಧವರಾವನ ಮರಣ

D) **ಮೇಲಿನ ಎಲ್ಲವೂ**

**16) ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದವರು**

A) **ಲಾರ್ಡ ಡಾಲಹೌಸಿ** B) ರಾಬರ್ಟ್ ಕ್ಲೈವ್ C) ಲಾರ್ಡ್ ವೆಲ್ಲಸ್ಲಿ D) ವಾರನ್ ಹೇಸ್ಟಿಂಗ್ಸ್

**17) ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತರಲಾದ ವರ್ಷ**

A) **1848** B) 1798 C) 1802 D) 1845

**18) ಸಹಾಯಕ ಸೈನ್ಯ ಪದ್ಧತಿ ಯಾವಾಗ ಜಾರಿಗೆ ಬಂದಿತು**

A)1848 B)**1798** C) 1818 D)1757

**19) ಬ್ರಿಟಿಷ್ ಮತ್ತು ಸಿಖ್ಖರ ನಡುವೆ ಲಾಹೋರ ಒಪ್ಪಂದಕ್ಕೆ ಸಹಿ ಹಾಕಲಾದ ವರ್ಷ**

A) 1809 B) **1846** C) 1798 D) 1800

**20) ಪೇಶ್ವೆ 2ನೇ ಮಾಧವರಾವ್ ಯಾವ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ದತಿಗೆ ಒಳಪಟ್ಟನು**

A) ಸಾಲ್ಬಾಯ್ ಒಪ್ಪಂದ B) **ಬೆಸ್ಸೀನ್ ಒಪ್ಪಂದ** C) ಪುರಂದರ ಒಪ್ಪಂದ D) ಪುಣೆ ಒಪ್ಪಂದ

## 3.ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

**1) ಕಂಪನಿಯ ನೌಕರರ ಭ್ರಷ್ಟಾಚಾರ ತಡೆಯಲು ಜಾರಿಗೆ ತಂದ ಕಾಯ್ದೆ**

A) **ರೆಗ್ಯುಲೇಟಿಂಗ್ ಕಾಯ್ದೆ** B) ಪಿಟ್ಸ್ ಇಂಡಿಯಾ ಕಾಯ್ದೆ C) ಚಾರ್ಟರ್ ಕಾಯ್ದೆ D) ಭಾರತೀಯ ಪರಿಷತ್ ಕಾಯ್ದೆ

2) 'ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲನಿವಾಸಿಯೂ ಭ್ರಷ್ಟ' ಎಂದು ಹೇಳಿದವನು

A) ಲಾರ್ಡ್ ಡಾಲ್ ಹೌಸಿ B) ಲಾರ್ಡ್ ವೆಲ್ಲಸ್ಲಿ C) **ಕಾರ್ನವಾಲೀಸ್** D) ವಾರನ್ ಹೇಸ್ಟಿಂಗ್ಸ್

3) ಭಾರತದಲ್ಲಿ ಮೊದಲ ಪೋಲೀಸ್ ಕಾಯ್ದೆ ಜಾರಿಗೊಳಿಸಿದ ವರ್ಷ

A) 1781 B) **1861** C) 1857 D) 1793

4) 'ಮಹಲ್' ಎಂದರೆ ........

A) ಜಿಲ್ಲೆ B) **ತಾಲ್ಲೂಕು** C) ಹಳ್ಳಿ D) ಹೋಬಳಿ

5) ಈಸ್ಟ್ ಇಂಡಿಯಾ ಕಂಪನಿಯು ವಾರ್ಷಿಕವಾಗಿ ಬ್ರಿಟಿಷ್ ಸರ್ಕಾರಕ್ಕೆ ಪಾವತಿಸಬೇಕಾದ ವಂತಿಗೆ

A) 2 ಲಕ್ಷ ಪೌಂಡ್ B) **4 ಲಕ್ಷ ಪೌಂಡ್** C) 6 ಲಕ್ಷ ಪೌಂಡ್ D) 8 ಲಕ್ಷ ಪೌಂಡ್

6) ಗರಿಷ್ಟ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದ್ದು ಈ ಪದ್ಧತಿಯಿಂದಲೇ

A) ಮಹಲ್ವಾರಿ B) ಖಾಯಂ ಜಮೀನ್ದಾರಿ ಪದ್ದತಿ C) **ರೈತವಾರಿ** D) ಯಾವೂದೂ ಅಲ್ಲ

7) ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ ವ್ಯವಸ್ಥೆ ಜಾರಿಗೆ ತಂದ ಕಾಯ್ದೆ

A) 1892 ಭಾರತೀಯ ಪರಿಷತ್ ಕಾಯ್ದೆ B) 1919 ಭಾರತೀಯ ಪರಿಷತ್ ಕಾಯ್ದೆ

C) **1909 ಭಾರತೀಯ ಪರಿಷತ್ ಕಾಯ್ದೆ** D) 1935 ಭಾರತ ಸರ್ಕಾರದ ಕಾಯ್ದೆ

8) ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾದ ವರ್ಷ

A) 1919 B) **1935** C) 1947 D) 1948

9) ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ವಿಶೇಷ ಪ್ರೋತ್ಸಾಹ ನೀಡಿದ ಗವರ್ನರ್ ಜನರಲ್

A) ಲಾರ್ಡ್ ಡಾಲ್ ಹೌಸಿ B) **ಲಾರ್ಡ್ ವಿಲಿಯಂ ಬೆಂಟಿಂಕ್** C) ಕಾರ್ನವಾಲೀಸ್ D) ವಾರನ್ ಹೇಸ್ಟಿಂಗ್ಸ್

10) ಭಾರತದಲ್ಲಿ ನಾಗರಿಕ ಸೇವಾ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ ಆರಂಭಿಸಿದ ವರ್ಷ

A) 1800 B) 1802 C) 1947 D) **1853**

11) ಸೂಪರಿಂಟೆಂಡೆಂಟ್ ಆಫ್ ಪೋಲಿಸ್(ಎಸ್ ಪಿ) ಹುದ್ದೆ ಸೃಷ್ಟಿಸಿದವರು

A) **ಲಾರ್ಡ್ ಕಾರ್ನವಾಲೀಸ್** B) ಲಾರ್ಡ್ ವೆಲ್ಲಸ್ಲಿ C) ವಾರನ್ ಹೇಸ್ಟಿಂಗ್ಸ್ D) ಲಾರ್ಡ್ ಡಾಲಹೌಸಿ

12) ಬ್ರಿಟಿಷರು ಭಾರತೀಯರನ್ನು ಒಡೆದು ಆಳಲು ಬಳಸಿಕೊಂಡ ಕಾಯ್ದೆ

A) 1892ರ ಭಾರತೀಯ ಪರಿಷತ್ ಕಾಯ್ದೆ B) **1909ರ ಭಾರತೀಯ ಪರಿಷತ್ ಕಾಯ್ದೆ**

C) 1935ರ ಭಾರತ ಸರ್ಕಾರದ ಕಾಯ್ದೆ D) 1919ರ ಭಾರತೀಯ ಪರಿಷತ್ ಕಾಯ್ದೆ

13) ಸರ್ಕಾರ ಮತ್ತು ರೈತರ ಮಧ್ಯೆ ನೇರ ಸಂಪರ್ಕ ಕಲ್ಪಿಸುವ ಕಂದಾಯ ಪದ್ದತಿ

A) ಮಹಲ್ವಾರಿ ಪದ್ಧತಿ B) ಖಾಯಂ ಜಮಿನ್ದಾರಿ ಪದ್ದತಿ C) **ರೈತವಾರಿ ಪದ್ಧತಿ** D) ಮೇಲಿನ ಎಲ್ಲವೂ

14) ಇಂಗ್ಲೆಂಡ್ ಸರ್ಕಾರವು ಕಂಪನಿಯ ಪರವಾನಿಗೆಯನ್ನು ಪ್ರತಿ ಎಷ್ಟು ವರ್ಷಗಳಿಗೊಮ್ಮೆ ನವೀಕರಣ ಮಾಡಲಾಗುತ್ತಿತ್ತು

A) 10 B) **20** C) 30 D) 15

15) ಬಂಗಾಳದ ಗವರ್ನರನನ್ನು ಭಾರತದ ಗವರ್ನರ ಜನರಲ್ ನನ್ನಾಗಿ ನಾಮಕರಣ ಮಾಡಿದ ಕಾಯ್ದೆ

A) 1813ರ ಚಾರ್ಟರ್ ಕಾಯ್ದೆ B) **1833ರ ಚಾರ್ಟರ್ ಕಾಯ್ದೆ**

C) 1853ರ ಚಾರ್ಟರ್ ಕಾಯ್ದೆ D) 1773ರ ರೆಗ್ಯುಲೇಟಿಂಗ್ ಕಾಯ್ದೆ

16) ದಿವಾನಿ ಅದಾಲತ್ ಮತ್ತು ಫೌಜುಧಾರಿ ಎಂಬ ನಾಗರೀಕ & ಅಪರಾಧ ನ್ಯಾಯಾಲಯಗಳನ್ನು ಜಾರಿಗೆ ತಂದವರು

A) ಡಾಲಹೌಸಿ B) ಕಾರ್ನವಾಲೀಸ್ C) ಚಾರ್ಲ್ಸ್ ಮೆಟಕಾಫ್ D) **ವಾರನ್ ಹೇಸ್ಟಿಂಗ್ಸ್**

17) ಅಲೆಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ

A) **ರೈತವಾರಿ ಪದ್ದತಿ** B) ಮಹಲ್ವಾರಿ ಪದ್ಧತಿ C) ಖಾಯಂ ಜಮೀನ್ದಾರಿ ಪದ್ಧತಿ D) ಮೇಲಿನ ಎಲ್ಲವೂ

18) ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ ,ಸಾಲದಲ್ಲೇ ಬದುಕಿ,ಸಾಲದಲ್ಲೇ ಸತ್ತರು".ಎಂದು ಹೇಳಿದ ಬ್ರಿಟಿಷ್ ಅಧಿಕಾರಿ

A) ಡಾಲಹೌಸಿ B) ಕಾರ್ನವಾಲೀಸ್ C) **ಚಾರ್ಲ್ಸ್ ಮೆಟಕಾಫ್** D) ವಾರನ್ ಹೇಸ್ಟಿಂಗ್ಸ್

19) 1909ರ "ಮಿಂಟೋ–ಮಾರ್ಲೆ ಸುಧಾರಣೆಗಳು" ಭಾರತದ ವಿಭಜನೆಗೆ ನಾಂದಿ ಹಾಡಿದವು.ಏಕೆಂದರೆ ಅದು.....

A) ದ್ವಿಸದನ ಶಾಸಕಾಂಗ ರಚನೆಗೆ ಅವಕಾಶ ನೀಡಿತು B) ಶಾಸನ ಸಭೆಗೆ ಹಿಂದೂಗಳ ಸಂಖ್ಯೆ ಹೆಚ್ಚಳ ಮಾಡಿತು

C) **ಮುಸ್ಲಿಂರಿಗೆ "ಪ್ರತ್ಯೇಕ ಚುನಾವಣಾ ಮತಗಟ್ಟೆ" ಮಾಡಿತು** D) ಕಂಪನಿಗಳಿಗೆ ಮುಕ್ತ ವ್ಯಾಪಾರಕ್ಕೆ ಅವಕಾಶ ನೀಡಿತು

20) ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ

A) **ವಾರನ್ ಹೇಸ್ಟಿಂಗ್ಸ್** B) ಚಾರ್ಲ್ಸ್ ಗ್ರಾಂಟ್ C) ಜೊನಾಥನ್ ಗ್ರಾಂಟ್ಸ್ D) ಲಾರ್ಡ್ ಮೆಕಾಲೆ

21) ಭಾರತದಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಶಿಫಾರಸ್ಸು ಮಾಡಿದ ಸಮಿತಿ ಯಾವುದು?

A) **ಸರ್ ಚಾರ್ಲ್ಸ್ ವುಡ್ ಸಮಿತಿ** B) ಮೆಕಾಲೆ ಸಮಿತಿ C) ಚಾರ್ಲ್ಸ ಗ್ರಾಂಟ್ ವರದಿ D) ಪೀಲ್ ಸಮಿತಿ

22) ಈಸ್ಟ್ ಇಂಡಿಯಾ ಕಂಪನಿಯಿಂದ ಬರುತ್ತಿದ್ದ ತೆರಿಗೆಯ ಹಣವನ್ನು "ಅಪರಾಧ ತೆರಿಗೆ" ಎಂದು ಟೀಕಿಸಿದವನು

A) ಅಲೆಕ್ಸಾಂಡರ್ ರೀಡ್ B) ಚಾರ್ಲ್ಸ ಗ್ರಾಂಟ್ C) **ಎಡ್ಮಂಡ್ ಬರ್ಕ್** D) ಜೇಮ್ಸ ಥಾಮ್ಸನ್

23) ರೆಗ್ಯುಲೇಟಿಂಗ್ ಕಾಯ್ದೆ ಜಾರಿಗೆ ಬಂದ ವರ್ಷ

A) **1773** B) 1784 C) 1909 D) 1919

24) ಕಂಪನಿಯ ಆಡಳಿತವನ್ನು ಬ್ರಿಟಿಷ್ ರಾಣಿಗೆ ವರ್ಗಾಯಿಸಿದ ಕಾಯ್ದೆ

A) **1858ರ ಭಾರತ ಸರ್ಕಾರದ ಕಾಯ್ದೆ** B) 1833ರ ಚಾರ್ಟರ್ ಕಾಯ್ದೆ

C) 1892ರ ಭಾರತೀಯ ಪರಿಷತ್ ಕಾಯ್ದೆ D) 1935ರ ಭಾರತ ಸರ್ಕಾರದ ಕಾಯ್ದೆ

25) 'ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ,ಅಭಿರುಚಿ,ಅಭಿಪ್ರಾಯ ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲೀಷರಾಗುವಂತೆ ಶಿಕ್ಷಣ ರೂಪಿಸುವದು' ಇದು ಯಾವ ವರದಿಯ ಸಾರಾಂಶವಾಗಿತ್ತು?

A) ಪೀಲ್ ವರದಿ B) ಚಾರ್ಲ್ಸ್ ವುಡ್ ನ ವರದಿ C) **ಮೆಕಾಲೆ ವರದಿ** D) ಜೋನಾಥನ್ ಡಂಕನ್ ವರದಿ

## 4.ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

1. ಭಾರತದ ಚರಿತ್ರೆಯಲ್ಲಿ 'ರಾಜಕೀಯ ಸಮಸ್ಯೆಗಳ ಶತಮಾನ' ಎಂದು ಕರೆಯಲಾಗುವ ಕಾಲ

A) 12ನೇ ಶತಮಾನ B) **18ನೇ ಶತಮಾನ** C) 19ನೇ ಶತಮಾನ D) 20ನೇ ಶತಮಾನ

2. 18ನೇ ಶತಮಾನದಲ್ಲಿ ಮೈಸೂರಿನ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರಿದ ಘಟನೆಯೆಂದರೆ

A) ಹೈದರಾಲಿ ಮತ್ತು ಟಿಪ್ಪುವಿನ ಏಳಿಗೆ B) ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡಿದ್ದು

C) **ಚಿಕ್ಕದೇವರಾಜ ಒಡೆಯರ ಮರಣ** D) ಆಂಗ್ಲೋ–ಮಾರಾಠ ಯುದ್ಧಗಳು

3. ಮೊದಲನೇ ಆಂಗ್ಲೋ–ಮೈಸೂರು ಯುದ್ಧ ನಡೆದ ವರ್ಷ

A) **1767–69** B) 1780–82 C) 1790–92 D) 1765–69

4. ಮೊದಲನೇ ಆಂಗ್ಲೋ–ಮೈಸೂರು ಯುದ್ಧವು ಈ ಒಪ್ಪಂದದೊಂದಿಗೆ ಕೊನೆಯಾಯಿತು

A) ಮಂಗಳೂರು B) ಮುಂಬಯಿ C) ಶ್ರೀರಂಗಪಟ್ಟಣ D) **ಮದ್ರಾಸ್**

5.ಮಾಹೆಯು ಯಾರ ವಸಾಹತುವಾಗಿತ್ತು

A) ಬ್ರಿಟಿಷರ B) ಡಚ್ಚರ C) **ಫ್ರೆಂಚರ** D) ಪೋರ್ಚುಗೀಸರ

6. 2ನೇ ಆಂಗ್ಲೋ–ಮೈಸೂರು ಯುದ್ದವು ಈ ಒಪ್ಪಂದದೊಂದಿಗೆ ಕೊನೆಯಾಯಿತು.

A) ಮದ್ರಾಸ B) **ಮಂಗಳೂರು** C) ಮುಂಬಯಿ D) ಶ್ರೀರಂಗಪಟ್ಟಣ

7. 'ಬ್ರಿಟಿಷರು ಪರಮ ವೈರಿಗಳು ಅವರನ್ನು ಭಾರತದಿಂದ ಓಡಿಸುವುದು ತನ್ನ ಆದ್ಯ ಕರ್ತವ್ಯ' ಎಂದು ತಿಳಿದಿದ್ದವರು.

A) **ಟಿಪ್ಪು ಸುಲ್ತಾನ** B) ಹೈದರಾಲಿ C) ನಿಜಾಮ D) ನಾರಾಯಣರಾವ್

8. ಶ್ರೀರಂಗಪಟ್ಟಣದ ಒಪ್ಪಂದದ ಮೂಲಕ ಈ ಯುದ್ಧವು ಕೊನೆಗೊಂಡಿತು.

A) 1ನೇ ಆಂಗ್ಲೋ–ಮೈಸೂರು ಯುದ್ಧ B) 2ನೇ ಆಂಗ್ಲೋ–ಮೈಸೂರು ಯುದ್ಧ
C) **3ನೇ ಆಂಗ್ಲೋ–ಮೈಸೂರು ಯುದ್ಧ** D) 4ನೇ ಆಂಗ್ಲೋ–ಮೈಸೂರು ಯುದ್ಧ

9. ಯಾರ ಮರಣವು ಬ್ರಿಟಿಷರಿಗೆ ಇಡೀ ಭಾರತವೇ ಕೈವಶವಾದ ಸಂತೋಷ ತಂದಿತು.

A) ಹೈದರಾಲಿ B) **ಟಿಪ್ಪು ಸುಲ್ತಾನ** C) ದೋಂಡಿಯಾ ವಾಘ D) ರಾಣಿ ಚೆನ್ನಮ್ಮ

10. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯಂತೆ ಕಿತ್ತೂರಿನ ಆಡಳಿತ ವಶಪಡಿಸಿಕೊಳ್ಳಲಾರಂಭಿಸಿದ ಬ್ರಿಟಿಷ್ ಅಧಿಕಾರಿ

A) ಡಯರ್ B) **ಥ್ಯಾಕರೆ** C) ಕರ್ನಲ್ ಡೀಕ್ D) ಕ್ಯಾಂಪಬೆಲ್

11. ಥ್ಯಾಕರೆಯು ಕಿತ್ತೂರಿನ ಸಂಸ್ಥಾನವನ್ನು ವಶಕ್ಕೆ ಪಡೆಯಲು ಸಹಾಯಕವಾದ ಅಂಶ

A) **ಸಹಾಯಕ ಸೈನ್ಯ ಪದ್ಧತಿ** B) ಕಿತ್ತೂರಿನ ದುರಾಡಳಿತ C) **ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ** D) ಕಿತ್ತೂರಿನ ಸಶಸ್ತ್ರ ಬಂಡಾಯ

12. ಸಂಗೊಳ್ಳಿ ರಾಯಣ್ಣನನ್ನು ಗಲ್ಲಿಗೇರಿಸಿದ ಸ್ಥಳ

A) ರಾಯಗಢ B) ಸಂಗೊಳ್ಳಿ C) **ನಂದಗಢ** D) ಬೈಲಹೊಂಗಲ

13. ಸಂಗೊಳ್ಳಿ ರಾಯಣ್ಣನ ಜೀವನ ಮತ್ತು ದೇಶಪ್ರೇಮವನ್ನು ಆ ಪ್ರದೇಶದ.............ಇಂದಿಗೂ ಜೀವಂತಗೊಳಿಸಿವೆ.

A) ಸ್ಮಾರಕಗಳು B) ಪುರಾಣಗಳು C) ಶಾಸನಗಳು D) **ಲಾವಣಿಗಳು**

14. ಅಮರ ಸುಳ್ಯ ಬಂಡಾಯವು ಮೂಲತಃ.............ಬಂಡಾಯವಾಗಿದೆ

A) ಶಸ್ತ್ರರಹಿತ ಬಂಡಾಯ B) **ರೈತ ಬಂಡಾಯ** C) ಸೈನಿಕ ಬಂಡಾಯ D) ಕಾರ್ಮಿಕ ಬಂಡಾಯ

15. ಕೊಡಗಿನಲ್ಲಿ ಸಶಸ್ತ್ರ ಬಂಡಾಯ ಸಂಘಟಿಸಿದವರು.

A) **ಸ್ವಾಮಿ ಅಪರಾಂಪರ,ಕಲ್ಯಾಣಸ್ವಾಮಿ,ಪುಟ್ಟಬಸಪ್ಪ** B) ವೆಂಕಟಪ್ಪನಾಯಕ,ರಾಯಣ್ಣ,ವೀರಪ್ಪ
C) ಕಿತ್ತೂರ ಚೆನ್ನಮ್ಮ,ವೀರಪ್ಪ, ಪುಟ್ಟಬಸಪ್ಪ D) ಸ್ವಾಮಿ ಅಪರಾಂಪರ,ಟಿಪ್ಪು ಸುಲ್ತಾನ್,ಹೈದರಾಲಿ

16. ಹಾಲೇರಿ ವಂಶದ ಅರಸ..................ನನ್ನು 1834ರಲ್ಲಿ ಪದಚ್ಯುತಿಗೊಳಿಸಿದರು.

A) ಪುಟ್ಟಬಸಪ್ಪ B) ಸ್ವಾಮಿ ಅಪರಾಂಪರ C) ವೀರಪ್ಪ D) **ಚಿಕ್ಕವೀರ ರಾಜೇಂದ್ರ**

17. ಹಲಗಲಿ ..................ವು ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿತ್ತು.

A) ಸುರಪುರ B) **ಮುಧೋಳ** C) ಕೊಡಗು D) ಕಿತ್ತೂರು

18. ಕೊಪ್ಪಳದಲ್ಲಿ ಬ್ರಿಟಿಷರ ವಿರುದ್ಧ ಬಂಡಾಯವೆದ್ದ ನಾಯಕ

A) ಪುಟ್ಟಬಸಪ್ಪ B) ಮಲ್ಲಪ್ಪ C) ವೆಂಕಟಪ್ಪ D) **ವೀರಪ್ಪ**

19. ರಾಣಿ ಚೆನ್ನಮ್ಮಳ ಅಧಿಕಾರದಲ್ಲಿ ಧಾರವಾಡದ ಕಲೆಕ್ಟರ್ ಮತ್ತು ಪೊಲಿಟಿಕಲ್ ಎಜೆಂಟ್ ಆಗಿದ್ದವರು.

A) ಡಯರ್ B) **ಥ್ಯಾಕರೆ** C) ಕರ್ನಲ್ ಡೀಕ್ D) ಕ್ಯಾಂಪಬೆಲ್

20. ಸಂಗೊಳ್ಳಿ ರಾಯಣ್ಣನನ್ನು ಹಿಡಿಯಲು ಬ್ರಿಟಿಷರಿಗೆ ಸಹಾಯ ಮಾಡಿದವರು.

A) ದೇಸಾಯಿಗಳ B) ದೋಂಡಿಯಾ ವಾಘ C) ಪುಟ್ಟಬಸಪ್ಪ D) **ಅಮಲ್ದಾರ ಕೃಷ್ಣರಾಯ**

## 5.ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

1) ಭಾರತದಲ್ಲಿ ಈ ಕಾಲವನ್ನು ನವೋದಯದ ಕಾಲವೆಂದು ಪರಿಗಣಿಸಲಾಗಿದೆ

A) 12ನೇ ಶತಮಾನ B) 18ನೇ ಶತಮಾನ C) **19ನೇ ಶತಮಾನ** D) 20ನೇ ಶತಮಾನ

2) ಬ್ರಹ್ಮಸಮಾಜ ಸ್ಥಾಪನೆಯಾದ ವರ್ಷ.....

A) ಸಾ.ಶ 1890 B) ಸಾ.ಶ 1875 C) **ಸಾ.ಶ 1828** D) ಸಾ.ಶ 1867

3) **ಹೊಂದಿಸಿ ಬರೆಯಿರಿ**

| ಅ | ಆ |
|---|---|
| ಎ)ಬ್ರಹ್ಮ ಸಮಾಜ | 1.ಸಾ.ಶ 1875 |
| ಬಿ)ಆರ್ಯ ಸಮಾಜ | 2.ಸಾ.ಶ 1897 |
| ಸಿ)ಸತ್ಯಶೋಧಕ ಸಮಾಜ | 3.ಸಾ.ಶ 1828 |
| ಡಿ)ರಾಮಕೃಷ್ಣ ಮಿಶನ್ | 4.ಸಾ.ಶ 1873 |

A) (ಎ–1, ಬಿ–2, ಸಿ–3, ಡಿ–4,) **B) (ಎ–3, ಬಿ–1, ಸಿ–4, ಡಿ–2,)**

C) (ಎ–2, ಬಿ–4, ಸಿ–3, ಡಿ–1,) D) (ಎ–4, ಬಿ–2, ಸಿ–3, ಡಿ–1,)

4) **'ನ್ಯೂ ಇಂಡಿಯಾ' ಪತ್ರಿಕೆಯನ್ನು ಆರಂಭಿಸಿದವರು**

A) ರಾಜಾರಾಮ್ ಮೋಹನರಾಯ B) ಮಹಾತ್ಮಾ ಗಾಂಧೀಜಿ C) **ಆನಿಬೆಸೆಂಟ್** D) ದಯಾನಂದ ಸರಸ್ವತಿ

5) **ಯುವ ಬಂಗಾಳಿ ಚಳುವಳಿಯನ್ನು ಆರಂಭಿಸಿದವರು**

A) ಎಂ ಜಿ ರಾನಡೆ B) ಆರ್ ಜಿ ಭಂಢಾರಕರ್ C) **ಡಿರೇಜಿಯೋ ಹೆನ್ರಿ ವಿವಿಯನ್** D) ಆನಿಬೆಸೆಂಟ್

6) **"ವೇದಗಳಿಗೆ ಮರಳಿ" ಎಂಬ ಸಂದೇಶವನ್ನು ನೀಡಿದವರು.**

A) ರಾಜಾರಾಮ್ ಮೋಹನರಾಯ B) ಆತ್ಮಾರಾಂ ಪಾಂಡುರಂಗ

C) ಸ್ವಾಮಿ ವಿವೇಕಾನಂದ D) **ದಯಾನಂದ ಸರಸ್ವತಿ**

7) **ಇವರು ಆರ್ಯಸಮಾಜದ ತತ್ವಗಳಿಂದ ಪ್ರೇರಣೆಗೊಂಡ ಸ್ವಾತಂತ್ರ್ಯ ಹೋರಾಟಗಾರರಾಗಿದ್ದಾರೆ.**

A) ಬಾಲಗಂಗಾಧರ ತಿಲಕರು B) ಭಗತ್ ಸಿಂಗ C) **ಲಾಲಾ ಲಜಪತರಾಯ್** D) ವೀರ ಸಾವರ್ಕರ್

8) **"ಶುದ್ಧಿ ಚಳುವಳಿ"ಯು ಈ ಸಮಾಜದ ಒಂದು ಭಾಗವಾಗಿದೆ.**

A) **ಆರ್ಯ ಸಮಾಜ** B) ಪ್ರಾರ್ಥನಾ ಸಮಾಜ C) ಸತ್ಯಶೋಧಕ ಸಮಾಜ D) ಬ್ರಹ್ಮ ಸಮಾಜ

9) **ಜೋತಿಭಾ ಫುಲೆಯವರ ತತ್ವಗಳಿಂದ ಪ್ರಭಾವಿತರಾದವರು**

A) ಗಾಂಧೀಜಿ B) ನೆಹರು C) ದಾದಾಬಾಯಿ ನವರೋಜಿ D) **ಡಾ. ಬಿ ಆರ್ ಅಂಬೇಡ್ಕರ್**

10) **1875 ರಲ್ಲಿ ಮಹ್ಮದನ್ ಆಂಗ್ಲೋ –ಓರಿಯಂಟಲ್ ಕಾಲೇಜು ಸ್ಥಾಪನೆಯಾದ ಸ್ಥಳ**

A) ದೆಹಲಿ B) ಕೊಲ್ಕತ್ತಾ C) ಮುಂಬೈ D) **ಅಲಿಘರ್**

11) **"ಯಾರ ಆತ್ಮ ಬಡವರಿಗಾಗಿ ಮಿಡಿಯುವದೋ ಅವನೇ ಮಹಾತ್ಮ" ಎಂದು ಹೇಳಿದವರು.**

A) ರಾಮಕೃಷ್ಣ ಪರಮಹಂಸ B) ಜೋತಿಭಾ ಫುಲೆ C) **ಸ್ವಾಮಿ ವಿವೇಕಾನಂದ** D) ಗಾಂಧೀಜಿ

12) **ಹೊಂದಿಸಿ ಬರೆಯಿರಿ**

| ಅ | ಆ |
|---|---|
| ದಯಾನಂದ ಸರಸ್ವತಿ | ಸತ್ಯಶೋಧಕ ಸಮಾಜ |
| ಆತ್ಮಾರಾಂ ಪಾಂಡುರಂಗ | ಪ್ರಾರ್ಥನಾ ಸಮಾಜ |
| ಜೋತಿಭಾ ಫುಲೆ | ಅಲಿಘರ್ ಚಳುವಳಿ |
| ಸರ್ ಸೈಯದ್ ಅಹ್ಮದ್ ಖಾನ್ | ಆರ್ಯ ಸಮಾಜ |

A) (ಎ–1, ಬಿ–2, ಸಿ–3, ಡಿ–4,) B) (ಎ–3, ಬಿ–1, ಸಿ–4, ಡಿ–2,)

C) (ಎ–2, ಬಿ–4, ಸಿ–3, ಡಿ–1,) **D) (ಎ–4, ಬಿ–2, ಸಿ–1, ಡಿ–3,)**

13) **ಸ್ವಾಮಿ ವಿವೇಕಾನಂದರ ಸಲಹೆಯಂತೆ ಅಸ್ಪೃಶ್ಯ ವರ್ಗದ ಮಕ್ಕಳಿಗೆ ಶಾಲೆಯನ್ನು ಆರಂಭಿಸಿದ ಮೈಸೂರಿನ ಮಹಾರಾಜರೆಂದರೆ....**

A) ನಾಲ್ವಡಿ ಕೃಷ್ಣರಾಜರು B) ಜಯಚಾಮರಾಜ ಒಡೆಯರು

C) **10ನೇ ಚಾಮರಾಜ ಒಡೆಯರು** D) ಮುಮ್ಮಡಿ ಕೃಷ್ಣರಾಜ ಒಡೆಯರು

**14) ಥಿಯೋಸಾಫಿಕಲ್ ಸೊಸೈಟಿಯ ಕೇಂದ್ರ ಕಚೇರಿ ಇರುವ ಸ್ಥಳ**

A) ಮೈಸೂರು B) **ಅಡ್ಯಾರ** C) ಮುಂಬೈ D) ಕೊಲ್ಕತಾ

**15) "ಐಹಿಕ ಸಂಪತ್ತಿನ ಮೇಲೆ ನಿಂತಿರುವ ಸಂಸ್ಕೃತಿಗಿಂತ ಆಧ್ಯಾತ್ಮಿಕ ಶಕ್ತಿಯ ಮೇಲ ನಿಂತರುವ ಭಾರತದ ಸಂಸ್ಕೃತಿ ಶ್ರೇಷ್ಠವಾದದದ್ದು" ಎಂದು ಪ್ರತಿಪಾದಿಸಿದವರು.**

A) ರಾಮಕೃಷ್ಣ ಪರಮಹಂಸ B) ರಾಜಾರಾಮ್ ಮೋಹನರಾಯ್ C) **ಆನಿಬೆಸೆಂಟ್** D) ನಾರಾಯಣ ಗುರು

**16) "ಧರ್ಮ ಪರಪಾಲನಾ ಯೋಗಂ" ಸಾಮಾಜಿಕ ಚಳುವಳಿಯನ್ನು ಆರಂಭಿದವರು**

A) ರಾಮಕೃಷ್ಣ ಪರಮಹಂಸ B) ರಾಜಾರಾಮ್ ಮೋಹನರಾಯ್ C) ದಯಾನಂದ ಸರಸ್ವತಿ D) **ನಾರಾಯಣ ಗುರು**

**17) "ದ್ರಾವಿಡ ಕಳಗಂ" ಸಂಘಟನೆಯನ್ನು ಹುಟ್ಟು ಹಾಕಿದವರು.**

A) **ಪೆರಿಯಾರ್** B) ಆನಿಬೆಸೆಂಟ್ C) ನಾರಾಯಣ ಗುರು D) ಆತ್ಮಾರಾಂ ಪಾಂಡುರಂಗ

**19 "ಗುಲಾಮಗಿರಿ" ಗ್ರಂಥದ ಕರ್ತೃ**

A) ಸ್ವಾಮಿ ವಿವೇಕಾನಂದ B) ದಯಾನಂದ ಸರಸ್ವತಿ C) ಆತ್ಮಾರಾಂ ಪಾಂಡುರಂಗ D) **ಜೋತಿಭಾ ಫುಲೆ**

**20) ಚಿಕ್ಯಾಗೋ ವಿಶ್ವಧರ್ಮ ಸಮೇಳನ ನಡೆದ ವರ್ಷ**

A) 1863 B) **1893** C) 1886 D) 1900

## 6.ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ 1857

**1. ಸಾ.ಶ. 1857ರ ದಂಗೆಯನ್ನು ಬ್ರಿಟಿಷ ಇತಿಹಾಸಕಾರರು ..........ಎಂದು ಕರೆದರು.**

A) ಪ್ರಥಮ ಸ್ವಾತಂತ್ರ್ಯ ಸಂಗ್ರಾಮ B) **ಸಿಪಾಯಿ ದಂಗೆ** C) ಕ್ರಾಂತಿ D) ತಾತ್ಕಾಲಿಕ ಹೋರಾಟ

**2. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಭಾರತೀಯರು ಮೊದಲು ಬಂಡಾಯವೆದ್ದ ಸ್ಥಳ**

A) ದೆಹಲಿ B) ನಾಗಪೂರ C) ಕೋಲ್ಕತ್ತಾ D) **ಬ್ಯಾರಕಪುರ**

**3. ಈ ದೇಶ ಪ್ರೇಮಿಯು ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದ ಭಾರತೀಯ ಯೋಧ**

A) **ಮಂಗಲಪಾಡೆ** B)ನಾನಾಸಾಹೇಬ C) ತಾತ್ಯಾಟೊಪೆ D) ವಿಜಯ ಪಾಂಡೆ

4. **ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ..........ಇವರನ್ನು ಭಾರತದ ಚಕ್ರವರ್ತಿಯೆಂದು ಘೋಷಿಸಿದರು**

A) ನಾನಾಸಾಹೇಬ B) **2ನೇ ಬಹದ್ದೂರ ಷಾ** C) ರಾಣಿ ಲಕ್ಷ್ಮೀಬಾಯಿ D) ಔದ್ ನವಾಬ

**5. ಭಾರತದಲ್ಲಿ ಬ್ರಿಟಿಷರ ಪ್ರಮುಖ ಸೇನಾ ನೆಲೆ**

A) ದೆಹಲಿ B) ನಾಗಪೂರ C) ಕೋಲ್ಕತ್ತಾ D) **ಮೀರತ್**

**6. ಈ ಕೆಳಗಿನ ಯಾವ ಘಟನೆಯು ಸ್ವಾತಂತ್ರ್ಯ ಸಂಗ್ರಾಮದ ಬೀಜಾಂಕುರಕ್ಕೆ ನಾಂದಿಯಾಯಿತು**

A) ಬ್ರಿಟಿಷ್ ಅಧಿಕಾರಿಯನ್ನು ಕೊಂದಿದ್ದು B)ಬ್ಯಾರಕಪುರದ ಸೈನಿಕರು ಬ್ರಿಟಿಷರ ವಿರುದ್ಧ ಬಂಡಾಯವೆದ್ದಿದ್ದು C)ಎನಫೀಲ್ಡ್ ಬಂದೂಕಿಗೆ ತುಪಾಕಿಯನ್ನು ಬಳಸಲು ಆದೇಶಿಸಿದ್ದು D)**ಮೀರತ್ ನಲ್ಲಿ ಬಂಧಿತರಾಗಿದ್ದ ಭಾರತೀಯ ಸಿಪಾಯಿಗಳನ್ನು ಬಿಡುಗಡೆಗೊಳಿಸಿದರು**

**7. ಝಾನ್ಸಿ ರಾಣಿಯು ಬ್ರಟಿಷರ ವಿರುದ್ಧ ಯುದ್ಧದಲ್ಲಿ ವಶಪಡಿಸಕೊಂಡ ಸ್ಥಳ**

A) ಮೀರತ್ B) ನಾಗಪುರ C)**ಗ್ವಾಲಿಯರ್** D) ಬ್ಯಾರಕಪುರ

**8. 1857ರ ದಂಗೆಯನ್ನು ಭಾರತೀಯರು .......... ಎಂದು ಕರೆದರು**

A) **ಸ್ವಾತಂತ್ರ್ಯ ಸಂಗ್ರಾಮ** B) ರಾಜಕೀಯ ದಂಗೆ C) ಸಿಫಾಯಿ ದಂಗೆ D) ರಾಜಕೀಯ ಕ್ರಾಂತಿ

9. ತಂಜಾವೂರು ಮತ್ತು ಕರ್ನಾಟಿಕ ನವಾಬರು ಬ್ರಿಟಿಷರ ವಿರುದ್ಧ ಅಸಮಾಧಾನಗೊಳ್ಳಲು ಕಾರಣ

A) ಸಹಾಯಕ ಸೈನ್ಯ ಪದ್ಧತಿ B) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ C) ಅಧಿಕಾರದಿಂದ ಪದಚ್ಯುತಿ **D)ರಾಜ ಪದವಿಯ ರದ್ಧತಿ**

10. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯಿಂದ ವಿಶೇಷವಾಗಿ ಭಾರತದಲ್ಲಿ ಅವನತಿ ಹೊಂದಿದ ಕೈಗಾರಿಕೆಗಳು

A) ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಗಳು B) ಗೃಹ ಮತ್ತು ಸಣ್ಣ ಕೈಗಾರಿಕೆಗಳು

C) **ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳು** D) ಸಕ್ಕರೆ ಮತ್ತು ಕಾಗದದ ಕೈಗಾರಿಕೆಗಳು

11. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವೇಳೆಯಲ್ಲಿ ಸಿಫಾಯಿಗಳು ಜನಸಾಮಾನ್ಯರ ವಿಶ್ವಾಸವನ್ನು ಕಳೆದುಕೊಳ್ಳಲು ಕಾರಣ

A) ದೇಶೀಯ ರಾಜರ ಬೆಂಬಲದ ಕೊರತೆ B)ಸೂಕ್ತ ಮಾರ್ಗದರ್ಶನದ ಕೊರತೆ

C) ಸ್ವಹಿತಾಸಕ್ತಿ ಮತ್ತು ಹಕ್ಕಿ ಗಾಗಿ ನಡೆದ ಹೋರಾಟ D) **ಸೈನಿಕರ ಲೂಟಿ ಮತ್ತು ದರೋಡೆಗಳು**

## 7.ಸ್ವಾತಂತ್ರ್ಯ ಹೋರಾಟ

1) 'ರಾಷ್ಟ್ರೀಯತೆ' ಎಂಬ ಪರಿಕಲ್ಪನೆ ತೀವ್ರವಾಗಿ ಬೆಳೆದದ್ದು ಈ ಶತಮಾನದಲ್ಲಿ

A) 18ನೇ ಶತಮಾನ B) **19ನೇ ಶತಮಾನ** C) 17ನೇ ಶತಮಾನ D) 20ನೇ ಶತಮಾನ

2) ಬ್ರಿಟಿಷ್ ಸರ್ಕಾರದ ಆಡಳಿತವನ್ನು 1858 ರಲ್ಲಿ ಇವರ ಹೆಸರಿನಲ್ಲಿ ಜಾರಿಗೊಳಿಸಲಾಯಿತು

A) ಭಾರತದ ವೈಸರಾಯ B) ಬ್ರಿಟನ್ ಪ್ರಧಾನಿ C) **ಬ್ರಿಟನ್ ರಾಣಿ** D) ಗವರ್ನರ್ ಜನರಲ್

3) ಭಾರತದಲ್ಲಿ 1858 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಳ್ಳಲು ಮುಖ್ಯ ಕಾರಣ.

A) **ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ** B) ಬ್ರಿಟನ್ ರಾಣಿಯ ಸಾಮ್ರಾಜ್ಯ ಶಾಹಿ ಧೋರಣೆ

C) ಬ್ರಿಟಿಷ ಸರಕಾರದ ಶಾಸಕಾಂಗ ನಿರ್ಣಯ D) ಈಸ್ಟ್ ಇಂಡಿಯಾ ಕಂಪನಿಯ ಭ್ರಷ್ಟಾಚಾರ

4) ಭಾರತೀಯರನ್ನು ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ತೊಡಗಲು ಈ ಶಾಸನವು ಅನುವು ಮಾಡಿಕೊಟ್ಟಿತು.

A) **ಸಾ.ಶ 1861** B) ಸಾ.ಶ 1885 C) ಸಾ.ಶ 1919 D) ಸಾ.ಶ 1935

5) ಭಾರತದ ರಾಜಕೀಯ ದಿಕ್ಕನ್ನು ಬದಲಿಸಿದ ರಾಷ್ಟ್ರೀಯ ಸಂಘಟನೆ

A) ದಿ ಹಿಂದೂ ಮೇಳ B) ಅಭಿನವ ಭಾರತ C) **ಭಾರತದ ರಾಷ್ಟ್ರೀಯ ಕಾಂಗ್ರೆಸ್** D) ಅನುಶೀಲನ ಸಮಿತಿ

6) ಭಾರತ ರಾಷ್ಟ್ರೀಯ ಕಾಂಗ್ರೆಸ್ ಈ ಅಧಿವೇಶನದಲ್ಲಿ ಜನ್ಮ ತಾಳಿತು

A) **ಬಾಂಬೆ** B) ಸೂರತ್ C) ಲಾಹೋರ್ D) ಲಖ್ನೌ

7) ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ಕಾರಣರಾದ ಬ್ರಿಟಿಷ ಅಧಿಕಾರಿ

A) ಮೆಕಾಲೆ B) ಸರ್ ಸ್ಟ್ಯಾಪರ್ಡ್ ಕ್ರಿಪ್ಸ C) **ಎ.ಓ.ಹ್ಯೂಮ್** D) ಚಾರ್ಲ್ಸ್ ವುಡ್

8) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ವರ್ಷ

A) 1861 B) 1886 C) 1985 D) **1885**

9) ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲ ಉದ್ದೇಶ ಇದಾಗಿದೆ

A) ಕ್ರಾಂತಿಕಾರಿ ಚಟುವಟಿಕೆ ಹತ್ತಿಕ್ಕಲು B) ಸ್ವದೇಶಿ ಚಳುವಳಿ ಕೈಗೊಳ್ಳಲು

C) ಬಂಗಾಳದ ವಿಭಜನೆಯ ರದ್ಧತಿ D) **ಭಾರತೀಯರಲ್ಲಿ ಐಕ್ಯತೆ ಮೂಡಿಸುವುದು**

10) ರಾಷ್ಟ್ರೀಯ ಕಾಂಗ್ರೆಸ್ಸಿನ ಮೊದಲ ಅಧ್ಯಕ್ಷರು

A) ಸುರೇಂದ್ರನಾಥ ಬ್ಯಾನರ್ಜಿ B) ಬಿಪಿನಚಂದ್ರ ಪಾಲ C) ಎ.ಓ.ಹ್ಯೂಮ್ D) **ಡಬ್ಲ್ಯು.ಸಿ .ಬ್ಯಾನರ್ಜಿ**

11) ಮಂದಗಾಮಿಗಳ ಪ್ರಮುಖ ನಾಯಕರು

A) ಲಾಲಾ ಲಜಪತರಾಯ B) ವೀರ ಸಾವರ್ಕರ C) ಅರವಿಂದ ಘೋಷ D) **ದಾದಾಬಾಯಿ ನವರೋಜಿ,**

12) "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು ಅದನ್ನು ಪಡೆದೆ ತೀರುವೆ" ಇದು ಯಾರ ಘೋಷಣೆ?

A) ಲಾಲಾ ಲಜಪತರಾಯ B) **ಬಾಲ ಗಂಗಾಧರ ತಿಲಕ** C) ಬಿಪಿನ್ ಚಂದ್ರ ಪಾಲ್ D) ಅರವಿಂದ ಘೋಷ

13) "ಸಂಪತ್ತಿನ ಸೋರಿಕೆಯ ಸಿದ್ಧಾಂತ"ದ ರೂವಾರಿ

A) **ದಾದಾಬಾಯಿ ನವರೋಜಿ** B) ಲಾಲಾ ಲಜಪತರಾಯ C) ಸುರೇಂದ್ರನಾಥ ಬ್ಯಾನರ್ಜಿ D) V.D.ಸಾವರ್ಕರ್

14) ಭಾರತದ ಸಂಪತ್ತು ಇಂಗ್ಲೆಂಡಿಗೆ ಹರಿದು ಹೋಗಲು ಪ್ರಮುಖ ಕಾರಣ .

A) ಕಡಿಮೆ ಆಮದು B) ಕಡಿಮೆ ರಫ್ತು C) **ಹೆಚ್ಚು ಆಮದು** D) ಹೆಚ್ಚು ರಫ್ತು

15) ಆಮದನ್ನು ಹೆಚ್ಚಿಸಿ ರಫ್ತನ್ನು ಕಡಿಮೆ ಮಾಡಿದ್ದರಿಂದ ಉಂಟಾದ ಪರಿಣಾಮ.

A)ಅಸಮತೋಲನ ಸಂದಾಯ B)ಅನೂಕೂಲ ಸಂದಾಯ C) ಸಮತೋಲನ ಸಂದಾಯ D)**ಪ್ರತಿಕೂಲ ಸಂದಾಯ**

16) ಸ್ವಾತಂತ್ರ್ಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದು ಕೊಟ್ಟ ಬಾಲಗಂಗಾಧರ ತಿಲಕರ ಕೃತಿ

A) **ಗೀತಾರಹಸ್ಯ** B) ಮರಾಠಾ C) ಕೇಸರಿ D) ಭಗವದ್ಗೀತೆ

17 'ರಾಜಕೀಯ ಭಿಕ್ಷುಕರು' ಎಂದು ಕರೆಯಲ್ಪಟ್ಟವರು

A) ಕ್ರಾಂತಿಕಾರಿಗಳು B) ಸಾಮಾನ್ಯ ಜನತೆ C) **ಮಂದಗಾಮಿಗಳು** D) ತೀವ್ರಗಾಮಿಗಳು

18)"ವರ್ನಾಕ್ಯುಲರ್ ಪ್ರೆಸ್ ಕಾಯ್ದೆ" ಜಾರಿಗೆ ತಂದ ಗವರ್ನರ್ ಜನರಲ್

A) ಲಾರ್ಡ ಕರ್ಜನ್ B) ಲಾರ್ಡ ಡಾಲ್ ಹೌಸಿ C) ಲಾರ್ಡ ರಿಪ್ಪನ್ D) **ಲಾರ್ಡ ಲಿಟ್ಟನ್**

19) "ವರ್ನಾಕ್ಯುಲರ್ ಪ್ರೆಸ್ ಕಾಯ್ದೆ" ಜಾರಿಗೆ ತಂದ ಉದ್ದೇಶ

A) ಪತ್ರಿಕಾ ಸ್ವಾತಂತ್ರ್ಯ ಕಾಪಾಡುವುದು B) ಬಂಗಾಳದ ವಿಭಜನೆ ರದ್ದು ಮಾಡಲು

C) **ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು** D) INC ಬಲ ಕುಗ್ಗಿಸಲು

20) ಭಾರತದಲ್ಲಿ ಕೋಮುವಾದದ ಬೀಜವನ್ನು ಬಿತ್ತಿದ ಬ್ರಿಟೀಷರ ನೀತಿ

A) ಭೂಕಂದಾಯ ನೀತಿ B) **ಒಡೆದು ಆಳುವ ನೀತಿ** C) ಆರ್ಥಿಕ ನೀತಿ D) ವಸಾಹತುಶಾಹಿತ್ವ ನೀತಿ

21) ಹಿಂದೂ ಮುಸ್ಲಿಮ್ ರನ್ನು ಬೇರ್ಪಡಿಸುವ ಬ್ರಿಟಿಷರ ರಾಜಕೀಯ ತಂತ್ರಗಾರಿಕೆಗೆ ಕಾರಣ

A) ಆಡಳಿತದಲ್ಲಿ ಭಾಗವಹಿಸದೇ ಇರುವುದು B) ಭಾರತೀಯರಲ್ಲಿ ಮೂಡಿದ ರಾಜಕೀಯ ಅರಿವು

C) ಭಾರತೀಯರು ಪಡೆದುಕೊಂಡ ಇಂಗ್ಲೀಷ್ ಶಿಕ್ಷಣ D) **ಭಾರತೀಯ ರಾಷ್ಟ್ರೀಯ ಕಾಂಗ್ರೆಸನ ಬಲವರ್ಧನೆ**

22) ಬಂಗಾಳದ ವಿಭಜನೆಯನ್ನು ರೂಪಿಸಿದ ವೈಸರಾಯ್

A) **ಲಾರ್ಡ ಕರ್ಜನ್** B) ಲಾರ್ಡ ರಿಪ್ಪನ್ C) ಲಾರ್ಡ ಡಾಲ್ ಹೌಸಿ D) ಲಾರ್ಡ ಕಾರ್ನವಾಲೀಸ್

23) ಬಂಗಾಳದಲ್ಲಿ ಮುಸ್ಲಿಂ & ಹಿಂದೂ ಸಮುದಾಯವನ್ನು ಒಗ್ಗೂಡಿಸುವ ಪ್ರಮುಖ ಶಕ್ತಿ

A) ಬಂಗಾಳದ ವಿಭಜನೆ B) **ಬಂಗಾಳಿ ಭಾಷೆ** C) ಪಕ್ಷಗಳು D) ಪತ್ರಿಕೆಗಳು

24) ಮುಸ್ಲಿಂ & ಹಿಂದೂ ಸಮುದಾಯಗಳ ನಡುವೆ ಭಾವೈಕ್ಯತೆಯನ್ನು ಸಾಧಿಸಲು ..............ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

A) ಗಣೇಶ ಉತ್ಸವ B) **ರಕ್ಷಾ ಬಂಧನ** C) ಶಿವಾಜಿ ಉತ್ಸವ D) ದೀಪಾವಳಿ

25) ಸ್ವದೇಶಿ ಚಳುವಳಿಯನ್ನು ದೇಶಾದ್ಯಂತ ಕೊಂಡೊಯ್ದವರು

A) ಸಾಮಾನ್ಯ ಜನತೆ B) ಮಂದಗಾಮಿಗಳು C) ಕ್ರಾಂತಿಕಾರಿಗಳು D) **ತೀವ್ರಗಾಮಿಗಳು**

## 8.ಗಾಂಧೀಯುಗ ಮತ್ತು ರಾಷ್ಟ್ರೀಯ ಹೋರಾಟ

1. ಗಾಂಧಿಯುಗದ ಅವಧಿ............

A) 1915–20 B) **1920–47** C) 1947–50 D) 1919–35

2. ಇವರು ದಕ್ಷಿಣ ಆಫ್ರಿಕಾಕ್ಕೆ ಹೋಗಲು ಕಾರಣ............

A) ಉದ್ಯೋಗ ಮಾಡಲು B) ಬ್ರಿಟಿಷರವಿರುದ್ಧ ಹೋರಾಡಲು

C) ಪ್ರವಾಸಕ್ಕಾಗಿ D) **ದಾದ ಅಬ್ದುಲ್ಲ ಮತ್ತು ಕಂಪನಿಯ ವಕಾಲತ್ತು ವಹಿಸಲು**

3. ಗಾಂಧೀಜಿಯವರರಾಜಕೀಯ ಗುರುಗಳು

A) ದಾದಾಬಾಯಿನವರೋಜಿ B) **ಗೋಖಲೆ** C) ಎಂ ಜಿ ರಾನಡೆ D) ಡಬ್ಲ್ಯೂಸಿ ಬ್ಯಾನರ್ಜಿ

**4. ಚಂಪಾರಣ್ ಚಳುವಳಿ ಗಾಂಧೀಜಿಯವರುಪ್ರಾರಂಭಿಸಿದ್ದು**

A) 1918 B) **1917** C) 1919 D) 1920

**5. ಸ್ವಾತಂತ್ರ್ಯ ಹೋರಾಟದಲ್ಲಿ ಹಿಂದೂ-ಮುಸ್ಲಿಂ ಐಕ್ಯತೆಯನ್ನುಬಲವಾಗಿ ಪ್ರತಿಪಾದಿಸಿದವರು**

A) **ಗಾಂಧಿ** B)ನೆಹರು C) ಜಿನ್ನಾ D) ಬಾಲ್ ಗಂಗಾಧರ್ ತಿಲಕ್

**6. ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ಕಾರಣನಾದ ಬ್ರಿಟಿಷ್ ಅಧಿಕಾರಿ**

A) ಡಾಲ್ ಹೌಸಿ B) ಮೇಜರ್ ಹಡ್ಸನ್ C) **ಜನರಲ್ ಡಯಾರ್** D) ರಾಬರ್ಟ್ ಕ್ಲೈವ್

**7. ಖಿಲಾಪತ್ ಚಳುವಳಿ ಆರಂಭವಾದದ್ದು**

A) 1920 B) 1921 C) 1916 D) **1919**

**8. ಪೂರ್ಣ ಸ್ವರಾಜ್ಯದ ಗುರಿಯನ್ನು............................ ಅಧಿವೇಶನದಲ್ಲಿ ಘೋಷಿಸಲಾಯಿತು**

A) **ಲಾಹೋರ್** B) ಮುಂಬೈ C) ನಾಗಪುರ D) ಕೊಲ್ಕತ್ತಾ

**9. ಸವಿನಯ ಕಾನೂನುಭಂಗ/ ದಂಡಿ ಸತ್ಯಾಗ್ರಹ ಆರಂಭವಾದದ್ದು**

A) 1927 B) 1929 C) **1930** D) 1928

**10. ಮೊದಲನೇ ದುಂಡು ಮೇಜಿನ ಪರಿಷತ್ ಸಮಾವೇಶ............................... ರಲ್ಲಿ ನಡೆಯಿತು**

A) **1930** B) 1932 C) 1929 D) 1942

**11. ಸ್ವರಾಜ್ಯ ಪಕ್ಷ ಸ್ಥಾಪಿಸಿದ ವರ್ಷ**

A) 1924 B) **1923** C) 1929 D) 1906

**12. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದವರು**

A) ಸರ್ದಾರ್ ವಲ್ಲಬಾಯ್ ಪಟೇಲ್ B)ಡಾ. ಬಿ ಆರ್ ಅಂಬೇಡ್ಕರ್ C)ಲಾಲಾ ಲಜಪತ ರಾಯ್ D)**ಸುಭಾಷ್ ಚಂದ್ರ ಬೋಸ್**

**13. ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ದವರು ಯಾರು**

A) ಭಗತ್ ಸಿಂಗ್ B)ಚಂದ್ರಶೇಖರ್ ಆಜಾದ್ C)ವೀರ ಸಾವರ್ಕರ್ D)**ಸರ್ದಾರ್ ವಲ್ಲಬಾಯ್ ಪಟೇಲ್**

**14. ಕಲ್ಕತ್ತಾದಲ್ಲಿ ಕಾರ್ಮಿಕರ ಹೋರಾಟ ಆರಂಭವಾದದ್ದು**

A) **1827** B) 1830 C) 1832 D) 1840

**15. ಭಾರತದ ಆದ್ಯ ಹೋರಾಟ ಎಂದು ಕರೆಯಲಾದ ಬುಡಕಟ್ಟು ದಂಗೆ**

A) ಕೋಲರ ದಂಗೆ B) ಮುಂಡರ ದಂಗೆ C) ಹಲಗಲಿ ಬೇಡರ ದಂಗೆ D) **ಸಂತಾಲರ ದಂಗೆ**

**16. ಫಾರ್ವರ್ಡ್ ಬ್ಲಾಕ್ ಎಂಬ ಪಕ್ಷವನ್ನು ಸ್ಥಾಪಿಸಿದವರು**

A) ನೆಹರು B) **ಸುಭಾಷ್ ಚಂದ್ರ ಬೋಸ್** C) ಚಿತ್ತರಂಜನದಾಸ್ D) ರಾಸ್ ಬಿಹಾರಿ ಬೋಸ್

**17. ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎಂದು ಹೇಳಿದವರು**

A) **ಡಾ. ಬಿ.ಆರ್. ಅಂಬೇಡ್ಕರ್** B) ನೆಹರು C) ಗಾಂಧೀಜಿ D) ಸುಭಾಷ್ ಚಂದ್ರ ಬೋಸ್

**18. ಲಾಹೋರ್ ಕಾಂಗ್ರೆಸ್ಸನ ಅಧ್ಯಕ್ಷರಾಗಿದ್ದವರು ಯಾರು**

A) **ನೆಹರು** B) ಸುಭಾಷ್ ಚಂದ್ರ ಬೋಸ್ C) ಗಾಂಧೀಜಿ D) ಅನಿಬೆಸೆಂಟ್

**19. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು ಮಂಡಿಸಿದವರು**

A) **ಮಹಮ್ಮದ್ ಅಲಿ ಜಿನ್ನಾ** B) ಮೌಲಾನಾ ಅಬ್ದುಲ್ ಕಲಾಂ ಆಜಾದ್ C) ಜವಹರಲಾಲ್ ನೆಹರು D) ಮಹಾತ್ಮ ಗಾಂಧೀಜಿ

**20. ಭಾರತ ಮತ್ತು ಪಾಕಿಸ್ತಾನ ಮಧ್ಯೆ ಗಡಿರೇಖೆಯನ್ನು ಗುರುತಿಸಿದ ಆಯೋಗ**

A) ಕ್ರಿಪ್ಸ್ ಆಯೋಗ B) ಸೈಮನ್ ಆಯೋಗ C) **ಸರ್ ರ್ಯಾಡ್ ಕ್ಲಿಫ್ ಆಯೋಗ** D) ಹಂಟರ್ ಆಯೋಗ

**21. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಯಾವ ಕಾಯ್ದೆಗೆ ವಿರುದ್ದ ನಡೆದ ಹೋರಾಟದ ಪರಿಣಾಮವಾಗಿದೆ**

A) 1909 ಭಾರತೀಯ ಪರಿಷತ್ ಕಾಯ್ದೆ B) **1919 ರೌಲತ್ ಕಾಯ್ದೆ**

C) 1919 ಭಾರತೀಯ ಪರಿಷತ್ ಕಾಯ್ದೆ D) 1935 ಭಾರತ ಸರ್ಕಾರದ ಕಾಯ್ದೆ

**22. ಅಲಿ ಸಹೋದರರು ನಡೆಸಿದ ಚಳುವಳಿ ಯಾವುದು**

A) **ಖಿಲಾಫತ್ ಚಳುವಳಿ** B) ಅಸಹಕಾರ ಚಳುವಳಿ C) ಸ್ವದೇಶಿ ಚಳುವಳಿ D) ಕ್ವಿಟ್ ಇಂಡಿಯಾ ಚಳುವಳಿ

**23. ಮುಸ್ಲಿಂ ಲೀಗ್ 1946ರ ಆಗಸ್ಟ್ 16ರಂದು ನೇರ ಕಾರ್ಯಾಚರಣೆ ದಿನಕ್ಕೆ ಕರೆ ನೀಡಲು ಕಾರಣವೇನು**

A) ಬ್ರಿಟಿಷರ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವುದು B) ಪೂರ್ಣ ಸ್ವರಾಜ್ಯಕ್ಕೆ ಆಗ್ರಹಿಸುವುದು

C) **ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರಕ್ಕೆ ಆಗ್ರಹಿಸುವುದು** D) ಕಾಂಗ್ರೆಸ್ ಜೊತೆಗೆ ಮಧ್ಯಂತರ ಸರ್ಕಾರ ರಚಿಸುವುದು

**24. ಭಾರತ ವಿಭಜನೆಯ ವೇಳೆಯಲಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಗಡಿಯನ್ನು ನಿರ್ಧರಿಸಿದ್ದು**

A) ಕ್ರಿಪ್ಸ್ ಆಯೋಗ B) ಕ್ಯಾಬಿನೆಟ್ ಆಯೋಗ C) ಸೈಮನ್ ಆಯೋಗ D) **ಸರ್ ರ್ಯಾಡ್ ಕ್ಲಿಫ್ ಆಯೋಗ**

**25. ಕ್ವಿಟ್ ಇಂಡಿಯಾ ಚಳುವಳಿಯು ಕಾಂಗ್ರೆಸ್ಸೇತರ ನಾಯಕರಿಗೆ ನಾಯಕತ್ವ ನೀಡಿತು ಈ ಕೆಳಗಿನವರಲ್ಲಿ ಕಾಂಗ್ರೆಸ್ಸೇತರ ನಾಯಕರನ್ನು ಗುರುತಿಸಿರಿ**

A) ಕಸ್ತೂರಬಾ ಗಾಂಧಿ B) ಡಾ. ಬಿ.ಆರ್. ಅಂಬೇಡ್ಕರ್ C) **ಜಯ ಪ್ರಕಾಶ್ ನಾರಾಯಣ** D) ಮೌಲಾನಾ ಅಬ್ದುಲ್ ಆಜಾದ್

## 9.ಸ್ವಾತಂತ್ರೋತ್ತರ ಭಾರತ(20)

**1. ಪಾಕ್ ಆಕ್ರಮಿತ ಕಾಶ್ಮೀರ ಎನ್ನುವುದು ....**

A) ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ಪೂರ್ವ ಭಾಗ. B) ಕಾಶ್ಮೀರದ ಸಂಪೂರ್ಣ ಭಾಗ.

C) ಜಮ್ಮು ಮತ್ತು ಕಾಶ್ಮೀರದ ಆಗ್ನೇಯ ಭಾಗ. D) **ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯುವ್ಯ ಭಾಗ.**

**2. ಬಾಂಗ್ಲಾದಿಂದ ಬಂದ ಬಹುತೇಕ ನಿರಾಶ್ರಿತರು ಪಶ್ಚಿಮ ಬಂಗಾಳದಲ್ಲೇ ನೆಲೆಯೂರಲು ಪ್ರಯತ್ನಿಸಿದರು ಏಕೆಂದರೆ**

A) ಬಂಗಾಳ ಅತ್ಯಂತ ಸಂಪದ್ಭರಿತ ರಾಜ್ಯವಾಗಿತ್ತು. B) ಅಲ್ಲಿ ಬಹುಸಂಖ್ಯಾತರು ಮುಸ್ಲಿಮರಾಗಿದ್ದರು.

C) **ಅವರಿಗೆ ಬಂಗಾಳಿ ಭಾಷೆ ಮಾತ್ರ ಪರಿಚಯವಿತ್ತು .** D) ಬಂಗಾಳವು ಬಾಂಗ್ಲಾ ದೇಶಕ್ಕೆ ಸಮೀಪವಾಗಿತ್ತು .

**3. ಫ್ರೆಂಚರ ಹಿಡಿತದಲ್ಲಿದ್ದ ಪಾಂಡಿಚೇರಿಯು(1954) ಸ್ವತಂತ್ರಗೊಂಡು ---- ರಂದು ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು.**

A) **1963** B) 1961 C) 1990 D) 1987

**4. 1953ರಲ್ಲಿ ರಚನೆಯಾದ 'ರಾಜ್ಯ ಪುನರ್ವಿಂಗಡಣಾ ಆಯೋಗ'ದ ಅಧ್ಯಕ್ಷರು..**

A) ಪೊಟ್ಟಿ ಶ್ರೀರಾಮುಲು B) **ಫಜಲ್ ಆಲಿ** C) ಹೆಚ್ ಎನ್ ಕುಂಜ್ರು D) ಕೆ ಎಂ ಪಣಿಕ್ಕರ್

**5. ಯಾವ ತಿದ್ದುಪಡಿಯು ಸಂವಿಧಾನಕ್ಕೆ 'ಸಮಾಜವಾದಿ' ಮತ್ತು 'ಜಾತ್ಯತೀತ' ಎಂಬ ಪದಗಳನ್ನು ಸೇರಿಸಿತು.**

A) 32 ನೇ ತಿದ್ದುಪಡಿ B) 51 ನೇ ತಿದ್ದುಪಡಿ C) **42 ನೇ ತಿದ್ದುಪಡಿ** D) 45 ನೇ ತಿದ್ದುಪಡಿ

**6. ಭಾರತದ ಸಂವಿಧಾನ -------ರಂದು ಜಾರಿಯಾಯಿತು.**

A) 1950 ಜನವರಿ 25 B) 1947 ಜನವರಿ 25 C) 1947 ಜನವರಿ 26 D) **1950 ಜನವರಿ 26**

**7. ಇವರು ಭಾರತದ ಪ್ರಥಮ ಪ್ರಧಾನಮಂತ್ರಿ.**

A) ಮೋತಿಲಾಲ್ ನೆಹರು. B) ಬಾಬು ರಾಜೇಂದ್ರ ಪ್ರಸಾದ್. C) **ಜವಾಹರ್ ಲಾಲ್ ನೆಹರು** D) ಸರ್ದಾರ್ ವಲ್ಲಭಾಯ್ ಪಟೇಲ್.

**8. ಮೈಸೂರು ಸರಕಾರ ಮೈಸೂರು ಜಿಲ್ಲೆಯ 'ಬೈಲುಕುಪ್ಪೆ' ಎಂಬಲ್ಲಿ ಸುಮಾರು 3000 ಎಕರೆ ಜಮೀನನ್ನು ಮಂಜೂರು ಮಾಡುವ ಮೂಲಕ ಈ ನಿರಾಶ್ರಿತರಿಗೆ ನೆರವಾಯಿತು.**

A) ಶ್ರೀಲಂಕಾದಿಂದ ಬಂದ ನಿರಾಶ್ರಿತರು B) ಪಾಕಿಸ್ತಾನದಿಂದ ಬಂದ ನಿರಾಶ್ರಿತರು.

C) ಬಾಂಗ್ಲಾದೇಶದಿಂದ ಬಂದ ನಿರಾಶ್ರಿತರು D) **ಟಿಬೆಟ್ ನಿಂದ ಬಂದ ನಿರಾಶ್ರಿತರು**

**9. ಇವರು 1952ರಲ್ಲಿ ವಿಶಾಲಾಂಧ್ರ ರಾಜ್ಯ ರಚನೆಗಾಗಿ 58 ದಿನಗಳ ಕಾಲ ಅಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡರು. ಪ್ರತಿಫಲವಾಗಿ 1953ರಲ್ಲಿ ಮೊದಲ ಭಾಷಾವಾರು ರಾಜ್ಯವಾಗಿ ಆಂಧ್ರಪ್ರದೇಶ ರಚನೆಯಾಯಿತು.**

A) **ಪೊಟ್ಟಿ ಶ್ರೀರಾಮುಲು** B) ನಿಜಾಂ ಅಲಿ ಖಾನ್ C) ಶ್ರೀರಾಮುಲು D) ರಜಾಕಾರರು

**10. 1956ರಲ್ಲಿ ರಚನೆಯಾದ "ರಾಜ್ಯ ಪುನರ್ವಿಂಗಡಣಾ ಕಾಯ್ದೆ"ಯಂತೆ ಭಾರತದಲ್ಲಿ ರಚನೆಯಾದ ಒಟ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ ಎಷ್ಟು?**

A) 10ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು. B)14 ರಾಜ್ಯಗಳು ಮತ್ತು 3ಕೇಂದ್ರಾಡಳಿತ ಪ್ರದೇಶಗಳು.

C) **14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು.** D) 10ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳು.

**11. ದೇಶೀಯ ಸಂಸ್ಥಾನಗಳ ವಿಲೀನ ಪ್ರಕ್ರಿಯೆಯಲ್ಲಿ ತೀವ್ರ ಪ್ರತಿರೋಧ ತೋರಿದ ಸಂಸ್ಥಾನಗಳೆಂದರೆ ...**

A) ಗೋವಾ, ಪಾಂಡಿಚೇರಿ, ಮೈಸೂರು. B) **ಹೈದರಾಬಾದ್, ಜುನಾಗಢ, ಜಮ್ಮು ಕಾಶ್ಮೀರ.**

C) ಮೈಸೂರು, ಜುನಾಗಡ್, ಹೈದ್ರಾಬಾದ್. D) ಜಮ್ಮು, ಕಾಶ್ಮೀರ, ಹೈದರಾಬಾದ್.

**12. ಇವರು ಬ್ರಿಟಿಷ್ ಭಾರತದ ಕೊನೆಯ ಗವರ್ನರ್ ಜನರಲ್ ಆಗಿದ್ದರು.**

A) **ಲಾರ್ಡ್ ಮೌಂಟ್ ಬ್ಯಾಟನ್** B) ಲಾರ್ಡ್ ಡಾಲ್ ಹೌಸಿ C) ಲಾರ್ಡ್ ರಿಪ್ಪನ್ D) ಲಾರ್ಡ್ ಕರ್ಜನ್

**13. ಇವರು ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸುವ ಮೂಲಕ 'ಭಾರತದ ಉಕ್ಕಿನ ಮನುಷ್ಯ' ಎನಿಸಿಕೊಂಡರು. ಹಾಗೂ ಭಾರತದ ಮೊದಲ ಗೃಹ ಮಂತ್ರಿಯಾಗಿದ್ದರು**

A) **ವಲ್ಲಭಭಾಯಿ ಪಟೇಲ್** B)ಮಹಮ್ಮದ್ ಆಲಿ ಜಿನ್ನಾ C) ಜವಾಹರ್ ಲಾಲ್ ನೆಹರು D) ಡಾ. ಬಾಬು ರಾಜೇಂದ್ರ ಪ್ರಸಾದ್

**14. ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದದ್ದು ...**

A) 1ನವೆಂಬರ್ 1973 B) 1ನವೆಂಬರ್ 1965 C) 1ನವೆಂಬರ್ 1953 D) **1ನವೆಂಬರ್ 1956**

**15. ಜುನಾಗಡದ ಪ್ರಜೆಗಳು ನವಾಬನ ವಿರುದ್ಧ ದಂಗೆ ಏಳಲು ಕಾರಣ..**

A) ಭಾರತದ ಒಕ್ಕೂಟಕ್ಕೆ ಸೇರಲು ಷರತ್ತು ವಿಧಿಸಿದ್ದ . B)ನವಾಬ ಸ್ವತಂತ್ರನಾಗಿರಲು ಬಯಸಿದ್ದ.

C)ನವಾಬ ಭಾರತದ ಮೇಲೆ ದಾಳಿ ಮಾಡಲು ಹವಣಿಸಿದ್ದ. D)**ನವಾಬ ಜುನಾಗಢ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದ.**

**16. ಇವರು "ಭಾರತ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ",ಭಾರತಕ್ಕೆ ಸಂವಿಧಾನವನ್ನು ರಚಿಸಿ ಕೊಡುವ ಮೂಲಕ "ಭಾರತದ ಸಂವಿಧಾನದ ಶಿಲ್ಪಿ" ಎನಿಸಿಕೊಂಡವರು.**

A) ಸರ್ದಾರ್ ವಲ್ಲಭಭಾಯಿ ಪಟೇಲ್. B)ಜವಾಹರ್ ಲಾಲ್ ನೆಹರು.

C)**ಡಾ. ಬಿ ಆರ್ ಅಂಬೇಡ್ಕರ್.** D)ಡಾ. ಬಾಬು ರಾಜೇಂದ್ರ ಪ್ರಸಾದ್.

**17. ಇವರು ಭಾರತದ ಮೊದಲ ರಾಷ್ಟ್ರಪತಿ ಹಾಗೂ "ಸಂವಿಧಾನ ರಚನಾ ಸಭೆ"ಯ ಅಧ್ಯಕ್ಷ ರಾಗಿದ್ದರು.**

A) ಡಾ. ಬಿ ಆರ್ ಅಂಬೇಡ್ಕರ್ B) ಸರ್ದಾರ್ ವಲ್ಲಭಭಾಯಿ ಪಟೇಲ್.

C) ಜವಾಹರ್ ಲಾಲ್ ನೆಹರು. D) **ಡಾ. ಬಾಬು ರಾಜೇಂದ್ರ ಪ್ರಸಾದ್.**

**18. ಹೈದರಾಬಾದಿನ ನಿಜಾಮನು ಭಾರತದ ಒಕ್ಕೂಟಕ್ಕೆ ಸೇರಲು ಏಕೆ ನಿರಾಕರಿಸಿದನು?**

A) ವಿದೇಶೀಯರ ಅಧೀನದಲ್ಲೇ ಇರಲು ಬಯಸಿದ್ದನು. B) **ನಿಜಾಮನು ಸ್ವತಂತ್ರನಾಗಿರಲು ಇಚ್ಛಿಸಿದ್ದನು.**

C) ಪಾಕಿಸ್ತಾನದೊಂದಿಗೆ ಒಪ್ಪಂದ ಮಾಡಿಕೊಂಡಿದ್ದನು. D) ನಿಜಾಮನು ಪಾಕಿಸ್ತಾನಕ್ಕೆ ಸೇರುವ ಬಯಕೆ ಹೊಂದಿದ್ದನು.

**19. 1947ರ ಆಗಸ್ಟ್ 15ರಂದು ಇಡೀ ದೇಶವೇ ಸ್ವಾತಂತ್ರ್ಯವನ್ನು ಆಚರಿಸುವ ಸಂಭ್ರಮದಲ್ಲಿದ್ದರೆ, ಇವರು 'ನೌಕಾಲಿ'ಯಲ್ಲಿ ಗಲಭೆಗೊಳಗಾದ ಸಂತ್ರಸ್ತರನ್ನು ಭೇಟಿಯಾಗಿ ಸಾಂತ್ವನ ಹೇಳುವುದರಲ್ಲಿ ಮಗ್ನರಾಗಿದ್ದರು.**

A) **ಮಹಾತ್ಮ ಗಾಂಧೀಜಿ** B) ಸರ್ದಾರ್ ಪಟೇಲ್ C) ದಾದಾಬಾಯಿ ನವರೋಜಿ D) ಜವಾಹರ್ ಲಾಲ್ ನೆಹರು

**20. ಪ್ರಸ್ತುತ ಭಾರತದಲ್ಲಿ ಇರುವ ಒಟ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ..**

A) 29 ರಾಜ್ಯಗಳು 09 ಕೇಂದ್ರಾಡಳಿತ ಪ್ರದೇಶಗಳು. B) 28 ರಾಜ್ಯಗಳು 07 ಕೇಂದ್ರಾಡಳಿತ ಪ್ರದೇಶಗಳು.

C) 29 ರಾಜ್ಯಗಳು 07 ಕೇಂದ್ರಾಡಳಿತ ಪ್ರದೇಶಗಳು. D) **28 ರಾಜ್ಯಗಳು 08 ಕೇಂದ್ರಾಡಳಿತ ಪ್ರದೇಶಗಳು.**

# ರಾಜ್ಯಶಾಸ್ತ್ರ

## 1.ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

1. ಕೆಲಸ ಮಾಡುವ ಸಾಮರ್ಥ್ಯ ಇರುವ ವ್ಯಕ್ತಿಗೆ ಉದ್ಯೋಗದ ಲಭ್ಯತೆ ಇಲ್ಲದಿರುವ ಪರಿಸ್ಥಿತಿಯೇ---

A) ಶ್ರಮ ವಿಭಜನೆ B) **ನಿರುದ್ಯೋಗ** C) ತಾರತಮ್ಯ D) ದುಡಿಮೆ

2. ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರ ಕ್ರಮಕ್ಕೆ ಪ್ರಚೋದನೆ ನೀಡುವುದೇ---

A) **ಭ್ರಷ್ಟಾಚಾರ** B) ಕೋಮುವಾದ C) ಪಕ್ಷಪಾತ D) ಕಳ್ಳ ಸಾಗಾಣಿಕೆ

3. ಕರ್ನಾಟಕದಲ್ಲಿ ಡಿ. ಎಂ. ನಂಜುಂಡಪ್ಪ ಸಮಿತಿ ರಚಿಸಲು ಕಾರಣ----

A) ಭ್ರಷ್ಟಾಚಾರ ನಿಯಂತ್ರಿಸಲು. B) ಕಳ್ಳಸಾಗಾಣಿಕೆ ನಿಯಂತ್ರಣ.

C) ಲಿಂಗ ತಾರತಮ್ಯ ನಿವಾರಣೆಗೆ D) **ಪ್ರಾದೇಶಿಕ ಅಸಮಾನತೆ ನಿವಾರಿಸಲು.**

4. ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನ ನೀಡಲು ಅವಕಾಶ ನೀಡಿರುವ ಸಂವಿಧಾನದ ವಿಧಿ--

A) 371 A B)371 C C) **371 J** D) 371 D

5. ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲಿ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದೇ---

A) **ಕೋಮುವಾದ** B) ಸ್ವಜನ ಪಕ್ಷಪಾತ C) ಗಲಭೆ D) ಭ್ರಷ್ಟಾಚಾರ

6. ಕರ್ನಾಟಕ ಸರ್ಕಾರವು ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ ರೂಪಿಸಿರುವ ಕಾರ್ಯಕ್ರಮ---

A) ವಿದ್ಯಾಸಿರಿ B) ಗ್ರಾಮೀಣ ಸಡಕ್ ಯೋಜನೆ C) **ಸ್ತ್ರೀಶಕ್ತಿ** D) ಮನಸ್ವಿನಿ

7. 21ನೇ ಶತಮಾನದಲ್ಲಿ ಭಾರತೀಯ ನಾಗರಿಕ ಸಮಾಜಕ್ಕೆ ಇದು ಒಂದು ಸವಾಲಾಗಿದೆ.----

A) ನಿರುದ್ಯೋಗ B) **ಕಾರ್ಪೋರೇಟ್ ತಂತ್ರಗಾರಿಕ** C) ಲಿಂಗ ತಾರತಮ್ಯ D) ಅಸ್ಪೃಶ್ಯತೆ

8. ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಅಸ್ತಿತ್ವದಲ್ಲಿರುವ ಸಂಸ್ಥೆ ಇದಾಗಿದೆ.---

A) **ಲೋಕಾಯುಕ್ತ** B) ಆದಾಯ ಮತ್ತು ತೆರಿಗೆ ಇಲಾಖೆ C)**ಲೋಕಪಾಲ** D)ಭ್ರಷ್ಟಾಚಾರ ನಿಗ್ರಹ ಸಂಸ್ಥೆ

9. ಭಾರತದಲ್ಲಿ ನಿರುದ್ಯೋಗದ ಹೆಚ್ಚಳಕ್ಕೆ ಅತಿ ಮುಖ್ಯ ಕಾರಣಗಳೆಂದರೆ

A) ಅತಿಯಾದ ಬಡತನ & ಹೆಚ್ಚಾದ ಅನಕ್ಷರತೆ B) **ಮಿತಿಮೀರಿದ ಜನಸಂಖ್ಯೆ & ತಂತ್ರಜ್ಞಾನದ ಬಳಕೆ**

C) ಹೆಚ್ಚಾದ ಕೃಷಿ ಅವಲಂಬನೆ & ಶಿಕ್ಷಣದ ಕೊರತೆ D) ಕೃಷಿ & ಕೈಗಾರಿಕೆಗಳ ಸಂಪೂರ್ಣ ಅವನತಿ

10. ಈ ಕೆಳಗಿನ ಯಾವ ಸಮಸ್ಯೆಯು ಭಾರತದಲ್ಲಿ ಸಾರ್ವತ್ರಿಕವಾಗಿ ಹಾಗೂ ಸಮಾಜದ ಎಲ್ಲಾ ಸ್ತರಗಳಲ್ಲಿಯೂ ವ್ಯಾಪಕವಾಗಿ ಹಬ್ಬಿದೆ.

A) **ಭ್ರಷ್ಟಾಚಾರ** B) ನಿರುದ್ಯೋಗ C) ಬಡತನ D) ಭಯೋತ್ಪಾದನೆ

11. ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ---- ಸಂಸ್ಥೆ ಅಸ್ತಿತ್ವದಲ್ಲಿದೆ.

A) ಸಂಚಾರಿ ಪೊಲೀಸ್ B) **ಲೋಕಪಾಲ** C) ಲೋಕಾಯುಕ್ತ D) ಹೈಕೋರ್ಟ್

12. ಇತ್ತೀಚಿಗೆ ಸರ್ಕಾರಿ ಕಛೇರಿಗಳಲ್ಲಿ ಸಿಸಿ ಕ್ಯಾಮೆರಗಳನ್ನು ಅಳವಡಿಸುತ್ತಿರುವುದು ಈ ಕೆಳಗಿನ ಯಾವ ಸಮಸ್ಯೆಯನ್ನು ನಿವಾರಿಸುವ ಕ್ರಮವಾಗಿದೆ

A) ನಿರುದ್ಯೋಗ B)**ಭ್ರಷ್ಟಾಚಾರ** C)ಬಡತನ D)ಕೋಮುವಾದ

13. ಕರ್ನಾಟಕ ಸರ್ಕಾರವು 'ಸ್ತ್ರೀಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿರುವುದರ ಉದ್ದೇಶ

A) ಲಿಂಗ ತಾರತಮ್ಯ ನಿವಾರಣೆ B)ಮಹಿಳೆಯರ ರಾಜಕೀಯ ಹಕ್ಕುಗಳ ರಕ್ಷಣೆ

C)ಮಹಿಳಾ ಮೀಸಲಾತಿಯ ವಿಸ್ತರಣೆ D)**ಗ್ರಾಮೀಣ ಮಹಿಳೆಯರ ವಿಕಾಸ**

## 2.ಭಾರತದ ವಿದೇಶಾಂಗ ನೀತಿ

1. ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರ ದೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿಯನ್ನು ಹೀಗೆ ಕರೆಯುತ್ತಾರೆ

A) ಸಾರ್ವಭೌಮ ರಾಷ್ಟ್ರ B) ಅಲಿಪ್ತ ನೀತಿ **C) ವಿದೇಶಾಂಗ ನೀತಿ** D) ಆಂತರಿಕ ನೀತಿ

2. ಭಾರತದ ವಿದೇಶಾಂಗ ನೀತಿಯನ್ನು ವಿಶೇಷವಾಗಿ ರೂಪಿಸಿದವರು

**A) ಜವಹರಲಾಲ್ ನೆಹರು** B)ಮಹಾತ್ಮಾ ಗಾಂಧೀಜಿ C)ಸರ್ದಾರ ವಲಭಾಯ್ ಪಟೇಲ್ D)ಡಾ.ಬಿ ಆರ್ ಅಂಬೇಡ್ಕರ್

3. ವಿಶ್ವದ ಯಾವುದೇ ಬಣಕ್ಕೂ ಸೇರದೇ ಇರುವ ನೀತಿಯನ್ನು ಹೀಗೆನ್ನಬಹುದು.

A) ವಸಾಹತು ನೀತಿ **B)ಆಲಿಪ್ತ ನೀತಿ** C) ವರ್ಣಬೇಧ ನೀತಿ D) ನಿಶ್ಯಸ್ತ್ರೀಕರಣ

4. ನೆಲ್ಸನ್ ಮಂಡೇಲಾರನ್ನು 'ಆಫ್ರಿಕಾದ ಗಾಂಧೀ' ಎಂದು ಕರೆಯಲು ಕಾರಣ

A) ಆಫ್ರಿಕಾದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು B) ವಸಾಹತುಶಾಹಿತ್ವವನ್ನು ವಿರೋಧಿಸಿದರು

C) ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು **D) ವರ್ಣಬೇಧ ನೀತಿಯನ್ನು ಖಂಡಿಸಿದರು**

5. ಭಾರತ ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಪೂರಕವಾದ ವಿದೇಶಾಂಗ ನೀತಿಗೆ ವಿಶೇಷವಾಗಿ ಒತ್ತು ನೀಡಿದೆ ಕಾರಣವೆಂದರೆ......

A) 3ನೇ ಮಹಾಯುದ್ಧದ ಭೀತಿ **B) ಭಾರತವು ಶಾಂತಿಪ್ರಿಯ ರಾಷ್ಟ್ರವಾಗಿದೆ**

C) ಭಾರತವು ಅಣ್ವಸ್ತ್ರ ರಾಷ್ಟ್ರವಾಗಿದೆ D) ಸಂಪೂರ್ಣ ನಿಶ್ಯಸ್ತ್ರೀಕರಣ ವಿಫಲವಾಗಿದೆ

6. ಜವಹರಲಾಲ್ ನೆಹರು ಅವರು ರೇಡಿಯೋ ಭಾಷಣದಲ್ಲಿ ವಿದೇಶಾಂಗ ನೀತಿಯ ರೂಪುರೇಷೆಗಳನ್ನು ಅರಿವು ಮೂಡಿಸಿದ ದಿನ

A) 1945 ಸೆಪ್ಟೆಂಬರ್ 7 **B)1946 ಸೆಪ್ಟೆಂಬರ್ 7** C)1945 ಅಕ್ಟೋಬರ್ 7 D)1946 ಅಕ್ಟೋಬರ್ 7

7. ಪಂಚಶೀಲ ತತ್ವಗಳಿಗೆ ಯಾರು ಯಾರು ಸಹಿ ಮಾಡಿದರು?

**A) ಚೌ ಎನ್ ಲಾಯ್ ಮತ್ತು ಜವಹರಲಾಲ ನೆಹರು** B) ಚೌ ಎನ್ ಲಾಯ್ ಮತ್ತು ಸರ್ದಾರ್ ವಲ್ಲಭಭಾಯ್ ಪಟೇಲ್

C) ಜವಹರಲಾಲ ನೆಹರು ಮತ್ತು ನೆಲ್ಸನ್ ಮಂಡೇಲಾ D) ನೆಲ್ಸನ್ ಮಂಡೇಲಾ ಮತ್ತು ಸರ್ದಾರ್ ವಲ್ಲಭಭಾಯ್ ಪಟೇಲ್

8. ಪಂಚಶೀಲ ತತ್ವಗಳನ್ನು ಯಾವಾಗ ಅಳವಡಿಸಿಕೊಳ್ಳಲಾಯಿತು?

A) 1964 B) 1947 C) 1946 **D) 1954**

9. ಈ ಕೆಳಗಿನವುಗಳಲ್ಲಿ ಯಾವುದು ಪಂಚಶೀಲ ತತ್ವಗಳನ್ನು ಒಳಗೊಂಡಿರುವುದಿಲ್ಲ?

A) ಪರಸ್ಪರ ಆಕ್ರಮಣ ಮಾಡದಿರುವುದು **B) ಸಾಂಸ್ಕೃತಿಕ ಮೌಲ್ಯಗಳು ಬಿತ್ತರಿಸುವುದು**

C) ಆಂತರಿಕವಾಗಿ ಹಸ್ತಕ್ಷೇಪ ಮಾಡದಿರುವುದು D) ಸಹಕಾರ ಮತ್ತು ಸಮಾನತೆ

10. ವಿಶ್ವದ ಯಾವುದೇ ಬಣಕ್ಕೆ ಸೇರದೆ ಭಾರತವು ಅನುಸರಿಸಿದ ತಟಸ್ಥ ನೀತಿ

A) ನಿಶಸ್ತ್ರೀಕರಣ B) ವಸಾಹತುಶಾಹಿತ್ವ C)ವರ್ಣಭೇದ ನೀತಿ **D) ಅಲಿಪ್ತ ನೀತಿ**

11. ಪಾಕಿಸ್ತಾನದ ಜೊತೆ ಮೈತ್ರಿ ಬಾಂಧವ್ಯಕ್ಕೆ ಪ್ರಯತ್ನಮಾಡಿದ ಭಾರತದ ಪ್ರಧಾನಿ

A) ಲಾಲ್ ಬಹುದ್ದೂರ್ ಶಾಸ್ತ್ರಿ B) ಜವಹರಲಾಲ ನೆಹರು **C)ಅಟಲ್ ಬಿಹಾರಿ ವಾಜಪೇಯಿ** D) ಇಂದಿರಾಗಾಂಧಿ

12. 'ಆಫ್ರಿಕಾದ ಗಾಂಧಿ' ಎಂದು ಪ್ರಸಿದ್ಧರಾದವರು

A) ಮಹಾತ್ಮ ಗಾಂಧೀಜಿ **B) ನೆಲ್ಸನ್ ಮಂಡೇಲ** C)ಮಾರ್ಟಿನ್ ಲೂಥರ್ ಕಿಂಗ್ D) ಅನಿಬೆಸೆಂಟ್

13.ಒಂದು ಜನಾಂಗದ ಅಥವಾ ವರ್ಣದ ಜನಸಮುದಾಯ ಇನ್ನೊಂದು ಜನಾಂಗವನ್ನು ತಮಗಿಂತ ಕೀಳು ಎಂದು ಭಾವಿಸಿ ವಿರೋಧಿಸುವ ನೀತಿಯೇ

A) ವಸಾಹತುಶಾಹಿತ್ವ **B) ವರ್ಣಭೇದ ನೀತಿ** C) ನಿಶಸ್ತ್ರಿಕರಣ D) ಅಲಿಪ್ತ ನೀತಿ

14. ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗಪಡಿಸಿಕೊಳ್ಳುವದಕ್ಕೆ ಹೀಗೆನ್ನುತ್ತಾರೆ

**A) ವಸಾಹತುಶಾಹಿತ್ವ** B) ನಿಶಸ್ತ್ರಿಕರಣ C)ಅಲಿಪ್ತ ನೀತಿ D) ವರ್ಣಭೇದ ನೀತಿ

15. ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ .........

A) ಅಲಿಪ್ತ ನೀತಿ B) ವರ್ಣಭೇದ ನೀತಿ **C)ನಿಶಸ್ತ್ರಿಕರಣ** D) ವಸಾಹತುಶಾಹಿತ್ವ

16. **ಭಾರತ ಶಾಂತಿಪ್ರಿಯ ರಾಷ್ಟ್ರವಾಗಿದ್ದು ಗುಣಾತ್ಮಕ ಹಾಗೂ ಗಾತ್ರದ ಪರಿಮಿತಿಯಲ್ಲಿ ನಿಶಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ ಏಕೆ?**

A) ತನ್ನಲ್ಲಿ ಶಸ್ತ್ರಾಸ್ತ್ರಗಳ ಕೊರತೆ ಇರುವುದರಿಂದ

B)ಬೇರೆ ದೇಶಗಳ ಬೆಳೆಯದಂತೆ ನೋಡಿಕೊಳ್ಳಲು

C)**ಶಸ್ತ್ರಾಸ್ತ್ರಗಳ ಪೈಪೋಟಿಯಿಂದ ಕೆಲವು ದೇಶಗಳು ತಪ್ಪು ಗ್ರಹಿಕೆಯಿಂದ ಶಸ್ತ್ರಾಸ್ತ್ರಗಳನ್ನು ಉಪಯೋಗಿಸುವ ಸಂಭವವಿರುತ್ತದೆ**

D)ಯಾವುದು ಅಲ್ಲ

17. **ಸಂಪೂರ್ಣ ನಿಶ್ಯಸ್ತ್ರೀಕರಣ ಸಾಧ್ಯವಾಗದ ವಿಚಾರ ಏಕೆಂದರೆ ............**

A) **ಪ್ರತಿಯೊಂದು ರಾಷ್ಟ್ರಕ್ಕೂ ರಕ್ಷಣೆ ಆವಶ್ಯಕತೆಯಿದೆ** B)ಕೆಲವು ರಾಷ್ಟ್ರಗಳು ಈಗಾಗಲೇ ಹೆಚ್ಚು ಉತ್ಪಾದಿಸುವುದರಿಂದ

C) ಎಲ್ಲ ರಾಷ್ಟ್ರಗಳು ಇದ್ದ ಮಾಡಬೇಕೆಂಬ ಪೈಪೋಟಿ ಇರುವುದರಿಂದ D) ಯಾವುದು ಅಲ್ಲ

18. **ಸ್ವತಂತ್ರಪೂರ್ವದಲ್ಲಿ ಭಾರತವು ಯಾರ ವಸಾಹತುಶಾಹಿಗೆ ಒಳಗಾಗಿತ್ತು?**

A) ಫ್ರೆಂಚರು B)ಪೋರ್ಚುಗೀಸರು C) ಡಚ್ಚರು D)**ಬ್ರಿಟಿಷರು**

19. **ಭಾರತವು ವಿದೇಶಾಂಗ ನೀತಿಯನ್ನು ಸಂವಿಧಾನದ ಎಷ್ಟನೇ ವಿಧಿಯಲ್ಲಿ ಅಳವಡಿಸಿಕೊಂಡಿದೆ?**

A) 50ನೇ ವಿಧಿ B) **51ನೇ ವಿಧಿ** C) 52ನೇ ವಿಧಿ D) 49ನೇ ವಿಧಿ

20. **ಭಾರತವು ವಿದೇಶಾಂಗ ನೀತಿಯನ್ನು ಅನುಸರಿಸುವಾಗ ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಬೇಕಾದ ಅಂಶವೆಂದರೆ.....**

A) ವಿಶ್ವಶಾಂತಿ ಮತ್ತು ಸಹಬಾಳ್ವೆ B)**ರಾಷ್ಟ್ರೀಯ ಹಿತಾಸಕ್ತಿ ಮತ್ತು ಸಾರ್ವಜನಿಕ ಅಭಿಪ್ರಾಯ**

C)ವಸಾಹತುಶಾಹಿತ್ವ ಮತ್ತು ಸಾಮ್ರಾಜ್ಯಶಾಹಿತ್ವ D)ಅಧಿಕಾರ ಮತ್ತು ಸಾಮ್ರಾಜ್ಯಶಾಹಿತ್ವ

## 3.ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

1. **ಚೀನಾವು ಭಾರತದ ಯಾವ ಭಾಗವನ್ನು ತನಗೆ ಸೇರಬೇಕೆಂದು ಪ್ರತಿಪಾದಿಸುತ್ತಿದೆ.**

A) ಅಸ್ಸಾಂ B) ತ್ರಿಪುರಾ C) **ಅರುಣಾಚಲ ಪ್ರದೇಶ** D) ಸಿಕ್ಕಿಂ

2 .**BRICS ರಾಷ್ಟ್ರಗಳ ಗುಂಪು ಪ್ರಾರಂಭವಾದ ವರ್ಷ.**

A) 2014 B) 2017 C) 2018 D) **2015**

3. **ತಾಷ್ಕೆಂಟ್ ಒಪ್ಪಂದ ಯಾವ ರಾಷ್ಟ್ರಗಳ ಮಧ್ಯೆ ನಡೆಯಿತು**

A) ಚೀನಾ–ಭಾರತ B) **ಭಾರತ–ಪಾಕಿಸ್ತಾನ** C) ಭಾರತ–ಶ್ರೀಲಂಕಾ D) ಭಾರತ–ನೇಪಾಳ

4. **ಭಿಲಾಯ್ ಮತ್ತು ಬೋಕಾರೋ ಉಕ್ಕಿನ ಕೈಗಾರಿಕೆ ಸ್ಥಾಪನೆಗೆ ಸಹಕರಿಸಿದ ದೇಶ**

A) **ರಷ್ಯಾ** B)ಅಮೇರಿಕಾ C) ಚೀನಾ D) ಜಪಾನ

5. **1962ರಲ್ಲಿ ............ ದೇಶವು ಭಾರತದ ಮೇಲೆ ಆಕ್ರಮಣಮಾಡಿತು**

A) **ಚೀನಾ** B) ಪಾಕಿಸ್ತಾನ C) ಬಾಂಗ್ಲಾದೇಶ D) ಶ್ರೀಲಂಕಾ

6. **1962ರ ಭಾರತ ಮತ್ತು ಚೀನಾ ಯುದ್ಧದ ಪ್ರಮುಖ ಪರಿಣಾಮವೆಂದರೆ.....**

A) ಪಂಚಶೀಲ ತತ್ವಗಳು ಅಂಗೀಕಾರಗೊಂಡವು B) **ಗಡಿ ಸಮಸ್ಯೆಯು ಉಲ್ಬಣಗೊಂಡಿತು**

C) ವ್ಯಾಪಾರಸಂಬಂಧ ಕಡಿತಗೊಂಡಿತು D) ದ್ವಿಪಕ್ಷೀಯ ಸಂಬಂಧಗಳು ಹದಗೆಟ್ಟವು

7. **1980ರ ದಶಕದ ನಂತರದಲ್ಲಿ ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧ ಗಟ್ಟಿಗೊಳ್ಳಲು ಕಾರಣ**

A) ಗಡಿ ವಿವಾದ ಅಂತ್ಯಗೊಂಡಿದ್ದು B) **ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕ**

C) ಚೀನಾದಲ್ಲಿ ಬೌದ್ಧ ಧರ್ಮದ ಪ್ರಚಾರ D) ಟಿಬೇಟ್ ವಿವಾದ ಅಂತ್ಯಗೊಂಡಿದ್ದು

8. **ಭಾರತವು ಅಲಿಪ್ತ ಚಳುವಳಿಯನ್ನು ಅನುಸರಿಸಿದ ಸಂದರ್ಭ**

A) ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ B) ಎರಡನೇ ವಿಶ್ವಯುದ್ಧದ ಸಮಯದಲ್ಲಿ

C) **ಜಾಗತಿಕ ರಾಜಕೀಯ ಧೃವೀಕರಣ ಸಮಯದಲ್ಲಿ** D) ಭಾರತ ಮತ್ತು ಚೀನಾ ಯುದ್ಧದ ಸಂದರ್ಭದಲ್ಲಿ

**9. ಭಾರತ ಮತ್ತು ಅಮೇರಿಕಾ ನಡುವೆ ಇರುವ ಅತೀ ಮುಖ್ಯ ಸಾಮ್ಯತೆ**

A) ಆರ್ಥಿಕ ಪ್ರಗತಿ B) **ಪ್ರಜಾತಂತ್ರ ವ್ಯವಸ್ಥೆ** C) ಮಿಲಿಟರಿ ಶಕ್ತಿ D) ಬೃಹತ್ ಜನಸಂಖ್ಯೆ

**10. ಭಾರತಕ್ಕೆ 1962 ಚೀನಾ ಆಕ್ರಮಣ ಸಂದರ್ಭದಲ್ಲಿ ಅಮೇರಿಕಾ ನೀಡಿದ ಸಹಾಯದಿಂದ**

A) **ತುಂಬಾ ಶಕ್ತಿ ಬಂದಂತಾಯಿತು** B) ಚೀನಾದ ಸೋಲಿಗೆ ಕಾರಣವಾಯಿತು

C) ಮಿಲಿಟರಿ ಪಡೆಗಳಿಗೆ ತರಬೇತಿ ನೀಡಲಾಯಿತು D) ಆರ್ಥಿಕ ಬೆಂಬಲ ಸಿಕ್ಕಿತು

**11. ಸಿಮ್ಲಾ ಒಪ್ಪಂದ ಯಾವ ದೇಶಗಳ ಮಧ್ಯೆ ನಡೆಯಿತು**

A) ಚೀನಾ–ಭಾರತ B) **ಭಾರತ–ಪಾಕಿಸ್ತಾನ** C) ಭಾರತ–ಶ್ರೀಲಂಕಾ D) ಭಾರತ–ನೇಪಾಳ

**12. ಪಾಕಿಸ್ತಾನವು ಪಠಾಣಕೋಟ್ ಮೇಲೆ ದಾಳಿ ನಡೆಸಿದ ವರ್ಷ ಯಾವುದು?**

A) 2001 B) 2014 C) **2016** D) 2021

**13. ಅಂತರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ಧತೆ ಕುರಿತು ಭಾರತದ ಸಂವಿಧಾನದ ಯಾವ ವಿಧಿಯಲ್ಲಿ ತಿಳಿಸಲಾಗಿದೆ**

A) **51ನೇ ವಿಧಿ** B) 45ನೇ ವಿಧಿ C) 86ನೇ ವಿಧಿ D) 17ನೇ ವಿಧಿ

**14. 20 ವರ್ಷಗಳ ಶಾಂತಿ,ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು**

A) ಭಾರತ ಮತ್ತು ಚೀನಾ B) ಭಾರತ ಮತ್ತು ಅಮೇರಿಕಾ C) **ಭಾರತ ಮತ್ತು ರಷ್ಯಾ** D) ಭಾರತ ಮತ್ತು ಜಪಾನ

**15. ಭಾರತ ಮತ್ತು ಅಮೇರಿಕಾ ದೇಶಗಳೆರಡೂ ಈ ವಿಷಯದಲ್ಲಿ ಸಮಾನ ಹಿತಾಸಕ್ತಿಯನ್ನು ಹೊಂದಿರುವುದು.**

A) ಪ್ರಜಾಪ್ರಭುತ್ವ ವ್ಯವಸ್ಥೆಯ ವಿಸ್ತರಣೆಯಲ್ಲಿ B) **ಭಯೋತ್ಪಾದಕತೆಯನ್ನು ಹತ್ತಿಕ್ಕುವಲ್ಲಿ**

C) ಕಮ್ಯುನಿಸ್ಟ್ ವ್ಯವಸ್ಥೆಯನ್ನು ಹತ್ತಿಕ್ಕುವಲ್ಲಿ D) ವ್ಯಾಪಾರ ಸಂಬಂಧಗಳ ವೃದ್ಧಿಯಲ್ಲಿ

**16. ಈ ಕೆಳಗಿನ ಯಾವ ರಾಷ್ಟ್ರಗಳ ಪ್ರಯತ್ನದ ಫಲವಾಗಿ ಬ್ರಿಕ್ಸ್ ರಾಷ್ಟ್ರಗಳ ಒಕ್ಕೂಟ ಪ್ರಾರಂಭವಾಯಿತು.**

A) ಭಾರತ ಮತ್ತು ಪಾಕಿಸ್ತಾನ B) ಭಾರತ ಮತ್ತು ರಷ್ಯಾ C)ಭಾರತ ಮತ್ತು ಅಮೇರಿಕಾ D) **ಭಾರತ ಮತ್ತು ಚೀನಾ**

**17. 1962ರಲ್ಲಿ ಭಾರತ ಮತ್ತು ಚೀನಾ ಯುದ್ದಕ್ಕೆ ಕಾರಣವಾದ ಅಂಶ**

A) **ಟಿಬೆಟ್ ವಿವಾದ** B) ಕಾಶ್ಮೀರ ಸಮಸ್ಯೆ C) ನದಿ ನೀರಿನ ಹಂಚಿಕೆ D) ಅಕ್ರಮ ವಲಸಿಗರ ಸಮಸ್ಯೆ

**18. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ಪ್ರತಿಪಾದಿಸುತ್ತಿರುವ ರಾಷ್ಟ್ರ**

A) ಅಮೆರಿಕ B) ಚೀನಾ C) **ರಷ್ಯಾ** D) ಪಾಕಿಸ್ಥಾನ

**19. ಭಾರತವು ಅಮೇರಿಕಾದೊಂದಿಗೆ ತನ್ನ ವಿದೇಶಾಂಗ ನೀತಿಯನ್ನು ಆಗಾಗ್ಗೆ ಹೊಂದಿಸಿಕೊಳ್ಳಬೇಕಾಗುತ್ತದೆ ಏಕೆಂದರೆ.....**

A) ಅಮೇರಿಕಾದ ರಾಜಕೀಯ ವ್ಯವಸ್ಥೆಯ ಕಾರಣದಿಂದ B) ಅಮೇರಿಕಾವು ಪ್ರಪಂಚದಲ್ಲಿ ಬಲಿಷ್ಠ ರಾಷ್ಟ್ರವಾಗಿದೆ

C)ಅಮೇರಿಕವು ವಿಶ್ವಸಂಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ D) **ಅಮೇರಿಕಾದ ವಿದೇಶಾಂಗ ನೀತಿಯು ಅನೇಕ ಬಾರಿ ಭಾರತದ ವಿರುದ್ಧ ಇದ್ದು,ಪಾಕಿಸ್ತಾನದ ಪರವಾಗಿತ್ತು.**

**20. ಈ ಕೆಳಗಿನವುಗಳಲ್ಲಿ BRICS ರಾಷ್ಟ್ರಗಳ ಗುಂಪು**

A) ಬಾಂಗ್ಲಾದೇಶ, ರಷ್ಯಾ. ಇಂಗ್ಲೆಂಡ್. ಚೀನಾ, ದಕ್ಷಿಣ ಆಫ್ರಿಕಾ B) ಬ್ರೆಜಿಲ್, ರಷ್ಯಾ. ಇಂಡೀನೇಶಿಯಾ. ಚೀನಾ, ಅಮೇರಿಕಾ

**C)ಬ್ರೆಜಿಲ್, ರಷ್ಯಾ. ಭಾರತ. ಚೀನಾ, ದಕ್ಷಿಣ ಆಫ್ರಿಕಾ** D) ಬ್ರೆಜಿಲ್, ರಷ್ಯಾ. ಇಂಗ್ಲೆಂಡ್. ಚೀನಾ, ಆಸ್ಟ್ರೇಲಿಯಾ

## 4,"ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ"

**1. ಪ್ರಪಂಚದಲ್ಲಿ ಬಹುತೇಕ ಮಂದಿಗೆ ಧರ್ಮ, ಜನಾಂಗ ,ಲಿಂಗ, ಜಾತಿ, ವರ್ಣ ಹಾಗೂ ರಾಷ್ಟ್ರೀಯತೆ ಇವುಗಳನ್ನು ಕಾರಣವಾಗಿರಿಸಿ --- ಗಳ ನಿರಾಕರಣೆ ಹಾಗೂ ಶೋಷಣೆಯನ್ನು ನಾವು ಕಾಣಬಹುದಾಗಿದೆ.**

A) ಆರ್ಥಿಕ ಸಂವರ್ಧನೆ B) **ಮಾನವ ಹಕ್ಕು.** C) ಶಾಂತಿ ಸುಭದ್ರತೆ. D) ಉದ್ಯೋಗ.

**2. 'ವಿಶ್ವ ಮಾನವ ಹಕ್ಕುಗಳ ದಿನ'ವನ್ನು ಎಂದು ಆಚರಿಸುತ್ತೇವೆ ....**

A) ಮಾರ್ಚ್ 15ರಂದು B) ಜೂನ್ 5ರಂದು C) ಅಕ್ಟೋಬರ್ 24ರಂದು. D) **ಡಿಸೆಂಬರ್ 10ರಂದು**

**3. 1948 ಡಿಸೆಂಬರ್ 10 ಈ ದಿನವನ್ನು ಮಾನವನಹಕ್ಕುಗಳ ರಕ್ಷಣೆಯ ಇತಿಹಾಸದಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿ ಗುರುತಿಸಲಾಗಿದೆ. ಏಕೆಂದರೆ..**

A) ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಗುವಿನ ಹಕ್ಕುಗಳನ್ನು ಅಂಗೀಕರಿಸಿತು.

B) **ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಜಾಗತಿಕ ಮಾನವ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿತು.**

C) ವಿಶ್ವ ಸಂಸ್ಥೆ ಸ್ಥಾಪನೆಯಾಯಿತು.

D) ಎರಡನೇ ಜಾಗತಿಕ ಯುದ್ಧ ಅಂತ್ಯವಾಯಿತು.

**4. ಸಾರ್ವತ್ರಿಕ ಮಾನವ ಹಕ್ಕುಗಳನ್ನು ನಿರಂತರವಾಗಿ ಪ್ರತಿಪಾದಿಸುತ್ತ ಬಂದಿರುವ ಭಾರತ, ತನ್ನ ಸಂವಿಧಾನದ 3ನೇ ಭಾಗದಲ್ಲಿ ------ರ ವರೆಗಿನ ವಿಧಿಗಳ ಅಡಿಯಲ್ಲಿ ಭಾರತೀಯರಿಗೆ 'ಮೂಲಭೂತ ಹಕ್ಕು'ಗಳನ್ನು ನಮೂದಿಸಿದೆ.**

A) **12 ರಿಂದ 35** B) 14 ರಿಂದ 35 C) 12 ರಿಂದ 36 D) 14 ರಿಂದ 37

**5. ಜಗತ್ತಿನ ಯಾವುದೇ ಭಾಗದಲ್ಲಿ ವರ್ಣಭೇದ ನೀತಿ ಇರಬಾರದೆಂದು ಭಾರತ ಪ್ರತಿಪಾದಿಸುತ್ತದೆ. ಏಕೆಂದರೆ ಇದು ...**

A) ಏಕತೆಗೆ ಭಂಗ ತರುತ್ತದೆ. B) ರಾಷ್ಟ್ರೀಯತೆಗೆ ವಿರೋಧಿಯಾಗಿದೆ.

C) ಧಾರ್ಮಿಕ ಸ್ವಾತಂತ್ರವನ್ನು ತಡೆಯುತ್ತದೆ D) **ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ.**

**6. ದ್ವಿತೀಯ ಜಾಗತಿಕ ಯುದ್ಧದ ಬಳಿಕ ಜಗತ್ತಿನ ಹೊಸ ಶಕೆಯ ಆರಂಭಕ್ಕೆ ನಾಂದಿಯಾಗಿ 1945ರಲ್ಲಿ ಸ್ಥಾಪಿತವಾದ ಜಾಗತಿಕ ಸಂಸ್ಥೆ.**

A) ಭದ್ರತಾ ಸಮಿತಿ. B) ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ. C) ರಾಷ್ಟ್ರ ಸಂಘ. D) **ವಿಶ್ವಸಂಸ್ಥೆ**

**7. ಈ ಕೆಳಗಿನ ಯಾವ ಹೇಳಿಕೆಯು ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ಕೊಟ್ಟ ಘಟನೆಗಳಿಗೆ ಸಂಬಂಧಿಸಿಲ್ಲ..**

A) 1789 ರ ಫ್ರಾನ್ಸಿನ ಮಹಾಕ್ರಾಂತಿ. B) 1776 ರ ಅಮೇರಿಕಾ ಸ್ವಾತಂತ್ರ್ಯ ಯುದ್ಧ.

C) **1971 ರ ಬಾಂಗ್ಲಾ ವಿಮೋಚನೆ.** D) 1917ರ ರಷ್ಯಾ ಕ್ರಾಂತಿ & 1947 ರ ಭಾರತ ಸ್ವಾತಂತ್ರ್ಯ ಹೋರಾಟ

**8. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟಕ್ಕೆ ಪೂರಕವಲ್ಲದ (ಸಂಬಂಧಪಡದ) ಅಂಶ..**

A) ಸಾರ್ವತ್ರಿಕ ಮಾನವ ಹಕ್ಕುಗಳ ನಿರಂತರ ಪ್ರತಿಪಾದನೆ . B) **ಧಾರ್ಮಿಕ ಸ್ವಾತಂತ್ರ್ಯಕ್ಕೆ ನಿರ್ಬಂಧ.**

C) ವಿಶ್ವಸಂಸ್ಥೆಯಲ್ಲಿ ಮಾನವ ಹಕ್ಕುಗಳ ಸಮರ್ಥನೆ. D) ತನ್ನ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನೀಡಿದೆ.

**9. ಮಾನವ ಹಕ್ಕುಗಳ ಸಂರಕ್ಷಣೆಗಾಗಿ ರಚಿಸಲಾಗಿರುವ "ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ ಮಹಿಳಾ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗದ ರಾಷ್ಟ್ರೀಯ ಆಯೋಗ"ಗಳು ----- ಮಟ್ಟದ ಆಯೋಗ ಗಳಾಗಿವೆ.**

A) ರಾಜ್ಯ B) **ರಾಷ್ಟ್ರೀಯ** C) ಅಂತಾರಾಷ್ಟ್ರೀಯ D) ಸ್ಥಳೀಯ

**10. ರಾಜ್ಯಮಟ್ಟದಲ್ಲಿ 'ರಾಜ್ಯ ಮಾನವ ಹಕ್ಕುಗಳ ಆಯೋಗ' ಮತ್ತು 'ರಾಜ್ಯ ಮಹಿಳಾ ಆಯೋಗ' ಗಳನ್ನು ರಚಿಸಲಾಗಿರುವ ಉದ್ದೇಶವೇನೆಂದರೆ..**

A) ಮಾನವನ ವಿಕಾಸ B) ಗ್ರಾಮೀಣ ಅಭಿವದ್ಧಿ. C) **ಮಾನವ ಹಕ್ಕುಗಳ ಸಂರಕ್ಷಣೆ.** D) ರಾಜ್ಯಗಳ ಅಭಿವೃದ್ಧಿ .

**11. "ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ : ಬದಲಾಗಿ ಕಾರ್ಮಿಕರ ಬೆವರನ್ನು,ವಿಜ್ಞಾನಿಗಳ ಬುದ್ದಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ."ಎಂದು ಉದ್ಗರಿಸಿದವರು.**

A) **ಐಸೆನ್ ಹೋವೆರ್** B) ಅಬ್ರಹಾಂ ಲಿಂಕನ್ C) ಮಾರ್ಟಿನ್ ಲೂಥರ್ D) ಆಲ್ಬರ್ಟ ಐನಸ್ಟೀನ್

**12. ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಬಗ್ಗೆ ಯಾವ ವಿಧಿಯಲ್ಲಿ ತಿಳಿಸಲಾಗಿದೆ.......**

A) 15-35 B) **12-35** C) 18-29 D) 14-32

**13. ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿದವರು**

A) ಮಹಾತ್ಮ ಗಾಂಧೀಜಿ B) **ನೆಲ್ಸನ್ ಮಂಡೇಲಾ** C) ಐಶೆನ್ ಹೋವೇರ್ D) ಮಾರ್ಟಿನ್ ಲೂಥರ್

**14. 1789ರ ಫ್ರಾನ್ಸ ಮಹಾಕ್ರಾಂತಿಯ ಉದ್ಧೇಶ**

A) ವಿಶ್ವಸಂಸ್ಥೆಯ ಸ್ಥಾಪನೆ B) **ಮಾನವ ಹಕ್ಕುಗಳ ಸಂರಕ್ಷಣೆ** C) ವಿದೇಶಿಯರ ಆಕ್ರಮಣ ತಡೆಯುವುದು D) ರಾಷ್ಟಸಂಘದ ಸ್ಥಾಪನೆ

**15. ಭಾರತವು ನಿರಂತರವಾಗಿ ಪ್ರತಿಪಾದಿಸುತ್ತಿರುವುದು.**

A) **ಸಾರ್ವತ್ರಿಕ ಮಾನವ ಹಕ್ಕುಗಳು** B) ನಿರ್ಬಂಧಿತ ಮಾನವ ಹಕ್ಕುಗಳು

C) ಮೂಲಭೂತ ಮಾನವ ಹಕ್ಕುಗಳು D) ನೈಸರ್ಗಿಕ ಮಾನವ ಹಕ್ಕುಗಳು

**16. ಶೀತಲ ಸಮರದ ವೇಳೆ ಅಮೇರಿಕಾ ಅಥವಾ ರಶಿಯಾ ಬಣವನ್ನು ಸೇರದೆ ತಟಸ್ಥವಾಗಿದ್ದ ರಾಷ್ಟ್ರಗಳ ಗುಂಪು**

A) ಯುರೋಪಿಯನ್ ರಾಷ್ಟ್ರಗಳು B) ಅಭಿವೃದ್ಧಿಶೀಲ ರಾಷ್ಟ್ರಗಳು C) **ತೃತೀಯ ಜಗತ್ತು** D) ಮುಂದುವರೆಯುತ್ತಿರುವ ರಾಷ್ಟ್ರಗಳು

**17. ರಾಷ್ಟ್ರಗಳ ಹಿಂದುಳಿಯುವಿಕೆಯು ಇವುಗಳ ಬಳುವಳಿಯಾಗಿದೆ**

A) ವಸಾಹತುಶಾಹಿತ್ವ ಮತ್ತು ಸರ್ವಾಧಿಕಾರತ್ವ B) ನಿರಂಕುಶಾಧಿಕಾರತ್ವ ಮತ್ತು ಸಾಮ್ರಾಜ್ಯಶಾಹಿತ್ವ

C) ವಸಾಹತುಶಾಹಿತ್ವ ಮತ್ತು ಆಲಿಪ್ತನೀತಿ D) **ವಸಾಹತುಶಾಹಿತ್ವ ಮತ್ತು ಸಾಮ್ರಾಜ್ಯಶಾಹಿತ್ವ**

**18. ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಠಿ ತಂದುಕೊಟ್ಟ ಘಟನೆಗಳನ್ನು ಗುರುತಿಸಿ**

A) **1776ರ ಅಮೇರಿಕಾದ ಸ್ವಾತಂತ್ರ್ಯ ಸಂಗ್ರಾಮ** B) **1789ರ ಫ್ರಾನ್ಸ್ ಮಹಾಕ್ರಾಂತಿ**

C) 1399ರ ರಕ್ತರಹಿತ ಕ್ರಾಂತಿ D) **1917ರ ರಷ್ಯಾ ಕ್ರಾಂತಿ**

## ಜಾಗತಿಕ ಸಂಸ್ಥೆಗಳು

**1. ಮೊದಲನೆಯ ಮಹಾಯುದ್ಧ ನಂತರ ಜಾಗತಿಕ ಶಾಂತಿಗಾಗಿ ಸ್ಥಾಪನೆಯಾದ ಸಂಸ್ಥೆ**

A) ವಿಶ್ವಸಂಸ್ಥೆ B) **ರಾಷ್ಟ್ರಸಂಘ** C) ಸಾರ್ಕ್ D) ಯುರೋಪಿಯನ್ ಯೂನಿಯನ್

**2. ಲೀಗ್ ಆಫ್ ನೇಷನ್ಸ್ ಪತನ ಹೊಂದಲು ಕಾರಣವೇನೆಂದರೆ**

A) **1939 ರಲ್ಲಿ ಎರಡನೇ ಮಹಾಯುದ್ಧ ಆರಂಭವಾಯಿತು** B) ವಿಶ್ವಸಂಸ್ಥೆ ಸ್ಥಾಪನೆ ಯಾಯಿತು

C) ಶೀತಲ ಸಮರ ಪ್ರಾರಂಭವಾಯಿತು D) ಅದರ ಸದಸ್ಯ ರಾಷ್ಟ್ರಗಳು ಹೊರಬಂದವು

**3..ವಿಶ್ವ ಸಂಸ್ಥೆಯ ಎಂಬ ಪದವನ್ನು ಚಾಲ್ತಿಗೆ ತಂದವರು**

A) **ಎಫ್ ಡಿ ರೂಸವೆಲ್ಟ್** B) ವಿನ್ಸ್ಟನ್ ಚರ್ಚಿಲ್ C) ಜೋಸೆಫ್ ಸ್ಟಾಲಿನ್ D) ಡಿಗಾಲ್

**4. ವಿಶ್ವಸಂಸ್ಥೆಯ ಕೇಂದ್ರ ಕಚೇರಿ ಇರುವ ಸ್ಥಳ**

A) ಲಂಡನ್ B) ಪ್ಯಾರಿಸ್ C) **ನ್ಯೂಯಾರ್ಕ್** D) ಜಿನೇವಾ

**5. ಜಾಗತಿಕ ಸಂಸತ್ತಿನ ರೀತಿಯಲ್ಲಿ ಕೆಲಸ ಮಾಡುವ ಅಂಗ**

A) ಭದ್ರತಾ ಸಮಿತಿ B) ದತ್ತಿ ಸಮಿತಿ C) ಸಚಿವಾಲಯ D) **ಸಾಮಾನ್ಯ ಸಭೆ**

**6. ಈ ಕೆಳಗಿನವುಗಳಲ್ಲಿ ಯಾವ ದೇಶ ಭದ್ರತಾ ಸಮಿತಿಯ ಕಾಯಂ ಸದಸ್ಯ ರಾಷ್ಟ್ರವಲ್ಲ**

A) ಚೀನಾ B) **ಭಾರತ** C) ಫ್ರಾನ್ಸ್ D) ರಶಿಯಾ

**7. 'ವಿಟೋ ಅಧಿಕಾರ' ಬಳಸುವ ದೇಶಗಳು**

A) ಸಾಮಾನ್ಯ ಸಭೆಯ ಸದಸ್ಯ ದೇಶಗಳು B) ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು

C) **ಭದ್ರತಾ ಸಮಿತಿಯ ಕಾಯಂ ಸದಸ್ಯ ರಾಷ್ಟ್ರಗಳು** D) ಭದ್ರತಾ ಸಮಿತಿಯ ಹಂಗಾಮಿ ಸದಸ್ಯ ರಾಷ್ಟ್ರಗಳು

**8. ದತ್ತಿ ಸಮಿತಿ ಈಗ ನಿಷ್ಕ್ರಿಯವಾಗಿದೆ ಏಕೆಂದರೆ............**

A) **ಈಗ ಯಾವುದೇ ದತ್ತಿ ಉಳಿದಿಲ್ಲ** B) ಇದರ ಕಾರ್ಯಕ್ಷೇತ್ರ ಕಡಿಮೆಯಾಗಿದೆ

C) ಸದಸ್ಯ ರಾಷ್ಟ್ರಗಳು ಇದನ್ನು ವಿರೋಧಿಸಿವೆ D) ಭದ್ರತಾ ಸಮಿತಿ ಇದರ ಕಾರ್ಯನಿರ್ವಹಿಸುತ್ತಿದೆ

**9. ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ**

A) ಅದು ಪ್ಯಾರಿಸ್ನಲ್ಲಿ ಕೇಂದ್ರ ಕಚೇರಿ ಹೊಂದಿದೆ B) ಇತ್ತೀಚಿಗೆ ಭಾರತವು ಖಾಯಂ ಸದಸ್ಯತ್ವ ಪಡೆದಿದೆ

C) ಅದು ಹದಿನೈದು ಕಾಯಂ ಸದಸ್ಯರನ್ನು ಹೊಂದಿದೆ D) **ಅದು ವಿಶ್ವ ಸಂಸ್ಥೆಯ ಸಚಿವ ಸಂಪುಟವಿದ್ದಂತೆ**

10. ಭದ್ರತಾ ಸಮಿತಿಯು ವಿಶ್ವ ಸಂಸ್ಥೆ ಕ್ಯಾಬಿನೆಟ್ ನಂತೆ ಕಾರಣ

A) 5 ಕಾಯಂ ಸದಸ್ಯರನ್ನು ಹೊಂದಿದೆ B) 10 ಹಂಗಾಮಿ ಸದಸ್ಯರನ್ನು ಹೊಂದಿದೆ

C) ವೀಟೋ ಅಧಿಕಾರವನ್ನು ಹೊಂದಿದೆ **D) ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುತ್ತದೆ**

11. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಸಂಖ್ಯೆ

A) 25 B) 31 C) 9 **D) 15**

12. ವಿಶ್ವಸಂಸ್ಥೆಯ ಸಚಿವಾಲಯದ ಶಾಖಾ ಕಚೇರಿ ಈ ನಗರದಲ್ಲಿ ಇಲ್ಲ

**A) ವಾಷಿಂಗ್ಟನ್** B) ಜಿನೇವಾ C) ವಿಯನ್ನಾ D) ನೈರೋಬಿ

13. ವಿಶ್ವ ಆರೋಗ್ಯ ಸಂಸ್ಥೆಯು ಯಾವ ರೋಗವನ್ನು ಸಮಗ್ರವಾಗಿ ನಿವಾರಿಸುವಲ್ಲಿ ಯಶಸ್ಸು ಕಂಡಿದೆ

A) ಕಾಲರ **B) ಸಿಡುಬು** C) ಕೊರೋನಾ D) ಪ್ಲೇಗ್

14. ಜಗತ್ತಿನಾದ್ಯಂತ ವಿಜ್ಞಾನ ಶಿಕ್ಷಣ ಸಂಸ್ಕೃತಿ ಇವುಗಳನ್ನು ಪ್ರೋತ್ಸಾಹಿಸಲು ಉದ್ದೇಶ ಹೊಂದಿರುವ ಆಶ್ರಯ ಸಂಸ್ಥೆ

A) ಯುನಿಸೆಫ್ B) ಅಂತರಾಷ್ಟ್ರೀಯ ಕಾರ್ಮಿಕ ಸಂಘ **C) ಯುನೆಸ್ಕೋ** D) ವಿಶ್ವ ವ್ಯಾಪಾರ ಸಂಘ

15. ಐಎಂಎಫ್ ಕೇಂದ್ರ ಕಚೇರಿ ಇರುವ ನಗರ

**A) ವಾಷಿಂಗ್ಟನ್** B) ನ್ಯೂಯಾರ್ಕ್ C) ಪ್ಯಾರಿಸ್ D) ಲಂಡನ್

16. ವಿಶ್ವಬ್ಯಾಂಕ್ ಎಂದು ಕರೆಯಲ್ಪಡುವ ಸಂಸ್ಥೆ

A) ಐಎಂಎಫ್ **B) ಐ ಬಿ ಆರ್ ಡಿ** C) ಎಫ್ ಎ ಓ D) ಐ ಎಲ್ ಓ

17. ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಕೇಂದ್ರ ಕಚೇರಿ

A) ದೆಹಲಿ **B) ಜಿನೇವಾ** C) ರೋಮ್ D) ನ್ಯೂಯಾರ್ಕ್

18. ತೃತೀಯ ಆರ್ಥಿಕ ಆಧಾರಸ್ತಂಭ ಎಂದು ಕರೆಯಲ್ಪಡುವ ಸಂಸ್ಥೆ

A) ಐಎಂಎಫ್ B) ಐ ಬಿ ಆರ್ ಡಿ C) ವಿಶ್ವ ಕಾರ್ಮಿಕ ಸಂಘ **D) ವಿಶ್ವ ವ್ಯಾಪಾರ ಸಂಘ**

19. ವಿಶ್ವ ವ್ಯಾಪಾರ ಸಂಘವು ವಿಶ್ವದ ತೃತೀಯ ಆರ್ಥಿಕ ಆಧಾರಸ್ತಂಭವಾದರೆ ಮೊದಲೆರಡು ಸ್ತಂಭಗಳ ಎಂದರೆ..........

A) ILO & FAO B) UNESCO & UNICEF **C) IMF & IBRD** D) IBRD & WHO.

20. ಸಾರ್ಕ್ ಸಂಘಟನೆ ಸ್ಥಾಪನೆಯಾದ ವರ್ಷ..........

A) 1945 **B) 1985** C) 1948 D) 1995

21. ಯುರೋಪಿಯನ್ ಯೂನಿಯನ್ ಸಂಸ್ಥೆಯ ಸದಸ್ಯ ರಾಷ್ಟ್ರಗಳ ಸಂಖ್ಯೆ

A) 193 B) 51 **C) 27** D) 54

22. ಆಸಿಯಾನ್ ಸಂಸ್ಥೆಯ ಸ್ಥಾಪಕ ಸದಸ್ಯ ರಾಷ್ಟ್ರವಲ್ಲದು

**A) ಫ್ರಾನ್ಸ್** B) ಸಿಂಗಾಪುರ್ C) ಮಲೇಶಿಯಾ D) ಥೈಲ್ಯಾಂಡ್

23. ಭಾರತ ಯಾವ ಸಹಕಾರ ಸಂಸ್ಥೆಯ ವೀಕ್ಷಕರ ಸ್ಥಾನ ಹೊಂದಿದೆ

A) ಸಾರ್ಕ್ B) ಯುರೋಪಿಯನ್ ಯೂನಿಯನ್ **C) ಆಸಿಯಾನ್** D) ಕಾಮನ್ವೆಲ್ತ್ ರಾಷ್ಟ್ರಸಂಘ

24. ನೂತನ ವಸಾಹತುಶಾಹಿತ್ವದ ವಿರುದ್ಧ ಧ್ವನಿ ಎತ್ತುತ್ತಿರುವ ಜಾಗತಿಕ ಸಂಸ್ಥೆ

A) ಕಾಮನ್ವೆಲ್ತ್ ರಾಷ್ಟ್ರಸಂಘ B)ಯುರೋಪಿಯನ್ ಯೂನಿಯನ್ C)ಅಸಿಯನ್ **D)ದಿ ಆರ್ಗನೈಸೇಷನ್ ಆಫ್ ಆಫ್ರಿಕನ್ ಯುನಿಟಿ**

25. ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ ಯಾವುದು

A) ಅದು ಹದಿನೈದು ಕಾಯಂ ಸದಸ್ಯರನ್ನು ಹೊಂದಿದೆ **B) ಅದು ವಿಶ್ವ ಸಂಸ್ಥೆಯ ಸಚಿವ ಸಂಪುಟವಿದ್ದಂತೆ**

C) ಪ್ಯಾರಿಸ್ ನಲ್ಲಿ ತನ್ನ ಕೇಂದ್ರ ಕಚೇರಿ ಹೊಂದಿದೆ D) ಇತ್ತೀಚಿಗೆ ಭಾರತ ಖಾಯಂ ಸದಸ್ಯತ್ವ ಪಡೆದಿದೆ

C)ಗುಣಮಟ್ಟ ಹಾಗೂ ಪಾರದರ್ಶಕತೆ D) ಹಸಿವು ಮತ್ತು ಬಡತನದ ನಿರ್ಮೂಲನೆ

**27. ವಿಶ್ವ ಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ**

A) ವಿಶ್ವ ವ್ಯಾಪಾರ ಸಂಸ್ಥೆ B) **ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ** C) ಐಎಂಎಫ್ D) ಯುನಿಸೆಫ್

**28. ಯುರೋಪಿಯನ್ ಯೂನಿಯನ್ ಒಂದು ಸಂಯುಕ್ತ ರಾಜ್ಯವನ್ನು ಹೋಲುತ್ತದೆ ಏಕೆಂದರೆ ಇದರ ಸದಸ್ಯ ರಾಷ್ಟ್ರಗಳು**

A) **ತಮ್ಮ ಸಾರ್ವಭೌಮರ ಗಮನಾರ್ಹ ಅಂಶವನ್ನು ಈ ಸಂಸ್ಥೆಗೆ ನೀಡಿವೆ** B) ಸದಸ್ಯ ರಾಷ್ಟ್ರಗಳು ದೇಣಿಗೆ ನೀಡುತ್ತವೆ

C) ತಮ್ಮ ಪ್ರದೇಶವನ್ನು ಬಿಟ್ಟುಕೊಟ್ಟಿವೆ D) ಮಿಲಿಟರಿ ಪಡೆಯನ್ನು ನೀಡಿವೆ

# ಸಮಾಜಶಾಸ್ತ್ರ

## 1.ಸಾಮಾಜಿಕ ಸ್ತರ ವಿನ್ಯಾಸ

**1. ಸಾಮಾಜಿಕ ಸ್ತರ ವಿನ್ಯಾಸ ಎಂದರೆ ....**

A) **ಜನರನ್ನು ಲಿಂಗ,ಜಾತಿ,ವೃತ್ತಿ,ವರ್ಗ ಜನಾಂಗ ಇತ್ಯಾದಿಗಳ ಆಧಾರದ ಮೇಲೆ ಶ್ರೇಣೀಕರಣಗಳಿರುವುದು .**

B) ಸಾಮಾಜಿಕ ನ್ಯಾಯ ನೀಡುವುದು .

C) ಸಮಾನ ಸಾಮಾಜಿಕ ಅವಕಾಶ ಒದಗಿಸುವುದು.

D) ಸ್ನೇಹ ಬಾಂಧವ್ಯಗಳ ವೃದ್ಧಿ .

**2. ಸಾಮಾಜಿಕ ಅಸಮಾನತೆಯ ಸ್ವರೂಪವನ್ನು ಹೇಗೆ ತಿಳಿಯುತ್ತೇವೆ ಎಂದರೆ ...**

A) ಆರೋಗ್ಯದ ಅವಕಾಶಗಳ ನಿರ್ಲಕ್ಷ್ಯತೆಯಿಂದ . B) ಜಾತಿ ಮೂಲ ಮತ್ತು ವರ್ಗ ಮೂಲಗಳಿಂದ .

C) ಲಿಂಗತ್ವ ಮೂಲಗಳ ನಿರ್ಲಕ್ಷ್ಯತೆಯಿಂದ . D) **ಸಾಮಾಜಿಕ ಭದ್ರತೆಗಳಾದ ಆಹಾರ-ಆರೋಗ್ಯ ಅವಕಾಶಗಳು, ಜಾತಿಮೂಲ, ವರ್ಗಮೂಲ, ಮತ್ತು ಲಿಂಗತ್ವ ಮೂಲಗಳ ನಿರ್ಲಕ್ಷ್ಯತೆಯಿಂದ.**

**3. 14 ವರ್ಷದ ಒಳಗಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಹೇಳುವ ಸಂವಿಧಾನದ ವಿಧಿ..**

A) 17 ನೇ ವಿಧ B) 30 ನೇ ವಿಧಿ C) **45 ನೇ ವಿಧಿ** D) 21 ಎ ವಿಧಿ.

**4. 'ಶಿಕ್ಷಣ' ಒಂದು ಮೂಲಭೂತ ಹಕ್ಕು ಎಂದು ಹೇಳುವ ಸಂವಿಧಾನದ ವಿಧಿ ...**

A) 17 ನೇ ವಿಧಿ B) 19 ನೇ ವಿಧಿ C) **21 ಎ ವಿಧಿ** D) 45 ನೇ ವಿಧಿ

**5. ಸಾಮಾಜಿಕ ಸ್ತರ ವಿನ್ಯಾಸವು ಪುರಾತನವಾದದ್ದು ಹೇಗೆಂದರೆ ..**

A) ಎಲ್ಲ ಮಾನವ ಸಮಾಜದಲ್ಲೂ ಕಂಡುಬರುತ್ತದೆ. B)**ಮಾನವ ಸಾಮುದಾಯಿಕ ಜೀವನ ಕ್ರಮ ಆರಂಭಿಸಿದಾಗಿನಿಂದಲೂ ರೂಢಿಯಲ್ಲಿದೆ** .C) ಸ್ತರ ವಿನ್ಯಾಸವೂ ವ್ಯಕ್ತಿಗಳ ದೈಹಿಕ ಗುಣಗಳನ್ನು ಆಧರಿಸಿದೆ . D) ಜಾತಿ ಸಿದ್ಧಾಂತ ತತ್ವದ ಅಡಿಯಲ್ಲಿ ರೂಪಿತವಾಗಿದೆ .

**6. ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರವಾದ ಅಭಿವ್ಯಕ್ತಿ." ಇದು ಹಿಂದೂ ಸಮಾಜದ ಶರೀರವನ್ನು ಕುಷ್ಠರೋಗದ ಹುಣ್ಣಿನಂತೆ ಪೀಡಿಸುತ್ತದೆ". ಈ ಹೇಳಿಕೆ ನೀಡಿದವರು ....**

A) ಅಂಬೇಡ್ಕರ್ B) ಸ್ವಾಮಿ ವಿವೇಕಾನಂದರು C) **ಮಹಾತ್ಮ ಗಾಂಧೀಜಿ** D) ಕುಪ್ಪುಸ್ವಾಮಿ

**7. 'ಶಿಕ್ಷಣ ಸಾರ್ವಜನಿಕ ಸ್ವತ್ತಾಗಬೇಕು, ಎಂದು ಪ್ರತಿಪಾದಿಸಿದವರು ....**

A) **ಅಂಬೇಡ್ಕರ್** B) ಸ್ವಾಮಿ ವಿವೇಕಾನಂದರು C) ಮಹಾತ್ಮ ಗಾಂಧೀಜಿ D) ಬಿ.ಕುಪ್ಪುಸ್ವಾಮಿ

**8. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿಗೆ ಬಂದಿದ್ದು -------- ರಲ್ಲಿ .**

A) 1976 B) **1955** C)1989 D) 2001

**9. ಸಂವಿಧಾನದ-------- ವಿಧಿಯು ಅಲ್ಪಸಂಖ್ಯಾತರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡಿದೆ .**

A) 17 ನೇ ವಿಧಿ B) 19 ನೇ ವಿಧಿ C) 21 ಎ ವಿಧಿ D) **30 ನೇ ವಿಧಿ**

**10. ಅಸ್ಪೃಶ್ಯತಾ ಆಚರಣೆ ಒಂದು ಶಿಕ್ಷಾರ್ಹ ಅಪರಾಧ ಎಂದು ಹೇಳಿದ ಸಂವಿಧಾನದ ವಿಧಿ ..**

A) **17 ನೇ ವಿಧಿ** B) 19 ನೇ ವಿಧಿ C) 21 ಎ ವಿಧಿ D) 24 ನೇ ವಿಧಿ

**11. ವ್ಯಕ್ತಿಗಳು ಮಾಜದಲ್ಲಿ ವಿವಿಧ ಲಕ್ಷಣಗಳ ಆಧಾರದಲ್ಲಿ ಶ್ರೇಣೀಕರಣಗೊಂಡಿರುತ್ತಾರೆಂಬುದನ್ನು ಸೂಚಿಸುವುದು.**

A) ಸಾಮಾಜಿಕ ಸಮಾನತೆ B) ಸಾಮಾಜಿಕ ಅಸಮಾನತೆ C) ಸಾಮಾಜೀಕರಣ ಪ್ರಕ್ರಿಯೆ D) **ಸಾಮಾಜಿಕ ಸ್ತರವಿನ್ಯಾಸ**

**12. ಸಾಮಾಜಿಕ ಅಸಮಾನತೆ ಎನ್ನುವುದು ಈಗಾಗಲೇ ಸಮಾಜದಲ್ಲಿರುವ ಈ ಕೆಳಗಿನ ಅಂಶಗಳ ಪ್ರತಿಫಲವಾಗಿದೆ**

A) **ಅಸಮಾನ ಸಾಮಾಜಿಕ ಅವಕಾಶಗಳು** B) ಸಾಮಾಜಿಕ ಸ್ತರವಿನ್ಯಾಸಗಳು

C) ಸಮಾನ ಸಾಮಾಜಿಕ ಅವಕಾಶಗಳು D) ಲಿಂಗತ್ವ ಅಸಮಾನತೆಗಳು

**13. ಶಿಕ್ಷಣಕ್ಕಿರುವ ಸಾಮಾಜಿಕ ನ್ಯಾಯದ ಉದ್ದೇಶಗಳನ್ನು ನಮ್ಮ ಸಂವಿಧಾನದ ಈ ಭಾಗಗಳಲ್ಲಿ ಕಾಣಬಹುದು**

A) ಪ್ರಸ್ತಾವನೆ ಮತ್ತು ಮೂಲಭೂತ ಹಕ್ಕುಗಳು B) ಪ್ರಸ್ತಾವನೆ ಮತ್ತು ಮೂಲಭೂತ ಕರ್ತವ್ಯಗಳು

C) ಮೂಲಭೂತ ಕರ್ತವ್ಯಗಳು ಮತ್ತು ಮೂಲಭೂತ ಹಕ್ಕುಗಳು D) **ಪ್ರಸ್ತಾವನೆ ಮತ್ತು ರಾಜ್ಯ ನಿರ್ದೇಶಕ ತತ್ವಗಳು**

**14. 1993ರಲ್ಲಿ ಸುಪ್ರೀಂ ಕೋರ್ಟ್ ಉನ್ನೀಕೃಷ್ಣನ್ V/S ಆಂದ್ರಪದೇಶ ಸರ್ಕಾರದ ಮೊಕದ್ದಮೇಗೆ ಸಂಬಂಧಿಸಿದಂತೆ ನೀಡಿದ ತೀರ್ಪು ಈ ಕೆಳಗಿನ ಅಂಶಕ್ಕೆ ಸಂಬಂಧಿಸಿದೆ.**

A) ಅಸ್ಪೃಶ್ಯತಾ ಆಚರಣೆ ಶಿಕ್ಷಾರ್ಹ ಅಪರಾಧ B) **ಶಿಕ್ಷಣ ಮೂಲಭೂತ ಹಕ್ಕು**

C) ಲಿಂಗ ತಾರತಮ್ಯ ಶಿಕ್ಷಾರ್ಹ ಅಪರಾಧ D) ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ

**15. ಸ್ತರ ವಿನ್ಯಾಸವನ್ನು ವ್ಯಕ್ತಿಗಳ ದೈಹಿಕ ಗುಣಗಳನ್ನಾಧರಿಸದೇ ಸಾಮಾಜಿಕ ....... ಮತ್ತು ......... ಆದಾರದಿಂದ ನಿರ್ಧರಿಸಲಾಗುತ್ತದೆ.**

A) ಶಿಕ್ಷಣ ಮತ್ತು ಪುರಸ್ಕಾರ B) **ಮಾನ್ಯತೆ ಮತ್ತು ಪ್ರಾಮುಖ್ಯತೆಗಳು**

C) ಸ್ನೇಹ ಮತ್ತು ಭಾಂಧವ್ಯಗಳು D) ವಿರೋಧ ಮತ್ತು ಅಸಮಾನತೆ

**16. ಭಾರತದಲ್ಲಿ ರೂಢಿಯಲ್ಲಿದ್ದ ಚಾತುರ್ವರ್ಣ ವ್ಯವಸ್ಥೆ ಎಂಬುದು**

A) ಸಾಮಾಜೀಕರಣ ಪ್ರಕ್ರಿಯೆ ವ್ಯವಸ್ಥೆ B) **ಸಾಮಾಜಿಕ ವಿಭಜನಾ ವ್ಯವಸ್ಥೆ**

C) ಸಾಮಾಜಿಕ ಸಮಾನತೆಯ ವ್ಯವಸ್ಥೆ D) ಸಾಮಾಜಿಕ ಬದಲಾವಣೆ ವ್ಯವಸ್ಥೆ

**17. ಚಾತುರ್ವರ್ಣ ವ್ಯವಸ್ಥೆಯು ರೂಪಿತಗೊಂಡಿದ್ದು**

A) **ಕರ್ಮ ಸಿದ್ಧಾಂತದ ತತ್ವದಡಿಯಲ್ಲಿ** B) ವರ್ಣ ಸಿದ್ಧಾಂತದ ತತ್ವದಡಿಯಲ್ಲಿ

C) ಜಾತಿ ಸಿದ್ಧಾಂತದ ತತ್ವದಡಿಯಲ್ಲಿ D) ಜ್ಞಾನ ಸಿದ್ಧಾಂತದ ತತ್ವದಡಿಯಲ್ಲಿ

**18. 1976ರಲ್ಲಿ ಅಸ್ಪೃಶ್ಯತಾ ಕಾಯ್ದೆಯನ್ನು ಹೀಗೆ ತಿದ್ದುಪಡಿ ಮಾಡಲಾಗಿದೆ.**

A) ಪರಿಶಿಷ್ಟ ಪಂಗಡದ ಕಾಯ್ದೆ B) **ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ**

C) ಅಸ್ಪೃಶ್ಯತಾ ನಿರ್ಮೂಲನಾ ಕಾಯ್ದೆ D) ನಾಗರಿಕ ಸಮಾನ ಹಕ್ಕು ಕಾಯ್ದೆ

**19. ಭಾರತದ ಅಸ್ಪೃಶ್ಯ ವರ್ಗ & ಗುಡ್ಡುಗಾಡು ವರ್ಗದ ಜನರನ್ನು ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ ಎಂಬುದಾಗಿ ಹೆಸರಿಸಿದ ಕಾಯ್ದೆ**

A) 1928ರ ಕೇಂದ್ರ ಕಾಯ್ದೆ B) **1935ರ ಕೇಂದ್ರ ಕಾಯ್ದೆ** C) 1947ರ ಸ್ವಾತಂತ್ರ್ಯ ಶಾಸನ D) 1976ರ ನಾಗರಿಕ ಕಾಯ್ದೆ

**20. 1989ರ ಶಾಸನದಂತೆ ಅಸ್ಪೃಶ್ಯತೆ ನಿರ್ಮೂಲನೆ ವಿಶೇಷ ಜವಾಬ್ದಾರಿಯನ್ನು ಇವರಿಗೆ ವಹಿಸಲಾಗಿದೆ**

A) ಜಿಲ್ಲಾ ಪಂಚಾಯತ B) ತಾಲೂಕ ಪಂಚಾಯತ C) ಕೇಂದ್ರ ಸರ್ಕಾರ D) **ರಾಜ್ಯ ಸರ್ಕಾರ**

## 2.ದುಡಿಮೆ

**1. 'ದಿ ರಿಪಬ್ಲಿಕ್' ಕೃತಿಯ ಕರ್ತೃ**

A) ಅರಿಸ್ಟಾಟಲ್ B) ಕಾರ್ಲಮಾರ್ಕ್ಸ್ C) ಸಾಕ್ರೆಟಿಸ್ D) **ಪ್ಲೇಟೋ**

**2. ಶ್ರಮ ವಿಭಜನೆಯಲ್ಲಿ ಈ ಆಯಾಮ ಇರಬಾರದು**

A) ಹಂಚಿಕೆಯ ಆಯಾಮ B) ಲಾಭದ ಆಯಾಮ C) **ಶೋಷಣೆಯ ಆಯಾಮ** D) ವಿನ್ಯಾಸದ ಆಯಾಮ

**3. 'ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ' ಇದನ್ನು ಹೇಳಿದವರು.**

A) ಪ್ಲೇಟೋ B) ಅರಿಸ್ಟಾಟಲ್ C) ಗಾಂಧೀಜಿ D) **ಕಾರ್ಲ್‌ಮಾರ್ಕ್ಸ್**

**4. ಮಾಹಿತಿ ಅಥವಾ ಡಿಜಿಟಲ್ ಸಮಾಜದಲ್ಲಿ ಶ್ರಮ ವಿಭಜನೆ ಈ ಮೂಲಕ ಉಂಟಾಗಿದೆ**

A) **ಗಣಕಯಂತ್ರಗಳಿಂದ** B) ಕೈಗಾರಿಕೆಗಳಿಂದ C) ಮೋಬೈಲ್ ಗಳಿಂದ D) ಯಾವುದೂ ಅಲ್ಲ

**5. ಶ್ರಮವಿಭಜನೆಯು ಇದಕ್ಕೆ ಕಾರಣವಾಗುವುದು**

A) ನಿರುದ್ಯೋಗ B) **ವಿಶೇಷ ಪರಿಣಿತಿ** C) ಲಾಭಗಳಿಕೆ D) ವರ್ಗ ವ್ಯವಸ್ಥೆ

**6. ಭೂರಹಿತ ಕೃಷಿ ಕಾರ್ಮಿಕರನ್ನು ಈ ಕೆಲಸಗಾರರೆಂದು ಕರೆಯುತ್ತಾರೆ.**

A)ಸಂಘಟಿತ ಕೆಲಸಗಾರರು B)**ಅಸಂಘಟಿತ ಕೆಲಸಗಾರರು** C)ಸಂಭಾವನೆ ಸಹಿತ ಕೆಲಸಗಾರರು D)ಸಂಭಾವನೆ ರಹಿತ ಕೆಲಸಗಾರರು

7. **ವೈದ್ಯಕೀಯ ಸಂಸ್ಥೆಗಳ ಕೆಲಸಗಾರರನ್ನು ಈ ಕೆಲಸಗಾರರೆಂದು ಕರೆಯುತ್ತಾರೆ.**

A)**ಸಂಘಟಿತ ಕೆಲಸಗಾರರು** B)ಅಸಂಘಟಿತ ಕೆಲಸಗಾರರು C)ಸಂಭಾವನೆ ಸಹಿತ ಕೆಲಸಗಾರರು D)ಸಂಭಾವನೆ ರಹಿತ ಕೆಲಸಗಾರರು

**8. ಉದ್ದೇಶವೊಂದರ ಸಾಧನೆಗಾಗಿ ನಡೆಸಲಾಗುವ ಕಾರ್ಯ ..........**

A) ಸಂಭಾವನೆ B) **ದುಡಿಮೆ** C) ಸೇವೆ D) ಕರ್ತವ್ಯ

**9. ಸಂಭಾವನೆ ರಹಿತ ದುಡಿಮೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಕೆಲಸ.....**

A) **ಕೌಟುಂಬಿಕ ದುಡಿಮೆ** B) ದಾದಿಯರ ಸೇವೆ C) ವಕೀಲರ ಸೇವೆ D) ಶಿಕ್ಷಕರ ಕೆಲಸ

**10. ಭಾರತದಲ್ಲಿ ದುಡಿಯುತ್ತಿರುವ ಕಾರ್ಮಿಕರಲ್ಲಿ ಹೆಚ್ಚು ಚರ್ಚೆಗೆ ಒಳಗಾಗಿರುವ ವಿಷಯ**

A) ಸಂಭಾವನೆ ಸಹಿತ ಪುರುಷ ಕೌಟುಂಬಿಕ ದುಡಿಮೆ B) ಸಂಭಾವನೆ ರಹಿತ ಪುರುಷ ಕೌಟುಂಬಿಕ ದುಡಿಮೆ

C) ಸಂಭಾವನೆ ಸಹಿತ ಮಹಿಳಾ ಕೌಟುಂಬಿಕ ದುಡಿಮೆ D) **ಸಂಭಾವನೆ ರಹಿತ ಮಹಿಳಾ ಕೌಟುಂಬಿಕ ದುಡಿಮೆ**

**11. ಭಾರತದ ಸಾಮಾಜಿಕ ವ್ಯವಸ್ಥೆಯೊಳಗೆ ಒಬ್ಬ ವ್ಯಕ್ತಿ ಕೆಳಗಿನಿಂದ ಮೇಲ್ಮುಖವಾಗಿ ಅಧಿಕಾರ,ಅಂತಸ್ತು ಪಡೆಯುವತ್ತ ಚಲಿಸಿದರೆ ಅವರ..........**

A) ಆದಾಯ ಮತ್ತು ಅಧಿಕಾರ ಎರಡೂ ಕಡಿಮೆಯಾಗುತ್ತದೆ B) ಆದಾಯ ಹೆಚ್ಚಿ ,ಅಧಿಕಾರ ಕಡಿಮೆಯಾಗುತ್ತದೆ

C) **ಆದಾಯ ಮತ್ತು ಅಧಿಕಾರ ಎರಡೂ ಹೆಚ್ಚಾಗುತ್ತವೆ** D) ಆದಾಯ ಕಡಿಮೆಯಾಗಿ,ಅಧಿಕಾರ ಹೆಚ್ಚುತ್ತದೆ

**12. ವಿದ್ಯಾರ್ಥಿಗಳು ಕಾಲೇಜಿನಲ್ಲಿ NSS ಅಡಿಯಲ್ಲಿ ಕೈಗೊಳ್ಳುವ ಶ್ರಮ ಆಧಾರಿತ ಚಟುವಟಿಕೆಗಳು ಈ ದುಡಿಮೆಯಾಗಿದೆ.**

A) ಸಂಭಾವನೆ ಸಹಿತ ದುಡಿಮೆ B) ಅರೆಕಾಲಿಕ ದುಡಿಮೆ C) **ಸಂಭಾವನೆ ರಹಿತ ದಡಿಮೆ** D) ಸಂಘಟಿತ ವಲಯದ ದುಡಿಮೆ

**13. ಸಮಾಜದಲ್ಲಿ ದಡಿಮೆಗಳಲ್ಲಿ ಅಸಮಾನತೆ ಪ್ರಾರಂಭವಾಗುವುದು.....**

A) ವಿಶೇಷ ಪರಿಣತಿಯ ನಂತರ B) ಶ್ರೇಣಿಯಾಧಾರಿತ ವಿಭಜನೆಯ ನಂತರ

C) **ಶ್ರಮವಿಭಜನೆಯ ನಂತರ** D) ಸಾಮಜಿಕ ವಿಭಜನೆಯ ನಂತರ

**14. ಇಂದಿನ ಮಾಹಿತಿ ಸಮಾಜ ಅಥವಾ ಡಿಜಿಟಲ್ ಸಮಾಜದಲ್ಲಿ ಶ್ರಮ ವಿಭಜನೆಯ ಪ್ರಕಾರಗಳು ರೂಪಾಂತರಗೊಂಡಿರುವುದು.....**

A) ಯಂತ್ರೋಪಕರಣಗಳ ಮೂಲಕ B) ಸಾಮಾಜಿಕ ವಿನ್ಯಾಸದ ಮೂಲಕ

C) ವಿಶೇಷ ಪರಿಣತಿಯ ಮೂಲಕ D) **ಗಣಕ ಯಂತ್ರಗಳ ಮೂಲಕ**

**15. 'ಮಾನವ ಸಮಾಜವು ಸ್ವಾಭಾವಿಕ ಅಸಮಾನತೆಗಳಿಂದ ರೂಪುಗೊಳ್ಳುತ್ತದೆ, ಈ ಸ್ವಾಭಾವಿಕ ಅಸಮಾನತೆಯು ಶ್ರಮವಿಭಜನೆಯಿಂ ಕೂಡಿರುತ್ತದೆ'–ಎಂದವರು.**

A) **ಪ್ಲೇಟೋ** B) ಅರಿಸ್ಟಾಟಲ್ C) ಗಾಂಧೀಜಿ D) ಕಾರ್ಲ್‌ಮಾರ್ಕ್ಸ್

**16. ಕಾರ್ಲ್‌ಮಾರ್ಕ್ಸ್ ರವರ ಪ್ರಕಾರ "ವರ್ಗ,ಸ್ಥಾನ ಮತ್ತು ಏಣಿ ಶ್ರೇಣಿಯ ಮೂಲಕ ಸಾಮಾಜಿಕ ನಿಯಂತ್ರಣವನ್ನು ಸಾಧಿಸುತ್ತಿರುವ ಶ್ರಮ ವಿಭಜನೆಯೆಂದರೆ....**

A) ಔದ್ಯೋಗಿಕ ಶ್ರಮ ವಿಭಜನೆ. B) ಕೈಗಾರಿಕಾ ಶ್ರಮ ವಿಭಜನೆ. C) ಆರ್ಥಿಕ ಶ್ರಮ ವಿಭಜನೆ. D) **ಸಾಮಾಜಿಕ ಶ್ರಮ ವಿಭಜನೆ.**

**17. ಈ ಕೆಳಗಿನವುಗಳಲ್ಲಿ ಯಾವುದು ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳ ಪಟ್ಟಿಯಲ್ಲಿ ಇಲ್ಲ..**

A) ವಲಸೆ, ಬಾಲಕಾರ್ಮಿಕ ಪದ್ಧತಿ ಪೋಷಣೆ. B) ಸಾಮಾಜಿಕ ಭದ್ರತೆ, ಕಾನೂನಾತ್ಮಕ ಬೆಂಬಲ ಇಲ್ಲ.

C) ನಿಗದಿತ ವೇತನ ಮತ್ತು ಭತ್ಯೆಗಳು D) ದೈಹಿಕ ಮತ್ತು ಮಾನಸಿಕ ದೌರ್ಜನ್ಯ.

**18. ಸಾಮಾಜಿಕ ಭದ್ರತೆ ಎಂದರೆ "ಮಾನವನ ಬದುಕಿಗೆ ಅಗತ್ಯವಾದ ವಸತಿ, ಆರೋಗ್ಯ, ಆಹಾರ' ಕುಡಿಯುವ ನೀರು' ದುಡಿಯುವ ಸಮಾನ ಅವಕಾಶ ಇತ್ಯಾದಿಗಳನ್ನು ಒದಗಿಸಿಕೊಡುವುದು." ಆದರೆ ಇವು ಈ ವಲಯದ ಕಾರ್ಮಿಕರಿಗೆ ದೊರೆಯುತ್ತಿಲ್ಲ...**

A) ಸೈನಿಕರು B) ಸರ್ಕಾರಿ ಸೇವಾ ವಲಯಗಳು C) **ಅಸಂಘಟಿತ ಕಾರ್ಮಿಕ ವಲಯ.** D) ಸಂಘಟಿತ ಕಾರ್ಮಿಕ ವಲಯ.

**19. ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ಲಿಂಗ ಇತ್ಯಾದಿಗಳ ಆಧಾರದ ಮೇಲೆ ಹಂಚಿಕೊಂಡು ಮಾಡುವುದನ್ನೇ ------ ಎನ್ನುವರು.**

A) ದುಡಿಮೆ B) **ಶ್ರಮ ವಿಭಜನೆ** C) ಸಾಮಾಜಿಕ ಭದ್ರತೆ D) ವಿಶೇಷ ಪರಿಣಿತಿ

**20. ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣಿತಿ, ತರಬೇತಿ ಅಥವಾ ಕೌಶಲ್ಯವನ್ನು ಪಡೆಯುವುದನ್ನು------ಎನ್ನುತ್ತೇವೆ.**

A) **ವಿಶೇಷ ಪರಿಣಿತಿ** B) ವಿಶೇಷ ಪಾಂಡಿತ್ಯ C) ವಿಶೇಷ ತರಬೇತಿ D) ವಿಶೇಷ ಕೌಶಲ್ಯ

**21. "ವ್ಯಕ್ತಿಯೊಬ್ಬನ ಪರಿಶ್ರಮದಿಂದ ಆತನಿಗೆ ಆರ್ಥಿಕ ಅಥವಾ ವಸ್ತು ರೂಪದ ಪ್ರತಿಫಲ ಸಿಗುವುದಿದ್ದರೆ ಅದನ್ನು ಹೀಗೆನ್ನಬಹುದು."**

A) ಸಂಭಾವನೆ B) **ದುಡಿಮೆ** C) ವಸ್ತು ರೂಪದ ಪ್ರತಿಫಲ D) ಆರ್ಥಿಕ ಪ್ರತಿಫಲ

**22. ಈ ಕೆಳಗಿನವುಗಳಲ್ಲಿ ಅಸಂಘಟಿತ ವಲಯದ ದುಡಿಮೆಗಾರರ ಸರಿಯಾದ 2 ಗುಂಪುಗಳನ್ನು ಆಯ್ಕೆ ಮಾಡಿ. 1. ಕೃಷಿಕರು.ಬೀಡಿ ಕಾರ್ಮಿಕರು. ಬೀದಿ ಬದಿ ವ್ಯಾಪಾರಿಗಳು. 2. ಶಾಲೆಗಳು, ಆಸ್ಪತ್ರೆಗಳು, ಕೈಗಾರಿಕೆಗಳು. 3. ವಾಣಿಜ್ಯ ಬ್ಯಾಂಕುಗಳು, ಜೀವವಿಮಾ ಕಂಪನಿಗಳು, ಸೈನ್ಯ. 4. ಗಣಿಗಾರಿಕೆ, ವಾಹನ ರಿಪೇರಿ, ಕಟ್ಟಡ ಕಾರ್ಮಿಕರು.**

A) 3 ಮತ್ತು 4 B) 2 ಮತ್ತು 3 C) 1 ಮತ್ತು 2 D) **1 ಮತ್ತು 4**

**23. 'ಅಸಂಘಟಿತ ವಲಯದ ಕಾರ್ಮಿಕರು ಜೀವನೋಪಾಯಕ್ಕೆ ಪ್ರತಿದಿನ ದುಡಿಯಲೇ ಬೇಕಾದ ಪರಿಸ್ಥಿತಿ ಇರುವುದರಿಂದ ವಲಸೆ ಅನಿವಾರ್ಯವಾಗಿದೆ.' ಎಂದು ------ ಪುಸ್ತಕದಲ್ಲಿ ವಿಶ್ಲೇಷಣೆ ಮಾಡಲಾಗಿದೆ.**

A) ಪಾಲಿಟಿಕ್ಸ್ B) ದಾಸ್ ಕ್ಯಾಪಿಟಲ್ C) **ಫುಟ್ ಲುಜರ್ಸ್** D) ರಿಪಬ್ಲಿಕ್

**24. ದುಡಿಮೆಗೆ ಪ್ರತಿಫಲವಾಗಿ ಹಣವನ್ನು ನೀಡದೆ ವಸ್ತುಗಳು ನೀಡುವ ಪದ್ಧತಿ**

A) **ಸಾಟಿ ವಿನಿಮಯ ಪದ್ಧತಿ** B) ಹಣ ವಿನಿಮಯ ಪದ್ಧತಿ C) ವೇತನ ನೀಡುವ ಪದ್ಧತಿ D) ಯಾವುದು ಅಲ್ಲ

**25. ಇಬ್ಬರು ವ್ಯಕ್ತಿಗಳು ಒಂದೇ ಕೆಲಸವನ್ನು ಒಂದೇ ಸಮಯದಲ್ಲಿ ಮಾಡಿದಾಗ ಒಬ್ಬರಿಗೆ ಹೆಚ್ಚು ವೇತನ ಮತ್ತೊಬ್ಬರಿಗೆ ಕಡಿಮೆ ವೇತನ ನೀಡುವುದನ್ನು ಹೀಗೆನ್ನುತ್ತಾರೆ**

A) ವಿಶೇಷ ಪರಿಣಿತಿ B) **ದುಡಿಮೆಯಲ್ಲಿ ಅಸಮಾನತೆ** C) ಶ್ರಮ ವಿಭಜನೆ D) ಅಸಂಘಟಿತರು

## 3.ಸಾಮಾಜಿಕ ಚಳುವಳಿಗಳು

**1. ಧಾರ್ಮಿಕ ಚಳುವಳಿಗಳು ಇದಕ್ಕೆ ಕಾರಣವಾದವು**

A) ಸಾಮಾಜಿಕ ಕೆಳಮುಖ ಚಲನೆಗೆ B)**ಸಾಮಾಜಿಕ ಮೇಲ್ಮುಖ ಚಲನೆಗೆ** C)ರಾಜಕೀಯ ಅಶಾಂತಿಗೆ D)ಮೇಲಿನ ಎಲ್ಲವೂ

**2. ಭಾರತದಲ್ಲಿ ಪ್ರಾರಂಭವಾದ ಮೊಟ್ಟಮೊದಲ ಪರಿಸರ ಚಳುವಳಿ**

A) ಚಿಪ್ಕೋ ಚಳುವಳಿ B) ಅಪ್ಪಿಕೊ ಚಳುವಳಿ C) ನರ್ಮದಾ ಚಳುವಳಿ D) **ಜಾರ್ಖಂಡ್ ಮುಕ್ತಿ ಮೋರ್ಚಾ ಚಳುವಳಿ**

**3. ವಿಶ್ವ ಬ್ಯಾಂಕ್ ಪ್ರಾಯೋಜಿತ ಅಭಿವೃದ್ಧಿ ಯೋಜನೆಗಳು ಆದಿವಾಸಿಗಳನ್ನು ಸ್ಥಳಾಂತರ ಮಾಡಲು ಆರಂಭಿಸಿದಾಗ ಉಂಟಾದ ಚಳುವಳಿಗಳು**

A) ಧಾರ್ಮಿಕ ಚಳುವಳಿ B) ಅಸ್ಪೃಶ್ಯತಾ ಚಳುವಳಿ C) **ಪರಿಸರ ಚಳುವಳಿ** D) ಮಹಿಳಾ ಚಳುವಳಿ

**4. ಚಿಪ್ಕೋ ಚಳುವಳಿ ಆರಂಭವಾದ ಸ್ಥಳ**

A) **ರೆನ್ನಿ ಗ್ರಾಮ** B) ಕಾರವಾರ C) ಸಲ್ಯಾನೀ ಗ್ರಾಮ D) ಪಾಲ್ಘಾಟ್

**5. ಚಿಪ್ಕೋ ಚಳುವಳಿ ನಡೆದ ವರ್ಷ..............**

A) 1983 B) 1976 C) **1974** D) 1874

**6. ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದವರು**

A) **ಮೇಧಾ ಪಾಟ್ಕರ್** B) ಡಾ: ಶಿವರಾಂ ಕಾರಂತ್ C) ಸುಂದರಲಾಲ್ ಬಹುಗುಣ D) ಮಹಾತ್ಮ ಗಾಂಧಿ

**7. 1980 ರ ದಶಕದಲ್ಲಿ ಪಕ್ಷಾತೀತವಾಗಿ ನಡೆದ ಸಾಮೂಹಿಕ ಚಳುವಳಿಗಳಲ್ಲಿ ಪ್ರಮುಖವಾದದ್ದು**

A) ಪರಿಸರ ಚಳುವಳಿ B) **ಮಹಿಳಾ ವಿಮೋಚನಾ ಚಳುವಳಿ** C) ರಾಜಕೀಯ ಚಳುವಳಿ D) ಕಾರ್ಮಿಕ ಚಳುವಳಿ

**8. ಮಹಿಳೆಯರಿಂದ ಮದ್ಯಪಾನ ನಿಷೇಧ ಚಳುವಳಿ ಈ ಚಳುವಳಿಯ ಒಂದು ಭಾಗವಾಗಿ ರೂಪುಗೊಂಡಿತು**

A) **ಚಿಪ್ಕೋ ಚಳುವಳಿ** B) ಅಪ್ಪಿಕೋ ಚಳುವಳಿ C) ಕೈಗಾ ಚಳುವಳಿ D) ಕಾರ್ಮಿಕ ಚಳುವಳಿ

**9. ಕರ್ನಾಟಕದಲ್ಲಿ ಎಪ್ಪತ್ತರ ದಶಕದಲ್ಲಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದ ನಾಯಕ**

A) ರಾಮಕೃಷ್ಣ ಹೆಗಡೆ B) ಬಸವಲಿಂಗಪ್ಪ C) **ಡಿ ದೇವರಾಜ ಅರಸು** D) ಎಸ್ ನಿಜಲಿಂಗಪ್ಪ

**10. ಅಸ್ಪೃಶ್ಯತಾ ವಿರೋಧಿ ಚಳುವಳಿಗೆ ತೀವ್ರ ರೂಪ ನೀಡಿದವರು**

A) ಮಹಾತ್ಮ ಗಾಂಧೀಜಿ B) **ಡಾ:ಬಿ ಆರ್ ಅಂಬೇಡ್ಕರ್** C) ಜ್ಯೋತಿರಾವ್ ಫುಲೆ D) ಪೆರಿಯಾರ್ ರಾಮಸ್ವಾಮಿ

**11. ಇದು ದೊಂಬಿಗೆ ಸಂಬಂಧಿಸಿದ ಉದಾಹರಣೆಯಲ್ಲ.**

A) ರಾಜಕೀಯ ಗುಂಪುಗಳ ನಡುವಿನ ಘರ್ಷಣೆ. B) ಜನಾಂಗೀಯ ಕಲಹ.

C) ಕೋಮು ಗಲಭೆ D) **ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನಸಮೂಹ**

**12. ಕರ್ನಾಟಕದ ಮಾಜಿ ಮುಖ್ಯಮಂತ್ರಿ ದೇವರಾಜ ಅರಸರು ಜಾರಿಗೆ ತಂದ ಕ್ರಾಂತಿಕಾರಿ ಸುಧಾರಣೆಯಲ್ಲಿ ಇಲ್ಲದ ಅಂಶವೆಂದರೆ....**

A) ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದರು B) **ಅಸ್ಪೃಶ್ಯತೆ ನಿಷೇಧ ಶಾಸನ ಜಾರಿಗೆ ತಂದರು**

C) ಗೇಣಿದಾರರನ್ನು ಭೂಮಾಲೀಕರಿಂದ ರಕ್ಷಿಸಿದರು D) ಜೀತ ಪದ್ದತಿಯನ್ನು ರದ್ದುಗೊಳಿಸಿದರು

**13. "ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನ ಮಂದೆಯ ವರ್ತನೆಯನ್ನು ಏನೆಂದು ಕರೆಯುವರು?."**

A) ಜನಮಂದೆ B) **ದೊಂಬಿ** C) ಚಳುವಳಿ D)ದೌರ್ಜನ್ಯ

**14. 'ಮೇಧಾ ಪಾಟ್ಕರ್' ಅವರ ನೇತೃತ್ವದಲ್ಲಿ ಈ ಕೆಳಗಿನ ಯಾವ ಪರಿಸರ ಸಂರಕ್ಷಣಾ ಚಳವಳಿ ನಡೆಯಿತು...**

A) **ನರ್ಮದಾ ಬಚಾವೋ ಆಂದೋಲನ** B) ಚಿಪ್ಕೋ ಚಳುವಳಿ ಮೌನಕಣಿವೆ

C) ಆಂದೋಲನ ಕೈಗಾ D) ಅಣುಸ್ಥಾವರ ವಿರೋಧಿ ಚಳುವಳಿ

**15. 1925 ರಲ್ಲಿ 'ಪೆರಿಯಾರ್ ರಾಮಸ್ವಾಮಿ'ಯವರು ಪ್ರಾರಂಭಿಸಿದ "ಆತ್ಮಗೌರವ ಚಳವಳಿ"ಯು ಈ ಕೆಳಗಿನ ಯಾವ ಚಳುವಳಿಯ ಭಾಗವಾಗಿದೆ**

A) **ಮಹಿಳಾ ಶೋಷಣೆ ವಿರೋಧಿ ಚಳುವಳಿ** B) ಮದ್ಯಪಾನ ನಿಷೇಧ ಚಳುವಳಿ

C) ಪರಿಸರ ಸಂರಕ್ಷಣಾ ಚಳುವಳಿ D) ಅಸ್ಪೃಶ್ಯತಾ ಆಚರಣೆ ವಿರೋಧಿ ಚಳುವಳಿ

**16. ಮೊದಮೊದಲು 'ದೇವರೇ ಸತ್ಯ' ಎಂದು ಹೇಳುತ್ತಿದ್ದ ಮಹಾತ್ಮಾ ಗಾಂಧೀಜಿಯವರು ಸಾಮಾಜಿಕ ಸುಧಾರಕರ ಜೊತೆಗಿನ ಒಡನಾಟದಿಂದ 'ಸತ್ಯವೇ ದೇವರು' ಎನ್ನುವಂತಾಯ್ತು. ಇದು ---------- ಫಲ.**

A) ಸ್ವಾತಂತ್ರ್ಯ ಹೋರಾಟದ ಫಲ B) **ಶೋಷಣೆಗಳ ವಿರುದ್ಧದ ಗೆಲುವಿನ ಫಲ**

C) ಪರಿಸರ ಸಂರಕ್ಷಣಾ ಚಳವಳಿಗಳ ಫಲ D) ಸಾಮಾಜಿಕ ಚಳುವಳಿಗಳಿಂದ ದೊರೆತ ಸಾಮಾಜಿಕ ಅನುಭವಗಳ ಫಲ

**17. 'ಶಿವರಾಮ ಕಾರಂತರ' ನಾಯಕತ್ವದಲ್ಲಿ ಈ ಕೆಳಗಿನ ಯಾವ ಪರಿಸರ ಸಂರಕ್ಷಣಾ ಚಳವಳಿ ನಡೆಯಿತು....**

A) ನರ್ಮದಾ ಬಚಾವೋ ಆಂದೋಲನ B) ಮೌನಕಣಿವೆ ಆಂದೋಲನ

C) ಚಿಪ್ಕೋ ಚಳುವಳಿ D)**ಕೈಗಾ ಅಣುಸ್ಥಾವರ ವಿರೋಧಿ ಚಳುವಳಿ**

**18. ಯಾವುದೇ ಪೂರ್ವಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನ ರಾಶಿಯೇ .....**

A) ಚಳುವಳಿ B) **ಜನ ಮಂದೆ** C) ದೊಂಬಿ D) ಕಾಳಜಿ

**19. ಚಿಪ್ಕೋ ಚಳುವಳಿ: ಉತ್ತರಪ್ರದೇಶದ ತೆಹ್ರಿ ಗರ್ವಾಲ್ ಜಿಲ್ಲೆಯ, ರೆನ್ನಿ ಗ್ರಾಮ :: ಅಪ್ಪಿಕೋ ಚಳುವಳಿ : ------**

A) **ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮ** B) ಗುಜರಾತ್ ರಾಜ್ಯದ ಸರ್ದಾರ್ ಸರೋವರ ಯೋಜನೆ

C) ಕೇರಳ ರಾಜ್ಯದ ಪಾಲ್ಘಾಟ್ ತಾಲ್ಲೂಕಿನ ಮೌನ ಕಣಿವೆ D) ಕರ್ನಾಟಕ ರಾಜ್ಯದ ಮಂಗಳೂರು ನ ತೀರ ಪ್ರದೇಶ

**20. 'ಕುಸುಮಾ ಸೊರಬ' ರವರು ಈ ಚಳುವಳಿಯಲ್ಲಿ ತಮ್ಮ ಜೀವ ಕಳೆದುಕೊಂಡರು...**

A) ಅಸ್ಪೃಶ್ಯತಾ ಆಚರಣೆ ವಿರೋಧಿ ಚಳುವಳಿ. B) ಕರ್ನಾಟಕದ ತೀರ ಪ್ರದೇಶದ ಪರಿಸರ ಚಳುವಳಿ

C) ಕೈಗಾ ಅಣುಸ್ಥಾವರ ವಿರೋಧಿ ಚಳುವಳಿ D) **ಮದ್ಯಪಾನ ನಿಷೇಧ ಚಳುವಳಿ**

**21.** **"ಮಾನವ ಸಮಾಜದ ಚಲನೆ, ಬದಲಾವಣೆ ಮತ್ತು ರೂಪಾಂತರ ಗಳಿಗೆ ಸಂಬಂಧಿಸಿದಂತೆ ನಡೆಯುವ ಒಂದು ವ್ಯವಸ್ಥಿತ ಸ್ವಾಭಾವಿಕ ಪ್ರತಿರೋಧದ ಸಾಮಾಜಿಕ ಪ್ರತಿಕ್ರಿಯೇ.... "**

A) **ಸಾಮಾಜಿಕ ಚಳುವಳಿ.** B) ಪರಿಸರ ಚಳುವಳಿ C) ಕಾರ್ಮಿಕ ಚಳುವಳಿ D) ಮದ್ಯಪಾನ ನಿಷೇಧ ಚಳುವಳಿ

**22. ಇವು ಪರಿಸರ ಸಂರಕ್ಷಣಾ ಚಳುವಳಿಗಳು ಅಲ್ಲ..**

A) **ಜನ ಮಂದೆ & ದೊಂಬಿ.** B) ಕೈಗಾ ಅಣುಸ್ಥಾವರ ವಿರೋಧಿ ಚಳುವಳಿ & ಕರ್ನಾಟಕ ಕರಾವಳಿ ತೀರದ ಚಳುವಳಿ.

C) ಚಿಪ್ಕೋ ಚಳುವಳಿ& ಅಪ್ಪಿಕೋ ಚಳುವಳಿ D) ಮೌನಕಣಿವೆ ಆಂದೋಲನ,& ನರ್ಮದಾ ಬಚಾವೋ ಆಂದೋಲನ

**23. ಜನ ಮಂದೆಯು ಯಾವಾಗ ದೊಂಬಿಯಾಗಿ ಪರಿವರ್ತನೆ ಯಾಗುತ್ತದೆ?.**

A) **ಜನ ಮುಂದೆಯು ಹಿಂಸಾತ್ಮಕ ರೂಪ ಪಡೆದಾಗ** B) ಜನಮಂದೆಯು ಕೊನೆಗೊಂಡಾಗ

C) ಹೆಚ್ಚು ಕಾಲ ಜನಸಮೂಹ ಸೇರುವುದರಿಂದ D) ಜನಸಮೂಹವು ಚದುರಿ ಹೋದಾಗ

**24. ಇದು ದೊಂಬಿಯನ್ನು ನಿಯಂತ್ರಿಸ ಬಹುದಾದ ಕ್ರಮವಲ್ಲ..**

A) ಅಧಿಕಾರಿಗಳ ಸಮಯ ಪ್ರಜ್ಞೆ B) ರಕ್ಷಣಾ ಪಡೆಗಳು C) ಪೋಲಿಸ್, ಕಾನೂನು. D) **ಮಹಿಳಾ ಹಕ್ಕುಗಳ ರಕ್ಷಣೆ**

**25. ಮಹಿಳಾ ಚಳುವಳಿ ಎಂದರೆ ....**

A) ಮದ್ಯಪಾನ ನಿಷೇಧಿಸಿ ನಡೆದ ಮಹಿಳಾ ಹೋರಾಟ

B) **ಪುರುಷ ಪ್ರಧಾನ ಸಂಸ್ಕೃತಿ ನಡೆಸಿದ ದರ್ಪ,ಶೋಷಣೆ,ದೌರ್ಜನಗಳ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆಯಾಗಿದೆ.**

C) ಸಮಾನ ವೇತನಕ್ಕಾಗಿ ನಡೆದ ಮಹಿಳಾ ಹೋರಾಟಗಳು.

D) ಗ್ರಾಮೀಣ ಮಹಿಳೆಯರ ವಿಕಾಸ.

## 4.ಸಾಮಾಜಿಕ ಸಮಸ್ಯೆಗಳು

**1. ಸಂವಿಧಾನದ ಯಾವ ವಿಧಿಯು ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ**

A) 14ನೇ ವಿಧಿ B) 17ನೇ ವಿಧಿ, C) **24 ನೇ ವಿಧಿ** D) 42 ನೇ ವಿಧಿ

**2. ಬಾಲಕಾರ್ಮಿಕ, ಹದಿಹರೆಯದವರ ದುಡಿಮೆ ಪದ್ಧತಿ ನಿಷೇಧ, ನಿಯಂತ್ರಣ ಕಾಯ್ದೆಯು ಕೆಳಗಿನ ವಯೋಮಾನದವರನ್ನು ಹದಿಹರೆಯದವರು ಎಂದು ಗುರುತಿಸಿದೆ**

A) 13 ರಿಂದ 15 B) 14 ರಿಂದ 17 C) **15ರಿಂದ 18** D) 17ರಿಂದ 20

**3. ಬಾಲಕಾರ್ಮಿಕ, ಹದಿಹರೆಯದವರ ದುಡಿಮೆ ಪದ್ಧತಿ ನಿಷೇಧ, ನಿಯಂತ್ರಣ ಕಾಯ್ದೆಯನ್ನು ಉಲ್ಲಂಘಿಸಿದ ಪಾಲಕ ಅಥವಾ ಪೋಷಕರಿಗೆ ಈ ಕೆಳಗಿನ ಮೊತ್ತದ ದಂಡ ವಿಧಿಸಬಹುದು**

A) **10000** B) 5000 C) 50000 D) 100000

**4. ಪೋಕ್ಸೋ ಕಾಯ್ದೆ 2012 ಜಾರಿಗೆ ತಂದಿರುವ ಉದ್ದೇಶ**

A) ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ B) ಹೆಣ್ಣು ಭ್ರೂಣಹತ್ಯೆಯ ನಿಯಂತ್ರಣ

C) ಬಾಲ್ಯವಿವಾಹದ ನಿರ್ಮೂಲನೆ D) **ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಯಂತ್ರಣ**

**5. ಕಾಣದ ಹಸಿವು ಎಂದರೆ.......**

A) ಪೌಷ್ಟಿಕತೆ B) ಶ್ರೀಮಂತರಲ್ಲಿ ಹಸಿವು C) **ಅಪೌಷ್ಟಿಕತೆ** D) ಸಮತೋಲನ ಆಹಾರ

**6. ಸಹಾಯವಾಣಿ ಸಂಖ್ಯೆ 1098ಕ್ಕೆ ಕರೆ ಮಾಡಿ ಪ್ರಕರಣದ ಕುರಿತು ದೂರು ನೀಡಬಹುದಾಗಿದೆ**

A) ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರ B) ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯ

C) **ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ** D) ಅಸ್ಪೃಶ್ಯತಾ ಆಚರಣೆಯ ಪ್ರಕರಣಗಳು

7. ಬಾಲ್ಯ ವಿವಾಹ ತಡೆಗಟ್ಟಲು ನೀಡಿರುವ ಸಹಾಯವಾಣಿ ಅಥವಾ ಮಕ್ಕಳ ಸಹಾಯವಾಣಿಗೆ ಕರೆ ಮಾಡಲು ಇರುವ ದೂರವಾಣಿ ಸಂಖ್ಯೆ

A) 1919 B) **1098** C) 1800 D) 1909

8. ಈಗಲೂ ಸಹ ಉತ್ತರ ಕರ್ನಾಟಕ ಗ್ರಾಮೀಣ ಪ್ರದೇಶದ ಭಾಗಗಳಲ್ಲಿ ಹುಡುಗರಿಗೆ ಹೋಲಿಸಿಕೊಂಡರೆ ಹತ್ತನೇ ತರಗತಿ ಹುಡುಗಿಯರು ತುಂಬಾ ಕಡಿಮೆ ಇದೆ ಇದು ಈ ಕೆಳಗಿನ ಯಾವ ಪ್ರಕಾರದ ಲಿಂಗತಾರತಮ್ಯ ವಾಗಿದೆ

A) ಜನನ ಪ್ರಮಾಣದಲ್ಲಿ ಅಸಮಾನತೆ B) ಮೂಲಸೌಕರ್ಯದಲ್ಲಿ ಅಸಮಾನತೆ

C) **ಅವಕಾಶಗಳಲ್ಲಿ ಅಸಮಾನತೆ** D) ಕೌಟುಂಬಿಕ ಅಸಮಾನತೆ

9. ಬಾಲಿಕಾ ಸಂಘದಲ್ಲಿ ಈ ವಯೋಮಾನದ ಹೆಣ್ಣು ಮಕ್ಕಳನ್ನು ಸಂಘಟಿಸಲಾಗುತ್ತದೆ

A) 10 ರಿಂದ 15 ವರ್ಷದೊಳಗಿನವರು B) **11 ರಿಂದ 18 ವರ್ಷದೊಳಗಿನವರು**

C) 13 ರಿಂದ 18 ವರ್ಷದೊಳಗಿನವರು D) 18 ವರ್ಷ ಮೇಲ್ಪಟ್ಟವರು

10. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ ಜಾರಿಗೆ ಬಂದ ದಿನಾಂಕ

A) 2012 ಜೂನ್ 5 B) **2012 ಜೂನ್ 19** C) 2006 ಜೂನ್ 5 D) 2006 ಜೂನ್ 19

11. ಹಸಿವು ಪೋಷಕಾಂಶಗಳಿಂದ ಬಳಲುವವರು ಎಂದರೆ ಯಾರು

A) 1700 ಕಿಂತ ಕಡಿಮೆ ಕ್ಯಾಲೋರಿ ಆಹಾರ ಪಡೆಯುವವರಿಗೆ B) **1632 ಕಿಂತ ಕಡಿಮೆ ಕ್ಯಾಲೋರಿ ಆಹಾರ ಪಡೆಯುವವರಿಗೆ**

C) 1500 ಕಿಂತ ಕಡಿಮೆ ಕ್ಯಾಲೋರಿ ಆಹಾರ ಪಡೆಯುವವರಿಗೆ D) 1672ಕಿಂತ ಕಡಿಮೆ ಕ್ಯಾಲೋರಿ ಆಹಾರ ಪಡೆಯುವವರಿಗೆ

12. ಭಾರತದಲ್ಲಿ ಗಂಡನಿಂದಲೇ ಹಿಂಸೆಯ ಒಳಪಡುತ್ತಿರುವ ಮಹಿಳೆಯರ ಪ್ರಮಾಣ

A) ಶೇ.80.4 B) ಶೇ.45.2 C) ಶೇ.60.9 D) **ಶೇ.79.5**

13. ಇತ್ತೀಚಿಗೆ ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿಗೆ ತಂದ ವರ್ಷ

A) 1961 B) 1976 C) 2012 D) **2006**

14. ಭಾರತವು ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಹಾಕಿದ ದಿನಾಂಕ

A) **1992 ಡಿಸೆಂಬರ್ 11** B) 1991 ಡಿಸೆಂಬರ್ 11 C) 2006 ನವೆಂಬರ್ 14 D) 2006 ಡಿಸೆಂಬರ್ 5

15. ಮಕ್ಕಳ ಕಳ್ಳಸಾಗಾಣಿಕೆ ಗೆ ಮಗಾ ದವರು ಇದರಲ್ಲಿ ಅತಿಹೆಚ್ಚಾಗಿ ಇದಕ್ಕೆ ದೂಡಲ್ಪಟ್ಟಿದ್ದಾರೆ

A) **ಲೈಂಗಿಕ ಶೋಷಣೆ** B) ಮನೆ ಕೆಲಸ C) ಬಲವಂತದ ದುಡಿಮೆ D) ಭಿಕ್ಷಾಟನೆ

## ಭೂಗೋಳಶಾಸ್ತ್ರ

## 2.ಭಾರತದ ಮೇಲ್ಮೈಲಕ್ಷಣಗಳು

1. ಪ್ರಪಂಚದ ಅತ್ಯುನ್ನತ ಶಿಖರ: ಮೌಂಟ್ ಎವರೆಸ್ಟ್ :: ಭಾರತದ ಅತ್ಯುನ್ನತ ಶಿಖರ :-------

A) ಗುರು ಶಿಖರ B) **ಗಾಡ್ವಿನ್ ಆಸ್ಟಿನ್ /K2** C) ಆರ್ಮ ಕೊಂಡ D) ಅಣ್ಣೀ ಮುಡಿ

2. ಹಿಮಾಲಯದ (ಒಳ ಹಿಮಾಲಯ) ಗಿರಿಧಾಮಗಳ ಸರಿಯಾದ ಗುಂಪು

A) **ಶಿಮ್ಲಾ, ರಾಣಿಖೇತ್, ಡಾರ್ಜಲಿಂಗ್, ನೈನಿತಾಲ್.** B) ಪೀರ್ ಪಂಜಾಲ್, ದೌಲಾಧರ್, ನಾಗತಿಬ, ಮಸ್ಸೋರಿ.

C) ಮಾಕಲು, ಧವಳಗಿರಿ, ಕಾಂಚನ ಜಂಗ , ನಂದಾದೇವಿ. D) ಕುಲು, ಕಾಂಗ್ರಾ, ನೈನಿತಾಲ್, ಡಾರ್ಜಲಿಂಗ್ .

3. 'ಡೂನ್ಸ್' ಎಂದರೆ ....................

A) ಹಿಮಾಲಯದ ಎತ್ತರವಾದ ಪರ್ವತಗಳು B) ಹಿಮಾಲಯದ ಗಿರಿಧಾಮಗಳು

C) ನದಿಗಳ ಸಂಚಯನದ ಭಾಗ D) **ಹಿಮಾಲಯದ ಸಮತಟ್ಟಾದ ತಳ್ಳವುಳ್ಳ ಕಣಿವೆಗಳು**

4. ಹಿಮಾಲಯದ ಅತ್ಯಂತ ಎತ್ತರವಾದ ಪರ್ವತ ಶ್ರೇಣಿ: ಹಿಮಾದ್ರಿ :: ಹಿಮಾಲಯದ ಪಾದ ಬೆಟ್ಟಗಳು :----

A) **ಶಿವಾಲಿಕ್ ಬೆಟ್ಟಗಳು** B) ಹಿಮಾಚಲ್ C) ಪರ್ವತ ಘಾಟಿಗಳು D) ಮಹಾ ಹಿಮಾಲಯ

**5. ಉತ್ತರದ ಮೈದಾನಗಳು ನಿರ್ಮಾಣಗೊಂಡಿರುವುದು ....**

A) ಹವಳಗಳಿಂದ B) ಜ್ವಾಲಾಮುಖಿ ಶಿಲೆಗಳಿಂದ C) **ನದಿಗಳ ಸಂಚಯದಿಂದ** D) ಸ್ಪಟಿಕ ಶಿಲೆಗಳ ವಿಘಟನೆಯಿಂದ

**6. ದಕ್ಷಿಣ ಭಾರತದ ಅತ್ಯುನ್ನತ ಶಿಖರ**

A) **ಅಣ್ಣೈ ಮುಡಿ** B) ವಿಂಧ್ಯಾ ಪರ್ವತ C) ಗೌರಿಶಂಕರ D) ಆರ್ಮ ಕೊಂಡ

**7. ಅರಾವಳಿ ಪರ್ವತ ಶ್ರೇಣಿಯ ಅತ್ಯುನ್ನತ ಶಿಖರ ...**

A) ಅಣ್ಣೈ ಮುಡಿ B) ಆರ್ಮ ಕೊಂಡ C) ಗಾಡ್ವಿನ್ ಆಸ್ಟಿನ್ D) **ಗುರು ಶಿಖರ**

**8. ಪಶ್ಚಿಮ ಘಟ್ಟಗಳಲ್ಲಿ ಅತಿ ಎತ್ತರದ ಶಿಖರ : ಅಣ್ಣೈಮುಡಿ :: ಪೂರ್ವ ಘಟ್ಟಗಳಲ್ಲಿ ಅತಿ ಎತ್ತರದ ಶಿಖರ:––**

A) ಗುರು ಶಿಖರ B) **ಅರ್ಮಕೊಂಡ** C) ವಿಂಧ್ಯಾ ಪರ್ವತ D) ಸಾತ್ಪುರ ಬೆಟ್ಟ

**9. ಪೂರ್ವ ಘಟ್ಟಗಳು ಪಶ್ಚಿಮ ಘಟ್ಟಗಳನ್ನು ಬೆಟ್ಟಗಳಲ್ಲಿ––––––– ಸಂಧಿಸುತ್ತವೆ.**

A) ಅಮರಕಂಟಕ B) ರಾಜ್ ಮಹಲ್ C) ಅರಾವಳಿ D) **ನೀಲಗಿರಿ**

**10. ಗೊಂಡ್ವಾನ ಕಾಲಕ್ಕೆ ಸೇರಿದ್ದು, ಪುರಾತನ ಶಿಲೆಗಳಿಂದ ರಚಿತವಾದ ಭಾರತ ಭಾರತದ ಭೌಗೋಳಿಕ ವಿಭಾಗವಿದು...**

A) ಉತ್ತರದ ಪರ್ವತಗಳು B) ಉತ್ತರದ ಮೈದಾನಗಳು C) **ಪರ್ಯಾಯ ದ್ವೀಪದ ಪ್ರಸ್ತಭೂಮಿ** D) ಕರಾವಳಿ ತೀರಗಳು

**11. ಪಶ್ಚಿಮ ಕರಾವಳಿಯ ಉತ್ತರ ಭಾಗ: ಕೊಂಕಣ ತೀರ :: ಪೂರ್ವ ಕರಾವಳಿಯ ದಕ್ಷಿಣ ಭಾಗ ..........**

A) ಕರ್ನಾಟಕ ತೀರ B) **ಕೋರಮಂಡಲ ತೀರ** C) ಮಲಬಾರ್ ತೀರ D) ಉತ್ತರ ಸರ್ಕಾರ್ ತೀರ

**12. ಪೂರ್ವ ಕರಾವಳಿಯ ಉತ್ತರ ಭಾಗ :ಉತ್ತರ ಸರ್ಕಾರ್ ತೀರ:: ದಕ್ಷಿಣ ಭಾಗ :––––––**

A) ಕೊಂಕಣ ತೀರ B) **ಕೋರಮಂಡಲ** C) ತೀರ ಮಲಬಾರ್ ತೀರ D) ಕರ್ನಾಟಕ ತೀರ

**13. ಪೂರ್ವ ಕರಾವಳಿಯಲ್ಲಿರುವ ಲಗೂನ್ (ಉಪ್ಪು ನೀರಿನ) ಸರೋವರಗಳಿಗೆ ಉದಾಹರಣೆಗಳೆಂದರೆ .....**

A) ಸಿಮ್ಲಾ ಮತ್ತು ಊಟಿ B) **ಚಿಲ್ಕಾ ಮತ್ತು ಪುಲಿಕೇಟ್** C) ಕುಲು ಮತ್ತು ಕಾಂಗ್ರ D) ಹಿಮಾದ್ರಿ ಮತ್ತು ಹಿಮಾಚಲ

**14. ಬಂಗಾಳಕೊಲ್ಲಿ :ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು:: ಅರಬ್ಬಿ ಸಮುದ್ರ ––––––––**

A) **ಲಕ್ಷದ್ವೀಪ** B) ಪಾಕ್ ಜಲಸಂಧಿ C) ನಿಕೋಬಾರ್ ದ್ವೀಪ D) ಸೇಂಟ್ ಮೇರಿ ದ್ವೀಪ

**15. ಭಾರತದ ಕರಾವಳಿ ಮೈದಾನಗಳು ವಿದೇಶಿ ವ್ಯಾಪಾರಾಭಿವೃದ್ಧಿಗೆ ಪೂರಕವಾಗಿವೆ ಹೇಗೆಂದರೆ**

A) **ನೈಸರ್ಗಿಕ ಬಂದರುಗಳನ್ನು ಹೊಂದಿದೆ.** B) ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿದೆ.

C) ಆಕರ್ಷಕ ಬೀಚ್ ಗಳನ್ನು ಹೊಂದಿದೆ. D) ಕರಾವಳಿ ಮೈದಾನಗಳು ವಿಶಾಲವಾಗಿವೆ ಮತ್ತು ಅಗಲವಾಗಿವೆ .

**16. ಭಾರತದ ಕರಾವಳಿಯು ಪ್ರವಾಸೋದ್ಯಮದ ಅಭಿವೃದ್ಧಿಗೆ ನೆರವಾಗುತ್ತದೆ. ಹೇಗೆಂದರೆ...**

A) ನೌಕಾಯಾನಕ್ಕೆ ಅನುಕೂಲವಾಗಿದೆ . B) ನೈಸರ್ಗಿಕ ಬಂದರುಗಳನ್ನು ಹೊಂದಿದೆ .

C) **ನೌಕಾಯಾನ ಸೌಲಭ್ಯ & ಆಕರ್ಷಕ ಬೀಚ್ ಗಳಿಂದ ಕೂಡಿದೆ** . D) ವಿಶಾಲವಾದ ತೀರ ಪ್ರದೇಶ ಹೊಂದಿದೆ

**17. ಪರ್ಯಾಯ ಪ್ರಸ್ಥಭೂಮಿಯು ಕೃಷಿಗೆ ಪೂರಕವಾಗಿದೆ. ಏಕೆಂದರೆ ..**

A) ವಿಶಾಲವಾದ ಮೈದಾನ ಹೊಂದಿದೆ . B) ಪುರಾತನ ಶಿಲೆಗಳಿಂದ ರಚಿತವಾಗಿವೆ.

C) ಆಕರ್ಷಕ ಗಿರಿಧಾಮಗಳನ್ನು ಹೊಂದಿವೆ. D) **ಫಲವತ್ತಾದ ಕಪ್ಪು ಮಣ್ಣಿನಿಂದ ಕೂಡಿದೆ**

**18. ಪೂರ್ವ ಘಟ್ಟಗಳು ನಿರಂತರವಾಗಿಲ್ಲ. ಏಕೆಂದರೆ ...**

A) ಕಪ್ಪು ಮಣ್ಣಿನಿಂದ ಕೂಡಿದೆ . B) ನೈಸರ್ಗಿಕ ಬಂದರುಗಳನ್ನು ಹೊಂದಿದೆ.

C)**ಪೂರ್ವಕ್ಕೆ ಹರಿಯುವ ನದಿ ಕಣಿವೆಗಳಿಂದ ಪ್ರತ್ಯೇಕಗೊಂಡಿದೆ** . D) ಇವು ಹೆಚ್ಚು ಎತ್ತರವಾಗಿವೆ .

**19.ಇವು ಹವಳ ದ್ವೀಪಗಳಾಗಿವೆ ...**

A) ಅಂಡಮಾನ್ ದ್ವೀಪಗಳು B) ನಿಕೋಬಾರ್ ದ್ವೀಪಗಳು C) **ಲಕ್ಷ ದ್ವೀಪಗಳು** D) ಅಂಡಮಾನ್ ಮತ್ತು ನಿಕೊಬಾರ್ ದ್ವೀಪಗಳು

**20. ಹಿಮಾಲಯ ಪರ್ವತಗಳು ಉತ್ತರ ಭಾರತದಲ್ಲಿ ಅಧಿಕ ಮಳೆಯಾಗಲು ನೆರವಾಗುತ್ತವೆ. ಹೇಗೆಂದರೆ ............**

A) ಇವು ದಟ್ಟವಾಗಿ ಹಬ್ಬಿವೆ . B) **ಇವು ಮಳೆಯ ಮಾರುತಗಳನ್ನು ತಡೆಯುತ್ತವೆ** .

C) ಇವು ಹಲವು ನದಿಗಳ ಉಗಮ ಸ್ಥಾನವಾಗಿದೆ . D) ಇವು ಅಧಿಕ ಮಂಜುಗಡ್ಡೆ ಗಳಿಂದ ಕೂಡಿವೆ

## 3.ಭಾರತದ ವಾಯುಗುಣ

**1. ಭಾರತದ ವಾಯುಗುಣವು............**

A) ಸಮಶೀತೋಷ್ಣ ಮಾದರಿಯ ವಾಯುಗುಣ B) ಅರೆ ಉಷ್ಣ ಮಾದರಿಯ ವಾಯುಗುಣ

C) ಶೀತ ಮಾದರಿಯ ವಾಯುಗುಣ D) **ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣ**

**2. ಭಾರತದಲ್ಲಿ ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣವಿದೆ. ಏಕೆಂದರೆ.**

A) ದೇಶದ ಹೆಚ್ಚು ಭಾಗವು ಉಷ್ಣವಲಯದಲ್ಲಿದೆ. B) ಸೂರ್ಯನ ಓರೆ ಕಿರಣಗಳು ಬೀಳುತ್ತವೆ.

C) ಮಾನ್ಸೂನ್ ಮಾರುತಗಳ ಪ್ರಭಾವಕ್ಕೊಳಪಟ್ಟಿದೆ. D) a **ಮತ್ತು** c

**3. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳೆಂದರೆ.**

A) ಮೇಲ್ಮೈ ಲಕ್ಷಣ B) ಮಾನ್ಸೂನ್ ಮಾರುತಗಳು C) ಸ್ಥಾನ ಮತ್ತು ಜಲರಾಶಿಗಳು D) **ಮೇಲಿನ ಎಲ್ಲವು.**

**4. ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದಲ್ಲಿ ಪ್ರಕಾಶಿಸುವುದರಿಂದ.**

A) **ಭಾರತದಲ್ಲಿ ಓರೆ ಕಿರಣಗಳಿರುತ್ತವೆ.** B) ಭಾರತದಲ್ಲಿ ಆದ್ರತೆಯ ಪ್ರಮಾಣ ಹೆಚ್ಚಾಗಿರುತ್ತದೆ.

C) ಭಾರತದಲ್ಲಿ ಕಡಿಮೆ ಒತ್ತಡ ಪ್ರದೇಶ ನಿರ್ಮಾಣವಾಗುತ್ತದೆ D) ಭಾರತದಲ್ಲಿ ಮಳೆಗಾಲದ ಆರಂಭ

**5. ಭಾರತದ ಉತ್ತರದಲ್ಲಿ ತಂಪಾದ ಮತ್ತು ದಕ್ಷಿಣದಲ್ಲಿ ಬೆಚ್ಚನೆಯ ಪರಿಸ್ಥಿತಿಯಿರುವ ಋತು.**

A) **ಚಳಿಗಾಲ** B) ಬೇಸಿಗೆ ಕಾಲ C) ಮಳೆಗಾಲ D) ನಿರ್ಗಮನ ಮಾನ್‌ಸೂನ್ ಮಾರುತಗಳ ಕಾಲ

**6. ಭಾರತದಲ್ಲಿ ಚಳಿಗಾಲದಲ್ಲಿ ಅತಿ ಶೀತವಾದ ಮಾಹೆ.**

A) ನವೆಂಬರ್ B) ಜನವರಿ C) **ಫೆಬ್ರವರಿ** D) ಡಿಸೆಂಬರ್

**7. ಭಾರತದಲ್ಲೇ ಅತಿ ಕಡಿಮೆ ಉಷ್ಣಾಂಶ (–40 ಸೆ) ದಾಖಲಾದ ಸ್ಥಳ.**

A) **ಡ್ರಾಸ್** B) ಹಿಮಾಚಲ ಪ್ರದೇಶ C) ಜಮ್ಮು–ಕಾಶ್ಮೀರ್ D) ಕಾರಾಕೋರಂ ಶ್ರೇಣಿ

**8. ಭಾರದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿರುವ ಸ್ಥಳ.**

A) ಉತ್ತರ ಜಾಸ್ಕರ್ ಶ್ರೇಣಿ B) ರಾಜಸ್ತಾನದ ರೂಯ್ಲಿ C) **ರಾಜಸ್ತಾನದ ಗಂಗಾನಗರ** D) ಕಾರಾಕೋರಂ ಶ್ರೇಣಿ

**9. ಪಶ್ಚಿಮ ಬಂಗಾಳ : ಕಾಲಬೈಸಾಕಿ :: ಉತ್ತರ ಪ್ರದೇಶ : ........**

A) ಮಾವಿನ ಹೂಯ್ಲು B) **ಆಂಧಿಸ್** C) ಕಾಫಿಯ ಹೂಮಳೆ D) ಮಾನ್ಸೂನ್

**10. ಕೇರಳದಲ್ಲಾಗುವ ಪರಿಸರಣ ಮಳೆಯನ್ನು.........ಎಂದು ಕರೆಯುತ್ತಾರೆ.**

A) **ಮಾವಿನ ಹೂಯ್ಲು** B) ಕಾಲಬೈಸಾಕಿ C) ಕಾಫಿಯ ಹೂಮಳೆ D) ಸೈಕ್ಲೋನ್

**11. ನೈಋತ್ಯ ಮಾನ್ಸೂನ್ ಮಾರುತದ ಅವಧಿ.**

A) ಡಿಸೆಂಬರ್–ಫೆಬ್ರುವರಿ B) ಮಾರ್ಚ್–ಮೇ C) **ಜೂನ್–ಸೆಪ್ಟೆಂಬರ್** D) ಸೆಪ್ಟೆಂಬರ್ – ಮಧ್ಯ–ನವೆಂಬರ್

**12. ಭಾರತದ ಮಧ್ಯಭಾಗದಲ್ಲಿ ಕಡಿಮೆ ಒತ್ತಡ ಪ್ರದೇಶವು ನಿರ್ಮಾಣವಾಗಲು ಕಾರಣ.**

A) ಬಂಗಾಳಕೊಲ್ಲಿಯಲ್ಲಿ ಅಧಿಕ ಒತ್ತಡವಿರುವುದರಿಂದ . B) ಹಿಂದೂಸಾಗರದಲ್ಲಿ ಅಧಿಕ ಒತ್ತಡವಿರುವುದರಿಂದ.

C) **ಬೇಸಿಗೆ ಅಂತ್ಯಾವಧಿಯಿಂದ ಉಷ್ಣಾಂಶದ ಹೆಚ್ಚಳ.** D) ಬಿ ಮತ್ತು ಸಿ

**13. ನೈರುತ್ಯ ಮಾನ್ಸೂನ್ ಮಾರುತಗಳು ಉಗಮಕ್ಕೆ ಕಾರಣ.**

A) ಭಾರತದ ಮಧ್ಯಭಾಗದ ಕಡಿಮೆ ಒತ್ತಡ B) ಹಿಂದೂಸಾಗರದ ಅಧಿಕ ಒತ್ತಡ.

C) ಬಂಗಾಳಕೊಲ್ಲಿಯ ಕಡಿಮೆ ಒತ್ತಡ. D) **ಎ ಮತ್ತು ಬಿ**

**14. ಭಾರತಕ್ಕೆ ಹೆಚ್ಚು ಮಳೆ (ಶೇ.75) ಯಾಗುವ ಋತು.**

A) ಚಳಿಗಾಲ B) ಬೇಸಿಗೆ ಕಾಲ C) **ಮಾನ್‌ಸೂನ್ ಮಾರುತಗಳ ಕಾಲ** D) ನಿರ್ಗಮನ ಮಾನ್‌ಸೂನ್ ಮಾರುತಗಳ ಕಾಲ

**15. ಭಾರತದ ಈಶ್ಯಾನ್ಯ ಭಾಗ ಪಡೆಯುವ ಮಳೆಯು.**

A) ಹಿಂದೂ ಮಹಾಸಾಗರ ಮಾರ್ಗ B) **ಬಂಗಾಳಕೊಲ್ಲಿಯ ಶಾಖೆ**

C) ಅರಬ್ಬಿಸಮುದ್ರದ ಶಾಖೆ D) ಈಶ್ಯಾನ್ಯ ಮಾನ್ಸೂನ್ ಮಾರುತದಿಂದ

**16. ಭಾರತದಲ್ಲೇ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ.**

A) **ಮಾಸಿನ್‌ರಾಮ್** B) ಆಗುಂಬೆ C) ಚಿರಾಪುಂಜಿ D) ರೋಹ್ಲಿ

**17. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ ಅಧಿಕ ಮಳೆ ಪಡೆಯುತ್ತದೆ. ಏಕೆಂದರೆ.**

A) ಪಶ್ಚಿಮ ಘಟ್ಟಗಳು ಸಮಟ್ಟಾಗಿಲ್ಲ B) ಸಮುದ್ರಕ್ಕೆ ಹತ್ತಿರವಾಗಿವೆ.

C) **ಎತ್ತರವಾಗಿದ್ದು ಮಾನ್ಸೂನ್ ಮಾರುತವನ್ನು ತಡೆಯುತ್ತವೆ.** D) ಪಶ್ಚಿಮ ಘಟ್ಟಗಳು ನಿರಂತರವಾಗಿವೆ.

**18. ಪಶ್ಚಿಮ ಘಟ್ಟಗಳ ಪೂರ್ವ ಭಾಗ ಮಳೆ ನೆರಳಿನ ಪ್ರದೇಶವಾಗಿದೆ. ಏಕೆಂದರೆ.**

A) **ಪೂರ್ವಬಾಗ ಹೆಚ್ಚು ಕಡಿದಾಗಿದೆ.** B) ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಬೀಳುತ್ತದೆ.

C)ಮಾನ್ಸೂನ್ ಮಾರುತಗಳು ತೇವಾಂಶ ಕಳೆದುಕೊಳ್ಳುತ್ತವೆ. D) ಎತ್ತರವಾಗಿ ಹಬ್ಬಿವೆ

**19. ಈಶ್ಯಾನ್ಯ ಮಾನ್ಸೂನ್ ಅವಧಿಯಲ್ಲಿ ಭಾರತದ ಭೂ ಭಾಗ ಅಧಿಕ ಒತ್ತಡ ಪ್ರದೇಶ ನಿರ್ಮಾಣವಾಗಲು ಕಾರಣ.**

A) ಉಷ್ಣಾಂಶದ ಇಳಿಕೆ B) ಉಷ್ಣಾಂಶದ ಹೆಚ್ಚಳ C) ಅಧಿಕ ತೇವಾಂಶ D) **ಎ ಮತ್ತು ಸಿ**

**20. ಬಂಗಾಳಕೊಲ್ಲಿಯಲ್ಲಿ ಕಡಿಮೆ ಒತ್ತಡ ಪ್ರದೇಶ ಉಂಟಾಗುವುದರ ಪರಿಣಾಮ….**

A) ಈಶಾನ್ಯ ಭಾಗಕ್ಕೆ ಹೆಚ್ಚು ಮಳೆಯಾಗುತ್ತದೆ. B) ನೈಋತ್ಯ ಮಾನ್ಸೂನ್ ಮಾರುತಗಳು ಆಕರ್ಷಿಸುತ್ತವೆ.

C) ಭಾರತದ ಪೂರ್ವ ಭಾಗಕ್ಕೆ ಮಳೆಯಾಗುತ್ತದೆ. D) ವಾಯುಗುಣ ಅಸ್ಥಿರವಾಗುತ್ತದೆ.

**21. ತಮಿಳುನಾಡು, ಆಂಧ್ರಪ್ರದೇಶ ಮತ್ತು ಒಡಿಶಾ ರಾಜ್ಯಗಳಿಗೆ ಹೆಚ್ಚು ಮಳೆ ಬೀಳುವ ಋತು.**

A) ಚಳಿಗಾಲ B) ಬೇಸಿಗೆ ಕಾಲ C) ಮಾನ್‌ಸೂನ್ ಮಾರುತಗಳ ಕಾಲ D)**ನಿರ್ಗಮನ ಮಾನ್‌ಸೂನ್ ಮಾರುತಗಳ ಕಾಲ**

**22. ನಿರ್ಗಮನ ಮಾನ್‌ಸೂನ್ ಮಾರುತಗಳ ಅವಧಿಯಲ್ಲಿ ಉಷ್ಣವಲಯದ ಆವರ್ತ ಮಾರುತಗಳು (ಸೈಕ್ಲೋನ್) ಸಂಭವಿಸುವುದು.**

A) **ಬಂಗಾಳಕೊಲ್ಲಿಯಲ್ಲಿ** B) ಹಿಂದು ಮಹಾಸಾಗರದಲ್ಲಿ C) ಅರಬ್ಬಿಸಮುದ್ರದಲ್ಲಿ D) ಪೆಸಿಫಿಕ್ ಮಹಾಸಾಗರದಲ್ಲಿ

**23. ಭಾರತ ಅತ್ಯಂತ ಶುಷ್ಕ ವಾಯುಗುಣ ಹೊಂದಿದ ಪ್ರದೇಶ.**

A) ಉತ್ತರ ಜಾಸ್ಕರ್ ಶ್ರೇಣಿ B) **ರಾಜಸ್ತಾನದ ರೂಯ್ಲಿ** C) ರಾಜಸ್ತಾನದ ಗಂಗಾನಗರ D) ಕಾರಾಕೋರಂ ಶ್ರೇಣಿ

**24. ಭಾರತದಲ್ಲಿ ಕಡಿಮೆ ಮಳೆ ಪಡೆಯುವ ಪ್ರದೇಶ.**

A) ಉತ್ತರ ಜಾಸ್ಕರ್ ಶ್ರೇಣಿ B) ರಾಜಸ್ತಾನದ ಗಂಗಾನಗರ C) **ರಾಜಸ್ತಾನದ ರೂಯ್ಲಿ** D) ಕಾರಾಕೋರಂ ಶ್ರೇಣಿ

**25. ಭಾರತದಲ್ಲಿ ವಾರ್ಷಿಕ 50 ಸೆಂ.ಮೀ.ಗಳಿಗಿಂತ ಕಡಿಮೆ ಮಳೆ ಬೀಳುವ ಪ್ರದೇಶ.**

A) ಉತ್ತರ ಜಾಸ್ಕರ್ ಶ್ರೇಣಿ B) ಕಛ್‌ನ ಪಶ್ಚಿಮ ಭಾಗ C) ರಾಜಸ್ತಾನದ ಥಾರ್ ಮರುಭೂಮಿ D) **ಮೇಲಿನ ಎಲ್ಲವೂ**

## 4.ಭಾರತದ ಮಣ್ಣುಗಳು

**1. ––––ಮತ್ತು––––––ಗಳಸಂಯೋಜನೆ ಯುಳ್ಳ ಭೂ ಮೇಲ್ಭಾಗದ ತೆಳು ಪದರವೇ ಮಣ್ಣು .**

A) **ಖನಿಜ ಮತ್ತು ಜೈವಿಕಾಂಶ** B) ಘನ ಮತ್ತು ದ್ರವ C) ಖನಿಜ ಮತ್ತು ಭೌತಿಕಾಂಶ D) ಭೌತಿಕ ಮತ್ತು ರಾಸಾಯನಿಕ

**2. ಮೆಕ್ಕಲು ಮಣ್ಣು ಉತ್ಪತ್ತಿಯಾಗುವುದು .....**

A) ಜೈವಿಕ ವಸ್ತುಗಳ ಕೊಳೆಯುವಿಕೆಯಿಂದ . B) ಬಸಾಲ್ಟ್ ಶಿಲೆಗಳ ಶಿಥಲೀಕರಣದಿಂದ .

C) **ನದಿಗಳ ಸಂಚಯದಿಂದ** D) ಜಲ ವಿಲೀನೀಕರಣದಿಂದ .

3. ಕಪ್ಪು ಮಣ್ಣು ನಿರ್ಮಾಣವಾಗುವುದು .....

A) ಸಮುದ್ರದ ಅಲೆಗಳ ಸಂಚಯದಿಂದ . B) ಸ್ಪಟಿಕ ಶಿಲೆಗಳ ಶಿಥಲೀಕರಣದಿಂದ

C) ಜೈವಿಕ ವಸ್ತು ಕೊಳೆಯುವುದರಿಂದ D) **ಬಸಾಲ್ಟ್ ಶಿಲೆಗಳ ಶಿಥಲೀಕರಣದಿಂದ**

4. ಕೆಂಪು ಮಣ್ಣು ನಿರ್ಮಾಣವಾಗುವುದು ....

A) ನದಿಗಳ ಸಂಚಯದಿಂದ B) **ಸ್ಫಟಿಕ ಶಿಲೆಗಳ ಶಿಥಲೀಕರಣದಿಂದ**

C) ಬಸಾಲ್ಟ್ ಶಿಲೆಗಳ ಶಿಥಲೀಕರಣದಿಂದ D) ದ್ರವ ವಿಲೀನೀಕರಣ ದಿಂದ

5. ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಪರಿಸ್ಥಿತಿಯುಳ್ಳ ಉಷ್ಣ ವಲಯದ ಭಾಗಗಳಲ್ಲಿ ಉತ್ಪತ್ತಿಯಾಗುವ ಮಣ್ಣು ..

A) **ಲ್ಯಾಟರೈಟ್ ಮಣ್ಣು** B) ಮರುಭೂಮಿ ಮಣ್ಣು C) ಪರ್ವತ ಮಣ್ಣು D) ಕಪ್ಪು ಮಣ್ಣು

6. ಜೈವಿಕ ವಸ್ತುಗಳು ಕೊಳೆಯುವುದರಿಂದ ನಿರ್ಮಾಣವಾಗುವ ಮಣ್ಣು ...

A) ಲ್ಯಾಟರೈಟ್ ಮಣ್ಣು B) ಮರುಭೂಮಿ ಮಣ್ಣು C) **ಪರ್ವತ ಮಣ್ಣು** D) ಮೆಕ್ಕಲು ಮಣ್ಣು

7. ಸುಲಭವಾಗಿ ಪುಡಿಯಾಗುವ, ತೇವಾಂಶ ಮತ್ತು ಸತ್ವಾಂಶಗಳು ಕಡಿಮೆ ಇರುವ, ಉಪ್ಪಿನಾಂಶ ಹೆಚ್ಚಿರುವ ಗುಣವುಳ್ಳ ಮಣ್ಣಿದು...

A) ಕಪ್ಪು ಮಣ್ಣು B) ಕೆಂಪು ಮಣ್ಣು C) **ಮರುಭೂಮಿ ಮಣ್ಣು** D) ಪರ್ವತ ಮಣ್ಣು

8. ಕಪ್ಪು ಮಣ್ಣು 'ದೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯಹೊಂದಿದೆ.' ಕಾರಣ...ಇದು

A) **ಒತ್ತೊತ್ತಾದ ಕಣಗಳಿಂದ ರಚನೆಯಾಗಿದೆ .** B) ಜೈವಿಕ ಅಂಶಗಳಿಂದ ಕೂಡಿದೆ .

C) ಜಲ ವಿಲೀನೀಕರಣಕ್ಕೆ ಒಳಪಡುತ್ತದೆ. D) ಹೆಚ್ಚು ಮರಳಿನ ಮರಳಿನಾಂಶ ಹೊಂದಿದೆ.

9. ಹತ್ತಿ ಬೇಸಾಯ : ಕಪ್ಪು ಮಣ್ಣು : : ನೆಡು ತೋಟದ ಬೆಳೆಗಳ ಬೇಸಾಯ : ---------

A) ಜಂಬಿಟ್ಟಿಗೆ ಮಣ್ಣು B) **ಪರ್ವತ ಮಣ್ಣು** C) ಮರುಭೂಮಿ ಮಣ್ಣು D) ಕೆಂಪು ಮಣ್ಣು

10. ಈ ಕೆಳಗಿನವುಗಳಲ್ಲಿ ಯಾವುದು ಮಣ್ಣಿನ ಸವೆತಕ್ಕೆ ಕಾರಣವಲ್ಲ ...

A) ಅರಣ್ಯ ನಾಶ B) ಪ್ರಾಣಿಗಳ ಅತಿಯಾಗಿ ಮೇಯಿಸುವಿಕೆ. C) **ಸಮೋನ್ನತಿ ಬೇಸಾಯ** . D) ಅವೈಜ್ಞಾನಿಕ ಬೇಸಾಯ

11. ಜಲವಿಲೀನೀಕರಣಕ್ಕೆ ಒಳಪಡುವ, ಫಲವತ್ತಲ್ಲದ ಮಣ್ಣು .....

A) **ಲ್ಯಾಟರೈಟ್ ಮಣ್ಣು** B) ಮರುಭೂಮಿ ಮಣ್ಣು C) ಪರ್ವತ ಮಣ್ಣು D) ಕೆಂಪು ಮಣ್ಣು

12. ಈ ಕೆಳಗಿನವುಗಳಲ್ಲಿ ಯಾವುದು ಮಣ್ಣಿನ ಸವೆತದ ಪರಿಣಾಮವಲ್ಲ ..

A)ಅಂತರ್ಜಲ ಮಟ್ಟದಲ್ಲಿ ಕುಸಿತ . B) ಜಲಾಶಯಗಳಲ್ಲಿ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುವುದು.

C)ನದಿಯ ಪಾತ್ರಗಳಲ್ಲಿ ಹೂಳು ತುಂಬಿಕೊಳ್ಳುವುದ D) **ವರ್ಗಾವಣೆ ಬೇಸಾಯ ಪದ್ಧತಿ.**

13. ಕಡು ಬೂದು ಮತ್ತು ಕಪ್ಪು ಬಣ್ಣದ,ಹೆಚ್ಚು ಜೇಡಿ ಮಿಶ್ರಣ ಇರುವುದು,ಒತ್ತೊತ್ತಾದ ಕಣಗಳು,ದೀರ್ಘ ಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ–ಈ ಗುಣಗಳುಳ್ಳ ಮಣ್ಣು ....

A) **ಕಪ್ಪು ಮಣ್ಣು** B) ಕೆಂಪು ಮಣ್ಣು C) ಮೆಕ್ಕಲು ಮಣ್ಣು D) ಪರ್ವತ ಮಣ್ಣು

14. ಇವುಗಳಲ್ಲಿ ಯಾವುದು ಮಣ್ಣಿನ ಸಂರಕ್ಷಣಾ ವಿಧಾನವಲ್ಲ .....

A) ಅರಣ್ಯೀಕರಣ. B) **ಅತಿಯಾಗಿ ಪ್ರಾಣಿಗಳ ಮೇಯಿಸುವಿಕೆ.** C) ಸಮೋನ್ನತಿ ಬೇಸಾಯ D) ಮೆಟ್ಟಿಲು ಪಂಕ್ತಿ ಬೇಸಾಯ.

15. ಮಣ್ಣಿನ ಸವೆತ : ಭೂ ಮೇಲ್ಪದರ ಭಾಗವು ನೈಸರ್ಗಿಕ ಕ್ರಿಯೆಗಳಿಂದ ನಶಿಸುವುದು: : ಮಣ್ಣಿನ ಸಂರಕ್ಷಣೆ ಎಂದರೆ :----------

A) **ಮಣ್ಣಿನ ಸವೆತದ ನಿಯಂತ್ರಣ ಮತ್ತು ಫಲವತ್ತತೆ ಕಾಪಾಡುವುದು.** B) ವಿವಿಧ ಬೆಳೆಗಳನ್ನು ಬೆಳೆಯುವುದು .

C) ಮೇಲ್ಪದರ ಮಣ್ಣನ್ನು ಇಟ್ಟಿಗೆ, ಹೆಂಚು ತಯಾರಿಕೆಗೆ ಬಳಸುವುದು. D) ರಾಸಾಯನಿಕ ಗೊಬ್ಬರಗಳನ್ನು ಹೆಚ್ಚಾಗಿ ಬಳಸುವುದು

## 5.ಭಾರತದ ಅರಣ್ಯ ಸಂಪತ್ತು

1. ನಿತ್ಯಹರಿದ್ವರಣ ಕಾಡುಗಳು ವಾರ್ಷಿಕವಾಗಿ ಎಷ್ಟು ಸೆಂ. ಮೀ.ಗಳಿಗಿಂತ ಅಧಿಕ ವಾರ್ಷಿಕ ಮಳೆ ಬೀಳುವ ಭಾಗದಲ್ಲಿ ಕಂಡುಬರುತ್ತದೆ?

A) 100–200cm B) **250cm ಅಧಿಕ** C) 60–100cm D) 10–50cm

2. **ಭಾರತದ ಪ್ರಥಮ ರಾಷ್ಟ್ರೀಯ ಉದ್ಯಾನವನ ಯಾವುದು?**

A) ಸುಂದರಬನ್ B) ಸರಿಸ್ಕ C) ಗಿರ್ ಕಾಡುಗಳ D) **ಜಿಮ್ ಕಾರ್ಬೆಟ್**

3. **ಭಾರತದಲ್ಲಿ ಅತಿ ಕಡಿಮೆ ಅರಣ್ಯ ಪ್ರದೇಶವನ್ನು ಹೊಂದಿರುವ ರಾಜ್ಯ**

A) **ಗೋವಾ** B) ಮಧ್ಯಪ್ರದೇಶ C) ಅರುಣಾಚಾಲ D) ಉತ್ತರಾಂಚಲ

4. **ಈ ಕೆಳಗಿನವುಗಳಲ್ಲಿ ಯಾವುದು ವನ್ಯಜೀವಿಧಾಮವಾಗಿದೆ ?**

A) ಕಾಂಚನ ಜಂಗ B) ಪಚಮಾರಿ C) **ಜಲ್ದ ಪಾರ** D) ತೊಡೊಬ

5. **ನದಿಮುಖಜ ಭೂಮಿಗಳಲ್ಲಿ ಕಂಡುಬರುವ ಅರಣ್ಯಗಳು**

A) ಪರ್ವತ ಕಾಡುಗಳು B) ಮಾನ್ಸೂನ್ ಕಾಡುಗಳು C) ಮರುಭೂಮಿ ಸಸ್ಯವರ್ಗ D) **ಮ್ಯಾಂಗ್ರೋವ್ ಕಾಡುಗಳು**

6. **ಬಿಳಿಲುಗಳು ಯಾವ ಪ್ರಕಾರದ ಕಾಡುಗಳಲ್ಲಿ ಕಂಡು ಬರುತ್ತವೆ?**

A) **ಮ್ಯಾಂಗ್ರೋ ಕಾಡುಗಳು** B) ಮಾನ್ಸೂನ್ ಕಾಡುಗಳು C) ಮರುಭೂಮಿ ಸಸ್ಯವರ್ಗ D) ಪರ್ವತ ಕಾಡುಗಳು

7. **ಭಾರತದಲ್ಲಿಯೇ ಅತಿ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ರಾಜ್ಯ**

A) ಉತ್ತರಪ್ರದೇಶ B) ಕರ್ನಾಟಕ C) **ಮಧ್ಯಪ್ರದೇಶ** D) ಗೋವಾ

8. **ಅರಣ್ಯ ಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳನ್ನು ಹೀಗೆ ಕರೆಯುತ್ತಾರೆ**

A) ಉದ್ಯಾನವನಗಳು B) **ವನ್ಯಜೀವಿಧಾಮಗಳು** C) ಜೀವಿ ಸಂರಕ್ಷಣಾ ವಲಯ D) ಅರಣ್ಯ

9. **ಭಾರತದಲ್ಲಿ ಎಷ್ಟು ರಾಷ್ಟ್ರೀಯ ಉದ್ಯಾನವನಗಳಿವೆ?**

A) 523 B) 18 C) 1872 D) **99**

10. **ಬನ್ನೇರುಘಟ್ಟ ಇದೊಂದು**

A) ವನ್ಯಜೀವಿಧಾಮ B) ಜೀವಿ ಸಂರಕ್ಷಣಾ ವಲಯ C) **ರಾಷ್ಟ್ರೀಯ ಉದ್ಯಾನವನ** D) ಯಾವುದು ಅಲ್ಲ

11. **ಶ್ರೀಗಂಧದ ಮರ ಯಾವ ಪ್ರಕಾರದ ಅರಣ್ಯಗಳಲ್ಲಿ ಕಂಡುಬರುತ್ತದೆ?**

A) **ಪರ್ಣಪಾತಿ ಅರಣ್ಯಗಳು** B) ಮ್ಯಾಂಗ್ರೋವ್ ಅರಣ್ಯ C) ಹರಿದ್ವರ್ಣ ಕಾಡುಗಳು D) ಪರ್ವತ ಕಾಡುಗಳು

12. **ಭಾರತದ ಅರಣ್ಯದ ಒಟ್ಟು ವಿಸ್ತೀರ್ಣ**

A) 7.74 ಲ.ಚ. ಕೀ. B) **23.6 ಲ.ಚ. ಕೀ.** C) 33.3 ಲ.ಚ. ಕೀ. D) 29.9 ಲ.ಚ. ಕೀ.

13. **ಮರುಭೂಮಿ ಸಸ್ಯವರ್ಗಗಳಲ್ಲಿ ಕೇವಲ ಮುಳ್ಳಿನ ಗಿಡಗಂಟಿಗಳು ಬೆಳೆಯಲು ಕಾರಣವೇನು?**

A) ಅತ್ಯಧಿಕ ಮಳೆ ಬೀಳುವುದರಿಂದ B) **ಮಳೆಯ ಕೊರತೆಯಿಂದ**

C) ವಿಶಾಲವಾದ ಭೂಪ್ರದೇಶ ವಿರುವುದರಿಂದ D) ಫಲವತ್ತಾದ ಮಣ್ಣು ಇರದೇ ಇರುವುದರಿಂದ

14. **ಮಾನಸ ವನ್ಯಜೀವಿ ಧಾಮ ಯಾವ ರಾಜ್ಯದಲ್ಲಿ ಕಂಡುಬರುತ್ತದೆ?**

A) **ಅಸ್ಸಾಂ** B) ಕರ್ನಾಟಕ C) ತಮಿಳುನಾಡು D) ತೆಲಂಗಾಣ

15. **ಪ್ರತಿವರ್ಷವೂ ನಿರ್ದಿಷ್ಟ ಅವಧಿಯಲ್ಲಿ ಎಲೆಗಳನ್ನು ಉದುರಿಸುವ ಕಾಡುಗಳು**

A) ನಿತ್ಯಹರಿದ್ವರಣ ಕಾಡುಗಳು B) ಮರುಭೂಮಿ ಸಸ್ಯವರ್ಗ C) **ಪರ್ಣಪಾತಿ ಅರಣ್ಯಗಳು** D) ಮ್ಯಾಂಗ್ರೋವ್ ಕಾಡು

## 6.ಭಾರತದ ಜಲಸಂಪನ್ಮೂಲಗಳು

1. **ಸಟ್ಲೇಜ್ ಇದು ಯಾವ ನದಿಯ ಉಪನದಿ**

A) **ಸಿಂಧೂ** B) ರಾವಿ C) ಗಂಗಾ D) ಬ್ರಹ್ಮಪುತ್ರ

2. **ಸಿಂಧೂ ನದಿಯ ಉಗಮ ಸ್ಥಳ..............**

A) ಸಿವಾಹ ಬೆಟ್ಟಗಳು B) ಗಂಗೋತ್ರಿ C) ತಲಕಾವೇರಿ D) **ಕೈಲಾಸ ಪರ್ವತ**

**3. ಬ್ರಹ್ಮಪುತ್ರಾ ನದಿಯು............. ಎಂಬಲ್ಲಿ ಉಗಮ ಹೊಂದುತ್ತದೆ.**

A) **ಚೆಮಯಂಗ್ ಡಂಗ್** B) ಗಂಗೋತ್ರಿ C) ಸಿವಾಲಿಕ್ ಬೆಟ್ಟಗಳು D) ಕೈಲಾಸ ಪರ್ವತ

**4. ಗಂಗಾನದಿಯು ಅಂತಿಮವಾಗಿ ಇಲ್ಲಿ ಸೇರುತ್ತದೆ...............**

A) ಫೆಸಿಫಿಕ್ ಸಾಗರ B) ಅರಬ್ಬೀ ಸಮುದ್ರ C) ಹಿಂದೂ ಮಹಾಸಾಗರ D) **ಬಂಗಾಳಕೊಲ್ಲಿ**

**5. ಸಿಂಧೂ ನದಿ ಭಾರತದಲ್ಲಿ ..........ಕಿಲೋ ಮೀಟರ್ ಹರಿಯುತ್ತದೆ**

A) 2589 **KM** B) 2525 **KM** C) 2897 **KM** D) **709 KM**

**6. ಗಂಗಾ ನದಿಯು ಬಾಂಗ್ಲಾದೇಶವನ್ನು ಸೇರಿದ ನಂತರ ಯಾವ ನದಿಯೊಂದಿಗೆ ಸೇರುತ್ತದೆ?**

A) **ಬ್ರಹ್ಮಪುತ್ರಾ** B) ಕೃಷ್ಣ C) ಸಿಂಧೂ D) ಕಾವೇರಿ

**7. ಭಾರತದಲ್ಲಿ ನೇರವಾದ ಗುರುತ್ವವುಳ್ಳ ಅಣೆಕಟ್ಟು ಬಾಕ್ರಾ (ಸಟ್ಲೇಜ್ ನದಿ). ಇದರ ಜಲಾಶಯವನ್ನು ಹೀಗೆನ್ನುವವರು...**

A) ನಾಗಾರ್ಜುನ ಸಾಗರ. B) ಗೋವಿಂದ ವಲ್ಲಭ ಪಂತ್ ಸಾಗರ. C) **ಗೋವಿಂದ ಸಾಗರ.** D) ಪಂಪಸಾಗರ.

**8. ಸಿಂಧೂನದಿಯ ಉಗಮ ಸ್ಥಾನ: ಕೈಲಾಸಪರ್ವತ : : ಗಂಗಾ ನದಿಯ ಉಗಮ ಸ್ಥಾನ : -----**

A) ತಲಕಾವೇರಿ B) ಚಮಯಂಗ್ ಡಂಗ್ C) **ಗಂಗೋತ್ರಿ** D) ಸಿವಾಹ ಶ್ರೇಣಿ

**9. ಗಂಗಾನದಿಯ ಅತ್ಯಂತ ಉದ್ದವಾದ ಉಪನದಿ ...............**

A) **ಯಮುನಾ** B) ಗೋಮತಿ C) ಸೋನ D) ಕೋಸಿ

**10. ಉತ್ತರ ಭಾರತದ ನದಿಗಳ ಸರಿಯಾದ ಗುಂಪು.**

A) ಗೋದಾವರಿ,ನರ್ಮದಾ,ತಪತಿ. B)ಶರಾವತಿ,ಕಾಳಿ,ಕಬಿನಿ, C)ಕೃಷ್ಣ,ಕಾವೇರಿ,ಮಹಾನದಿ. D)**ಸಿಂಧೂ,ಗಂಗಾ,ಬ್ರಹ್ಮಪುತ್ರ.**

**11. ಭಾರತವು ------ ಪ್ರಧಾನ ದೇಶ.**

A) **ಕೃಷಿ.** B) ತಾಂತ್ರಿಕ ಉತ್ಪಾದನೆ. C) ವಾಣಿಜ್ಯ D) ಕೈಗಾರಿಕೆ.

**12. ದಾಮೋದರ್ ನದಿಕಣಿವೆ ಯೋಜನೆಯ ನಿರ್ಮಾಣದ ಪರಿಣಾಮ.........**

A) ಭೂಕಂಪನಗಳನ್ನು ಉಂಟುಮಾಡಿದೆ. B) ಕೈಗಾರಿಕಾ ಪ್ರದೇಶಗಳು ಮುಳುಗಡೆಯಾಗಿವೆ.

C)**ದಾಮೋದರ್ ನದಿಯು ಬಂಗಾಳದ ದುಃಖದ ನದಿಯಾಗಿ ಉಳಿದಿಲ್ಲ.** D) ಭೂಕುಸಿತಗಳು ಹೆಚ್ಚಾಗಿವೆ.

**13. ಉತ್ತರ ಕರ್ನಾಟಕದ ಅತಿದೊಡ್ಡ ವಿವಿದ್ದೋದ್ದೇಶ ನದಿಕಣಿವೆ ಯೋಜನೆ ಎಂದರೆ.....**

A)ನಾಗಾರ್ಜುನ ಸಾಗರ ಯೋಜನೆ. B)ಹಿರಾಕುಡ್ ಯೋಜನೆ C)ತುಂಗಭದ್ರಾ ಯೋಜನೆ D)**ಕೃಷ್ಣಾ ಮೇಲ್ದಂಡೆ ಯೋಜನೆ.**

**14. ಭಾರತದ ಪಶ್ಚಿಮಕ್ಕೆ ಹರಿದು ಅರಬ್ಬಿ ಸಮುದ್ರವನ್ನು ಸೇರುವ ಪರ್ಯಾಯ ದ್ವೀಪದ ನದಿಗಳ ಸರಿಯಾದ ಗುಂಪು .**

A) **ನರ್ಮದಾ, ತಪತಿ, ಶರಾವತಿ, ನೇತ್ರಾವತಿ.** B) ಗೋದಾವರಿ, ಕೃಷ್ಣಾ, ಕಾವೇರಿ, ಕಬಿನಿ.

C) ಹೇಮಾವತಿ, ಶಿಂಶಾ, ಕಬಿನಿ, ಅರ್ಕಾವತಿ. D) ಘಟಪ್ರಭ, ಮಲಪ್ರಭ, ತುಂಗಭದ್ರಾ, ಸುವರ್ಣಾವತಿ.

**15. ಭಾರತದಲ್ಲೇ ಉದ್ದವಾದ ಅಣೆಕಟ್ಟು ಯಾವುದು ?**

A) ನಾರಾಯಣಪುರ ಅಣೆಕಟ್ಟು (ಕೃಷ್ಣಾ ನದಿ) B) ತಿಲ್ಲೈಯಾ ಅಣೆಕಟ್ಟು (ದಾಮೋದರ್ ನದಿ)

C) **ಹಿರಾಕುಡ್ ಅಣೆಕಟ್ಟು** (ಮಹಾನದಿ) D) ಭಾಕ್ರಾ ಅಣೆಕಟ್ಟು (ಸಟ್ಲೇಜ್ ನದಿ).

**16. ಭಾರತದ ಕೃಷಿಯು ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ. ಆದಾಗ್ಯೂ ಭಾರತಕ್ಕೆ ನೀರಾವರಿಯ ಅವಶ್ಯಕತೆ ಇದೆ. ಏಕೆಂದರೆ ಭಾರತದಲ್ಲಿ ಮಳೆಯ ಹಂಚಿಕೆಯು............**

A) ವರ್ಷವಿಡಿ ಸಮಾನವಾಗಿ ಹಂಚಿಕೆಯಾಗಿದೆ. B) ಅತಿವೃಷ್ಟಿಯಿಂದ ಕೂಡಿದೆ.

C) **ಋತುಕಾಲಿಕ, ಅಕಾಲಿಕ & ಅಸಮಾನತೆಯಿಂದ ಕೂಡಿದೆ.** D) ಅನಾವೃಷ್ಟಿಯಿಂದ ಕೂಡಿದೆ.

**17. ಉತ್ತರ ಭಾರತದ ನದಿಗಳು: ಹಿಮಾಲಯದ ನದಿಗಳು: :ದಕ್ಷಿಣ ಭಾರತದ ನದಿಗಳು :-------**

A) **ಪರ್ಯಾಯ ದ್ವೀಪದ ನದಿಗಳು.** B) ಪಶ್ಚಿಮ ಘಟ್ಟದ ನದಿಗಳು.

C)ಪಶ್ಚಿಮಕ್ಕೆ ಹರಿಯುವ ನದಿಗಳು. D) ಪೂರ್ವ ಘಟ್ಟದ ನದಿಗಳು.

**18. ಭಾರತ ಮತ್ತು ನೇಪಾಳ ದೇಶಗಳು ಸಂಯುಕ್ತವಾಗಿ ನಿರ್ಮಿಸಿರುವ ವಿವಿದ್ದೋದ್ದೇಶ ನದಿಕಣಿವೆ ಯೋಜನೆ ಯಾವುದು?**

A) ರಿಹಾಂದ್ ಯೋಜನೆ. B) ನಾಗಾರ್ಜುನ ಸಾಗರ ಯೋಜನೆ C) ಚಂಬಲ್ ಯೋಜನೆ. D) **ಕೋಸಿ ಯೋಜನೆ.**

**19. ನೀರಾವರಿ ಕ್ಷೇತ್ರದಲ್ಲಿ ಶೇ. 60.7 ರಷ್ಟನ್ನು ಹೊಂದಿರುವ ಭಾರತದ ಅತಿ ಪ್ರಮುಖ ನೀರಾವರಿಯ ವಿಧಾನವೆಂದರೆ .....**

A) ಹನಿ ನೀರಾವರಿ B) ಕೆರೆ ನೀರಾವರಿ C) **ಬಾವಿ ನೀರಾವರಿ** D) ಕಾಲುವೆ ನೀರಾವರಿ

**20. ನರ್ಮದಾ ನದಿಯ ಉಗಮ ಸ್ಥಾನ : ಅಮರಕಂಟಕ : : ತಪತಿ ನದಿಯ ಉಗಮ ಸ್ಥಾನ: ----**

A) ತ್ರಯಂಬಕ B) **ಮೂಲ್ತಾಯಿ** C) ಮಹಾಬಲೇಶ್ವರ D) ತಲಕಾವೇರಿ

**21. ಕೃಷ್ಣಾ ನದಿಯ ಉಗಮ ಸ್ಥಾನ : ಮಹಾಬಲೇಶ್ವರ : : ಕಾವೇರಿ ನದಿಯ ಉಗಮ ಸ್ಥಾನ :----**

A) ಅಮರ ಕಂಟಕ B) **ತಲಕಾವೇರಿ** C) ತ್ರಯಂಬಕ D) ಸಿವಾಹ ಶ್ರೇಣಿ

**22. ತುಂಗಭದ್ರಾ ಯೋಜನೆಯ ಜಲಾಶಯ : ಪಂಪಸಾಗರ : : ರಿಹಾಂದ್ ಯೋಜನೆಯ ಜಲಾಶಯ : ------**

A) **ಗೋವಿಂದ ವಲ್ಲಭ ಪಂತ್ ಸಾಗರ.** B) ಗೋವಿಂದ ಸಾಗರ. C) ಬಸವಸಾಗರ. D) ನಾಗಾರ್ಜುನ ಸಾಗರ.

**23. ದಾಮೋದರ್ ನದಿ ಕಣಿವೆ ಯೋಜನೆ : ಬಿಹಾರ & ಪಶ್ಚಿಮ ಬಂಗಾಳ : : ತುಂಗಭದ್ರಾ ಯೋಜನೆ : ----**

A)**ಕರ್ನಾಟಕ ಮತ್ತು ತೆಲಂಗಾಣ.** B)ಬಿಹಾರ ಮತ್ತು ಒರಿಸ್ಸಾ C)ಪಂಜಾಬ್ ಮತ್ತು ಹರಿಯಾಣ . D)ಕರ್ನಾಟಕ ಮತ್ತು ಮಹಾರಾಷ್ಟ್ರ.

**24. ಅಮೇರಿಕಾ ಸಂಯುಕ್ತ ಸಂಸ್ಥಾನದ ಟೆನಿಸ್ಸಿ ನದಿಕಣಿವೆ ಯೋಜನೆಯ ಮಾದರಿಯಂತೆ ರೂಪಿಸಲಾಗಿರುವ ಭಾರತದ ಮೊಟ್ಟ ಮೊದಲ ವಿವಿದ್ದೋದ್ದೇಶ ನದಿ ಕಣಿವೆ ಯೋಜನೆ ಯಾವುದು?**

A) ಹಿರಾಕುಡ್ ಯೋಜನೆ. B) **ದಾಮೋದರ್ ನದಿ ಕಣಿವೆ ಯೋಜನೆ.**

C) ಕೃಷ್ಣಾ ಮೇಲ್ದಂಡೆ ಯೋಜನೆ. D) ಭಾಕ್ರಾ ನಂಗಲ್ ನದಿ ಕಣಿವೆ ಯೋಜನೆ.

**25. ಭಾರತದ ಉದ್ದವಾದ ನದಿ : ಗಂಗಾನದಿ : : ದಕ್ಷಿಣ ಭಾರತದಲ್ಲೇ ಉದ್ದವಾದ ನದಿ : -------**

A) ನರ್ಮದಾ ನದಿ B) ಕೃಷ್ಣ C) ಮಹಾನದಿ D) **ಗೋದಾವರಿ** .

## 7.ಭಾರತದ ಭೂ ಸಂಪನ್ಮೂಲಗಳು

**1. ಅತಿ ಹೆಚ್ಚು ನಿವ್ವಳ ಸಾಗುವಳಿ ಭೂಮಿ ಹೊಂದಿರು ರಾಜ್ಯಗಳು**

A) **ಪಂಜಾಬ,ಹರಿಯಾಣ,ಉತ್ತರ ಪ್ರದೇಶ** B) ಈಶಾನ್ಯ ರಾಜ್ಯಗಳು

C) ಕರ್ನಾಟಕ,ತಮಿಳುನಾಡು,ಆಸ್ಸಾಂ D) ಹರಿಯಾಣ ರಾಜಸ್ಥಾನ,ಗೋವಾ

**2. ಒಂದೇ ಭೂಮಿಯಲ್ಲಿ ವರ್ಷದಲ್ಲಿ ಎರಡು ಅಥವಾ ಮೂರು ಬೆಳೆಗಳನ್ನು ಬೆಳೆಯುವ ಬೇಸಾಯ ಪದ್ಧತಿ**

A) ವಾಣಿಜ್ಯ ಬೇಸಾಯ B) ಸ್ಥಿರ ಬೇಸಾಯ C) **ಸಾಂದ್ರ ಬೇಸಾಯ** D) ಮಿಶ್ರ ಬೇಸಾಯ

**3. ಭಾರತವು ಭತ್ತ ಬೆಳೆಯುವಲ್ಲಿ ಜಗತ್ತಿನಲ್ಲಿ ........... ಸ್ಥಾನ ಹೊಂದಿದೆ**

A) ಪ್ರಥಮ ಸ್ಥಾನ B) **ದ್ವಿತಿಯ ಸ್ಥಾನ** C) ತೃತಿಯ ಸ್ಥಾನ D) ನಾಲ್ಕನೆಯ

**4. ಭಾರತದಲ್ಲಿ ಅತಿ ಹೆಚ್ಚು ಭತ್ತ ಉತ್ಪಾದಿಸುವ ರಾಜ್ಯ........**

A) ಪಂಜಾಬ B) ಆಂದ್ರಪ್ರದೇಶ C) ಉತ್ತರಪ್ರದೇಶ D) **ಪಶ್ಚಿಮ ಬಂಗಾಳ**

**5. ಭಾರತದಲ್ಲಿ ಅತಿ ಹೆಚ್ಚು ಗೋಧಿ ಬೆಳೆಯುವ ರಾಜ್ಯ........**

A) ಪಂಜಾಬ B) ಕರ್ನಾಟಕ C) **ಉತ್ತರಪ್ರದೇಶ** D) ಹರಿಯಾಣ

**6. ಭಾರತವು ಹತ್ತಿಯ ಉತ್ಪಾದನೆಯಲ್ಲಿ ಜಗತ್ತಿನಲ್ಲಿ ಎಷ್ಟನೇ ಸ್ಥಾನ ಹೊಂದಿದೆ**

A) **ತೃತಿಯ ಸ್ಥಾನ** B) ಪ್ರಥಮ ಸ್ಥಾನ C) ನಾಲ್ಕನೆಯ D) ದ್ವಿತಿಯ ಸ್ಥಾನ

**7. ಬೆಳೆ,ಪಶುಪಾಲನೆ ಮತ್ತು ಜೇನು ಸಾಕಣೆಯನ್ನು ಒಳಗೊಂಡ ಕೃಷಿ ಪದ್ಧತಿ**

A)ಸ್ಥಿರ ಬೇಸಾಯ ಪದ್ಧತಿ B)**ಮಿಶ್ರಣ ಬೇಸಾಯ ಪದ್ಧತಿ** C)ತೋಟಗಾರಿಕಾ ಬೇಸಾಯ ಪದ್ಧತಿ D)ವರ್ಗಾವಣಾ ಬೇಸಾಯ ಪದ್ಧತಿ

**8. ಮುಂಗಾರು ಮತ್ತು ಹಿಂಗಾರು ಬೆಳೆ ಬೆಳೆಯುವ ಅವಧಿಗಳ ನಡುವಣ ಅವಧಿಯಲ್ಲಿ ಬೆಳೆಯುವ ಋತು**

A) **ಜೇಡಬೆಳೆ ಋತು** B) ಹಿಂಗಾರು ಬೆಳೆ ಋತು C) ಮುಂಗಾರು ಬೆಳೆ ಋತು D) ಮಧ್ಯದ ಬೆಳೆ ಋತು

**9. ಸಾಕಷ್ಟು ಕಾರ್ಮಿಕರು ಮತ್ತು ಭಂಡವಾಳದ ಅವಶ್ಯವಿರುವ ಬೇಸಾಯ ಪದ್ಧತಿ**

A) ವರ್ಗಾವಣಾ ಬೇಸಾಯ ಪದ್ಧತಿ B)ಸ್ಥಿರ ಬೇಸಾಯ ಪದ್ಧತಿ C)ಮಿಶ್ರ ಬೇಸಾಯ ಪದ್ಧತಿ D)**ನೆಡುತೋಪು ಬೇಸಾಯ ಪದ್ಧತಿ**

**10. ಭಾರತದ ಬುಡಕಟ್ಟು ಜನರಲ್ಲಿ ಹೆಚ್ಚು ರೂಢಿಯಲ್ಲಿದ್ದ ವ್ಯವಸಾಯ ಪದ್ಧತಿ ಎಂದರೆ…..**

A) ನೆಡು ತೋಪು ಬೇಸಾಯ ಪದ್ಧತಿ B)**ವರ್ಗಾವಣಾ ಬೇಸಾಯ ಪದ್ಧತಿ**

C)ಸ್ಥಿರ ಬೇಸಾಯ ಪದ್ಧತಿ D)ನೀರಾವರಿ ಬೇಸಾಯ ಪದ್ಧತಿ

**11. ವರ್ಗಾವಣಾ ಬೇಸಾಯ ಪದ್ಧತಿಯಲ್ಲಿ ಪದೇ ಪದೇ ಕೃಷಿ ಭೂಮಿಯನ್ನು ಬದಲಾಯಿಸಲು ಕಾರಣ**

A) ಜನರು ವಲಸೆ ಹೋಗುತ್ತಿದ್ದರು B) **ಮಣ್ಣಿನ ಸಾರವು ಕಡಿಮೆಯಾಗುತ್ತಿತ್ತು**

C) ಬೇರೆ ಬೇರೆ ಬೆಳೆಗಳನ್ನು ಬೆಳೆಯುತ್ತಿದ್ದರು D) ಮಳೆಯ ಪ್ರಮಾಣ ಕಡಿಮೆಯಾಗುತ್ತಿತ್ತು

**12. ಮಿಶ್ರಣ ಬೇಸಾಯದ ಅತಿ ಮುಖ್ಯ ಲಕ್ಷಣವೆಂದರೆ……….**

A) ಅಧಿಕ ಭಂಡವಾಳ ಮತ್ತು ಕಾರ್ಮಿಕರು B) ಯಂತ್ರಗಳು ಮತ್ತು ವೈಜ್ಞಾನಿಕ ಸಾಗುವಳಿ

C) ಅತ್ಯಲ್ಪ ಕೃಷಿ ಉತ್ಪನ್ನಗಳ ಮಾರಾಟ D) **ಸಾಗುವಳಿ ಜೊತೆಗೆ ಪಶುಪಾಲನೆ**

**13. ಭಾರತದಲ್ಲಿ ಒಣ ಬೇಸಾಯವು ಹೆಚ್ಚಾಗಿ ಪರ್ಯಾಯ ಪ್ರಸ್ಥಭೂಮಿ ಮತ್ತು ರಾಜಸ್ಥಾನದ ಪಶ್ಚಿಮ ಭಾಗದಲ್ಲಿ ರೂಢಿಯಲ್ಲಿದೆ ಏಕೆಂದರೆ ಅಲ್ಲಿ…………**

A) **ಅತಿ ಕಡಿಮೆ ಮಳೆ ಬೀಳುತ್ತದೆ** B) ಮಣ್ಣಿನ ಸಾರವು ಕಡಿಮೆಯಿದೆ

C) ಅಧಿಕ ಮಳೆ ಬೀಳುತ್ತದೆ D) ನೀರಾವರಿ ಸೌಲಭ್ಯ ಹೆಚ್ಚಾಗಿದೆ

**14. ನೀರಾವರಿ ಬೇಸಾಯ ಭಾರತದ ಪಶ್ಚಿಮ ಕರಾವಳಿಯ ಯುದ್ಧಕ್ಕೂ ಕಡಿಮೆ ಕಂಡು ಬರುತ್ತದೆ.ಕಾರಣವೆಂದರೆ…….**

A) ಮೀನುಗಾರಿಕೆ ಪ್ರಮುಖ ವೃತ್ತಿಯಾಗಿದೆ B) ಲ್ಯಾಟರೈಟ್ ಮಣ್ಣು ಹೆಚ್ಚಾಗಿದೆ

C) **ಸಾಕಷ್ಟು ಮಳೆ ಬೀಳುತ್ತದೆ** D) ಹೆಚ್ಚು ಕಾಡು ಕಂಡುಬರತ್ತದೆ

**15. ಈ ಕೆಳಗಿನವುಗಳು ಭಾರತದ ಪ್ರಮುಖ ಬೆಳೆಗಳಾಗಿದ್ದು ಅವುಗಳಲ್ಲಿ ವಾಣಿಜ್ಯ ಬೆಳೆಗಳು ಗುಂಪು ಯಾವುದು?**

A) ಭತ್ತ,ಗೋಧಿ,ಜೋಳ,ದ್ವಿದಳ ಧಾನ್ಯ B) **ಕಬ್ಬು,ಹತ್ತಿ,ತಂಬಾಕು,ಎಣ್ಣೆಕಾಳು**

C) ಹತ್ತಿ,ಕಬ್ಬು,ಸೆಣಬು D) ಕಾಫಿ,ಚಹ,ರಬ್ಬರ

## 9..ಭಾರತದ ಸಾರಿಗೆ ಮತ್ತು ಸಂಪರ್ಕ

**1. ಈ ಕೆಳಗಿನವುಗಳಲ್ಲಿ ಅತ್ಯಂತ ವೇಗದ ಸಾರಿಗೆ**

A) ಭೂಸಾರಿಗೆ B) ಜಲಸಾರಿಗೆ C) **ವಾಯು ಸಾರಿಗೆ** D) ರೈಲು ಸಾರಿಗೆ

**2. ಭಾರತದ ಹಳ್ಳಿಗಳು ಮತ್ತು ಕೃಷಿ ಅಭಿವೃದ್ಧಿಗೆ ಸಹಾಯಕ ವಾದ ಸಾರಿಗೆಯ ಮಾಧ್ಯಮ**

A) ವಾಯು ಸಾರಿಗೆ B) **ಭೂಸಾರಿಗೆ** C) ಕೊಳವೆ ಮಾರ್ಗ D) ಜಲಸಾರಿಗೆ

**3. ಅರಬ್ಬಿ ಸಮುದ್ರದ ರಾಣಿ ಎಂದು ಕರೆಯುವ ಬಂದರು**

A) ಮುಂಬೈ B) ಮಂಗಳೂರು C) ಕಾಂಡ್ಲಾ D) **ಕೊಚ್ಚಿ**

**4. ನದಿ ದಂಡೆಯ ಮೇಲಿರುವ ಬಂದರು**

A) **ಕೊಲ್ಕತ್ತಾ** B) ಚೆನ್ನೈ C) ವಿಶಾಖಪಟ್ಟಣ D) ಎನ್ನೋರ್

**5. ಇವುಗಳು ರಾಜ್ಯ ರಾಜಧಾನಿಗಳೊಂದಿಗೆ ಜಿಲ್ಲಾ ಕೇಂದ್ರ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುತ್ತವೆ**

A) ರಾಷ್ಟ್ರೀಯ ಹೆದ್ದಾರಿಗಳು B) **ರಾಜ್ಯ ಹೆದ್ದಾರಿಗಳು** C) ಜಿಲ್ಲಾ ರಸ್ತೆಗಳು D) ಸೂಪರ್ ಹೆದ್ದಾರಿಗಳು

**6. ಭಾರತದ ಹೆಬ್ಬಾಗಿಲು ಎಂದು ಹೆಸರಾದ ಬಂದರು**

A) ನವಮಂಗಳೂರು B) ದೆಹಲಿ C) **ಮುಂಬೈ** D) ಕಾಂಡ್ಲಾ

**7. ಭಾರತದ ಅತ್ಯಂತ ಹಳೆಯ ಮತ್ತು ಈಗಲೂ ಅಸ್ತಿತ್ವ ಕಾಯ್ದುಕೊಂಡಿರುವ ವೃತ್ತಪತ್ರಿಕೆ**

A) **ಬಾಂಬೆ ಸಮಾಚಾರ** B) ಅಮೃತ ಬಜಾರ್ C) ಕರ್ನಾಟಕ ವೃತ್ತ D) ಮಂಗಳೂರು ಸಮಾಚಾರ

**8. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಈಗಿನ ಹೆಸರೇನು**

A) ಲಾಲಬಹದ್ದೂರ್ ಶಾಸ್ತ್ರಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ B) **ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ**

C) ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ D) ಛತ್ರಪತಿ ಶಿವಾಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

**9. ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆ ಯಾರಿಗೆ ಸೇರಿದೆ**

A) ಕೇಂದ್ರ ಸರ್ಕಾರ B) ರಾಜ್ಯ ಸರ್ಕಾರ C) **ಕೇಂದ್ರ ಲೋಕೋಪಯೋಗಿ ಇಲಾಖೆ** D) ಜಿಲ್ಲಾ ಪಂಚಾಯತ್

**10. ಗಡಿ ರಸ್ತೆ ಅಭಿವೃದ್ಧಿ ನಿರ್ಮಾಣ ಮತ್ತು ನಿರ್ವಹಣೆ ಯಾರಿಗೆ ಸೇರಿದೆ**

A) ಕೇಂದ್ರ ಸರ್ಕಾರ B)ಕೇಂದ್ರ ಲೋಕೋಪಯೋಗಿ ಇಲಾಖೆ

**C)ಗಡಿ ರಸ್ತೆ ಅಭಿವೃದ್ಧಿ ಪ್ರಾಧಿಕಾರ** D)ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ

**11 ಕರ್ನಾಟಕದ ಹೆಬ್ಬಾಗಿಲು ಎಂದು ಹೆಸರಾದ ಬಂದರು ಯಾವುದು**

A) ಕಾಂಡ್ಲಾ B) **ನವ ಮಂಗಳೂರು** C) ವಿಶಾಖಪಟ್ಟಣ D) ಕೊಚ್ಚಿನ್

**12. ಚೆನ್ನೈ ಬಂದರಿನ ಒತ್ತಡ ಕಡಿಮೆ ಮಾಡಲು ನಿರ್ಮಾಣವಾದ ಹೊಸ ಬಂದರು ಯಾವುದು**

A) ಹಾಲ್ದಿಯಾ B) ನವಸೇವಾ C) ವಿಶಾಖಪಟ್ಟಣ D) **ಎನ್ನೋರ್**

**13. ಭಾರತದಲ್ಲಿ ಎಷ್ಟು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ**

A) 25 B) 30 C) **28** D) 15

**14. ರಾಷ್ಟ್ರೀಯ ವ್ಯವಸ್ಥೆಯೊಂದರಲ್ಲಿ ಕೃಷಿ ಮತ್ತು ಕೈಗಾರಿಕೆಗಳು ದೇಹ ಮತ್ತು ಆಸ್ತಿಗಳ ಆದರೆ..............ಮತ್ತು.................ರಕ್ತನಾಳಗಳ ಇದ್ದಂತೆ ಎಂಬ ನಾಣ್ನುಡಿ ಇದೆ**

A) ಶಿಕ್ಷಣ ಮತ್ತು ಆರೋಗ್ಯ ಜಾಲ B) ಮಾಹಿತಿ ಮತ್ತು ತಂತ್ರಜ್ಞಾನ ಜಾಲ

C) **ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳ ಜಾಲ** D) ದೂರವಾಣಿ ಮತ್ತು ಮೊಬೈಲ್ ಸಂಪರ್ಕ ಜಾಲ

**15. ಭಾರತದ ಹಳ್ಳಿಗಳು ಮತ್ತು ಕೃಷಿ ಅಭಿವೃದ್ಧಿಗೆ................ಸಾರಿಗೆ ಮಾಧ್ಯಮ ಅತ್ಯವಶ್ಯಕವಾದುದು**

A) **ರಸ್ತೆ ಸಾರಿಗೆ** B) ರೈಲು ಸಾರಿಗೆ C) ವಾಯು ಸಾರಿಗೆ D) ಕೊಳವೆ ಮಾರ್ಗ

**16. ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆ ಜವಾಬ್ದಾರಿ ಹೊಂದಿರುವುದು**

A) ಕೇಂದ್ರ ಲೋಕೋಪಯೋಗಿ ಇಲಾಖೆ B) ರಾಜ್ಯ ಲೋಕೋಪಯೋಗಿ ಇಲಾಖೆ

C) **ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ** D)ಜಿಲ್ಲಾ ಪಂಚಾಯತ್

**17. ಈ ಪ್ರಮುಖ ರಸ್ತೆಗಳು ರಾಜ್ಯಗಳ ರಾಜಧಾನಿಯಿಂದ ಪ್ರಮುಖ ಬಂದರು ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಮುಖ್ಯನಗರ ಮತ್ತು ಪಟ್ಟಣಗಳೊಂದಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು**

A) **ರಾಷ್ಟ್ರೀಯ ಹೆದ್ದಾರಿಗಳು** B) ರಾಜ್ಯ ಹೆದ್ದಾರಿಗಳು C) ಜಿಲ್ಲಾ ರಸ್ತೆಗಳು D) ಗ್ರಾಮೀಣ ರಸ್ತೆಗಳು

**18. ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿ ಇವರಿಗಿದೆ**

A) ಕೇಂದ್ರ ಲೋಕೋಪಯೋಗಿ ಇಲಾಖೆ B) **ರಾಜ್ಯ ಲೋಕೋಪಯೋಗಿ ಇಲಾಖೆ**

C) ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ D) ಜಿಲ್ಲಾ ಪಂಚಾಯತ್

**19. ಈ ರಸ್ತೆಗಳು ರಾಜ್ಯ ರಾಜಧಾನಿಗಳೊಂದಿಗೆ ಜಿಲ್ಲಾ ಕೇಂದ್ರ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು**

A) ರಾಷ್ಟ್ರೀಯ ಹೆದ್ದಾರಿಗಳು B) **ರಾಜ್ಯ ಹೆದ್ದಾರಿಗಳು** C) ಜಿಲ್ಲಾ ರಸ್ತೆಗಳು D) ಗ್ರಾಮೀಣ ರಸ್ತೆಗಳು

20. ಇದು ಭಾರತದ ಎರಡನೆಯ ದೊಡ್ಡ ಬಂದರಾಗಿದ್ದು ಹೂಗ್ಲಿ ನದಿ ದಂಡೆಯ ಮೇಲಿದೆ

A) **ಕಲ್ಕತ್ತಾ** B) ಕಾಂಡ್ಲಾ C) ತೂತುಕುಡಿ D) ಎನ್ನೋರ್

## 10.ಭಾರತದ ಕೈಗಾರಿಕೆ

1. ಭಾರತದಲ್ಲಿ ಸ್ಥಾಪನೆಯಾದ ಪ್ರಥಮ ಆಧುನಿಕ ಕಬ್ಬಿನ ಮತ್ತು ಉಕ್ಕಿನ ಕೈಗಾರಿಕೆ

A) **ಪಶ್ಚಿಮ ಬಂಗಾಳದ–ಕುಲ್ಟಿ** B)ಜಾರ್ಖಂಡದ–ಜೆಂಷಡಪುರ C)ಕರ್ನಾಟಕದ–ಜಿಂದಾಲ D)ಮಹಾರಾಷ್ಟ್ರದ–ಇಸ್ಪಾತ್

2. ಜಿಂದಾಲ್ ವಿಜಯನಗರ ಉಕ್ಕಿನ ಕೈಗಾರಿಕೆ ಇರುವ ರಾಜ್ಯ

A) ಛತ್ತೀಸಗರ್ B) **ಕರ್ನಾಟಕ** C) ಪಶ್ಚಿಮ ಬಂಗಾಳ D) ಓಡಿಸ್ಸಾ

3. ಬಾಕ್ಸೈಟ್ ಅದಿರು ಯಾವ ಕೈಗಾರಿಕೆಯು ಮುಖ್ಯ ಕಚ್ಚಾವಸ್ತು

A) ಕಬ್ಬಿಣ & ಉಕ್ಕಿನ ಕೈಗಾರಿಕೆ B) ಸಕ್ಕರೆ ಕೈಗಾರಿಕೆ C) **ಅಲ್ಯುಮಿನಿಯಂ ಕೈಗಾರಿಕೆ** D) ಕಾಗದ ಕೈಗಾರಿಕೆ

4. ಪ್ರಥಮ ಅಲ್ಯೂಮಿನಿಯಂ ಕೈಗಾರಿಕೆ ಆರಂಭ

A) 1953 B) 1853 C) 1854 D) **1942**

5. ಭಾರತದ ಪ್ರಪ್ರಥಮ ಆಧುನಿಕ ಹತ್ತಿ ಬಟ್ಟೆ ಕೈಗಾರಿಕೆ ಪ್ರಾರಂಭವಾದ ಸ್ಥಳ

A) ಬೆಂಗಳೂರು B) **ಮುಂಬೈ** C) ಸೂರತ್ D) ಇಂದೋರ್

6. ಈ ಕೆಳಗಿನವುಗಳಲ್ಲಿ ಕೃಷಿ ಆಧಾರಿತ ಕೈಗಾರಿಕೆ ಯಾವುದು?

A) **ಸಕ್ಕರೆ ಕೈಗಾರಿಕೆ** B) ಕಬ್ಬಿಣ ಉಕ್ಕಿನ ಕೈಗಾರಿಕೆ C) ಅಲ್ಯೂಮಿನಿಯಂ ಕೈಗಾರಿಕೆ D) ಸಿಮೆಂಟ್ ಕೈಗಾರಿಕೆ

7. ಭಾರತದ ಪ್ರಧಾನವಾದಾಗ ಕೈಗಾರಿಕೆ ಸ್ಥಾಪನೆಯಾದ ಸ್ಥಳ

A) ಬಾಲಿ B) ದಾಂಡೇಲಿ C) ನೆಪಾನಗರ D) **ಸೆರಂಪೂರ್**

8. ಭಾರತದ ಸಿಲಿಕಾನ್ ವ್ಯಾಲಿ----------

A) ಮುಂಬೈ B) ಹೈದರಾಬಾದ್ C) **ಬೆಂಗಳೂರು** D) ನೋಯ್ಡಾ

9. ಅರಣ್ಯ ಆಧಾರಿತ ಕೈಗಾರಿಕೆ ಯಾವುದು?

A) ಸಿಮೆಂಟ್ ಕೈಗಾರಿಕೆ B) **ಕಾಗದ ಕೈಗಾರಿಕೆ** C) ಸಕ್ಕರೆ ಕೈಗಾರಿಕೆ D) ಅಲ್ಯೂಮಿನಿಯಂ ಕೈಗಾರಿಕೆ

10. ಸಾಫ್ಟವೇರ್ ತಂತ್ರಜ್ಞಾನ ಪಾರ್ಕ್ ನ್ನು ಯಾವ ವರ್ಷ ಪ್ರಾರಂಭಿಸಲಾಯಿತು?

A) 1950 B) 1961 C) **1995** D) 2001

11. ಭಾರತದ ಕಾಟನೋಪೊಲಿಸ್ / ಮ್ಯಾಂಚೆಸ್ಟರ್ ಎಂದು ಯಾವ ನಗರವನ್ನು ಕರೆಯುವರು?

A) **ಮುಂಬೈ** B) ಅಹಮದಾಬಾದ್ C) ಬೆಂಗಳೂರು D) ಸೂರತ್

12. ಕೈಗಾರಿಕಾ ಪ್ರದೇಶವು ಸಾಮಾನ್ಯವಾಗಿ …………

A) ಗ್ರಾಮೀಣ ಪ್ರದೇಶವಾಗಿರುತ್ತದೆ B) ಗುಡ್ಡಗಾಡು ಪ್ರದೇಶವಾಗಿರುತ್ತದೆ

C) ಕೊಳಚೆ ಪ್ರವೇಶವಾಗಿರುತ್ತದೆ D) **ನಗರ ಪ್ರದೇಶವಾಗಿರುತ್ತದೆ**

13. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಲ್ಲಿ ಕೋಕಿಂಗ್ ಕಲ್ಲಿದ್ದಲನ್ನು ಬಳಸುವ ಕುರಿತು ಸೂಕ್ತವಾದ ಹೇಳಿಕೆ ಯಾವುದು

A) ಮೂಲ ಕಚ್ಚಾ ವಸ್ತುವಾಗಿ ಬಳಸುತ್ತಾರೆ B) **ಮೂಲ ಶಕ್ತಿ ಸಂಪನ್ಮೂಲವಾಗಿ ಬಳಸುತ್ತಾರೆ**

C) ಉಕ್ಕಿನ ಗುಣಮಟ್ಟ ಹೆಚ್ಚಿಸಲು ಬಳಸುತ್ತಾರೆ D) ಜಲ ವಿದ್ಯುತ್ ಪೂರೈಕೆಗಾಗಿ ಬಳಸುತ್ತಾರೆ

14. ಭಾರತದಲ್ಲಿ ಸರ್ಕಾರಿ ವಲಯದಲ್ಲಿರುವ ಟಾಟಾ ಉಕ್ಕು ಸ್ಥಾವರ ನೆಲೆಸಿರುವುದು

A) ಜಂಶೆಡ್ಪೂರ್– ಜಾರ್ಖಂಡ್ B) ಬರ್ನಪೂರ್– ಪಶ್ಚಿಮಬಂಗಾಳ C) **ಕಲಿಂಗನಗರ– ಒಡಿಸ್ಸಾ** D) ಬಿಲಾಯಿ ಛತ್ತಿಸ್ಗರ್

15. ಮೊದಮೊದಲು ಭಾರತದ ಕಾಗದ ಕೈಗಾರಿಕೆಯು ಪಶ್ಚಿಮಬಂಗಾಳದ ಯಾವ ನದಿ ಬಯಲಿನಲ್ಲಿ ಅಭಿವೃದ್ಧಿಗೊಂಡಿತು

A) ಗಂಗಾ B) ದಾಮೋದರ C) ಮಹಾನದಿ D) **ಹೋಗ್ಲಿ**

## 11.ಭಾರತದ ನೈಸರ್ಗಿಕ ವಿಪತ್ತುಗಳು

**1. ಅತ್ಯಂತ ವಿನಾಶಕಾರಿ ವಾಯುಗೋಳ ವಿಪತ್ತು ಯಾವುದು?**

A) **ಆವರ್ತ ಮಾರುತಗಳು** B) ಪ್ರವಾಹಗಳು C) ಬರಗಾಲ D) ಸಾಂಕ್ರಾಮಿಕ ರೋಗಗಳು

**2. ಭಾರತದ ಪೂರ್ವ ಕರಾವಳಿಯು ಹೆಚ್ಚು..............ಪೀಡಿತ ಪ್ರದೇಶವಾಗಿದೆ?**

A) ಪ್ರವಾಹಗಳು B) ಸಮುದ್ರದ ಅಲೆಗಳು C) **ಆವರ್ತ ಮಾರುತಗಳು** D) ಸುನಾಮಿ

**3. ಭಾರತದ ಪರ್ಯಾಯ ಪ್ರಸ್ಥಭೂಮಿಯಲ್ಲಿ ............ಗಳು ಸಂಭವಿಸುವುದು ಅಪರೂಪ**

A) ಜ್ವಾಲಾಮುಖಿ B) **ಭೂಕಂಪಗಳು** C) ಬರಗಾಲ D) ಭೂಕುಸಿತ

**4. ಆವರ್ತ ಮಾರುತಗಳಿಂದ ಹೆಚ್ಚು ಹಾನಿಗೊಳಗಾಗುವ ರಾಜ್ಯಗಳು**

A) ತಮಿಳುನಾಡು, ಕೇರಳ, ಕರ್ನಾಟಕ B) ಕೇರಳ, ಗುಜರಾತ್, ಒಡಿಸ್ಸಾ

C) ಆಂಧ್ರ ಪ್ರದೇಶ್, ಮಹಾರಾಷ್ಟ್ರ ಕೇರಳ D) **ತಮಿಳುನಾಡು, ಆಂಧ್ರ ಪ್ರದೇಶ್, ಒಡಿಸ್ಸಾ**

**5. ಭಾರತದಲ್ಲಿ ಆಗಾಗೆ .................ಗಳು ಬೆಟ್ಟ–ಗುಡ್ಡಗಳ ರಾಜ್ಯಗಳಲ್ಲಿ ಸಂಭವಿಸುವವು**

A) ಭೂಕಂಪನ B) ಜ್ವಾಲಾಮುಖಿ C) **ಭೂಕುಸಿತ** D) ಪ್ರವಾಹಗಳು

**6. ಭಾರತದಲ್ಲಿ ಉಷ್ಣವಲಯದ ಆವರ್ತ ಮಾರುತಗಳು ಸಾಮಾನ್ಯವಾಗಿ ಸಂಭವಿಸುವುದು**

A) **ಬಂಗಾಳಕೊಲ್ಲಿಯಲ್ಲಿ** B) ಅರಬ್ಬಿ ಸಮುದ್ರದಲ್ಲಿ C) ಹಿಂದೂ ಮಹಾಸಾಗರದಲ್ಲಿ D) ಗಂಗಾನದಿಯಲ್ಲಿ

**7. ಭಾರತದಲ್ಲಿ ಉಷ್ಣವಲಯದ ಆವರ್ತ ಮಾರುತಗಳ ತೀವ್ರತೆ ಸಾಮಾನ್ಯವಾಗಿ ಈ ಕೆಳಗಿನ ಯಾವ ತಿಂಗಳುಗಳನ್ನು ಹೆಚ್ಚಾಗಿರುತ್ತದೆ**

A) ಜನವರಿ ಮತ್ತು ಫೆಬ್ರುವರಿ B)**ಅಕ್ಟೋಬರ್ ಮತ್ತು ನವೆಂಬರ್** C)ಡಿಸೆಂಬರ್ ಮತ್ತು ಜನವರಿ D) ಫೆಬ್ರವರಿ ಮತ್ತು ಮಾರ್ಚ್

**8. ಈ ಕೆಳಗಿನವುಗಳಲ್ಲಿ ಸಮುದ್ರತೀರದ ಸವೆತಕ್ಕೆ ಕಾರಣವಾಗುವ ಮಾನವನ ಕೃತ್ಯ**

A) ರಸ್ತೆಗಳನ್ನು ನಿರ್ಮಾಣ ಮಾಡುವುದು B) ಹೆಚ್ಚಾಗಿ ಮೀನುಗಾರಿಕೆ ಮಾಡುವುದು

C) ಮ್ಯಾಂಗ್ರೋ ಅರಣ್ಯಗಳನ್ನು ಬೆಳೆಸುವುದು D) **ಮಿತಿಮೀರಿದ ಮರಳು ಮತ್ತು ಕಲ್ಲು ಗಣಿಗಾರಿಕೆ**

**9. ಗುಜರಾತ್,ಮಹಾರಾಷ್ಟ್ರ,ಗೋವಾ,ಕರ್ನಾಟಕ,ಕೇರಳ ಮತ್ತು ತಮಿಳುನಾಡು ಒಳಗೊಂಡ ಭಾರತದ ಪಶ್ಚಿಮ ಕರಾವಳಿಯ ತೀವ್ರಗತಿಯ ಸವೆತಕ್ಕೆ ಕಾರಣವಾಗುವುದು**

A)**ನೈರುತ್ಯ ಮಾನ್ಸೂನ್ ಮಾರುತಗಳು** B) ಉಷ್ಣವಲಯದ ಆವರ್ತ ಮಾರುತಗಳು

C) ಸುನಾಮಿ D) ಮಿತಿಮೀರಿದ ಮರಳು ಮತ್ತು ಕಲ್ಲು ಗಣಿಗಾರಿಕೆ

**10. ಅಂಡಮಾನ್ ನಿಕೋಬಾರ್ ದ್ವೀಪಗಳ ಕರಾವಳಿಗಳ ಕೊರೆತಕ್ಕೆ ಹೆಚ್ಚು ಕಾರಣವಾಗಿರುವುದು**

A) ನೈರುತ್ಯ ಮಾನ್ಸೂನ್ ಮಾರುತಗಳು B) ಉಷ್ಣವಲಯದ ಆವರ್ತ ಮಾರುತಗಳು

C)**ಸುನಾಮಿ** D) ಮಿತಿಮೀರಿದ ಮರಳು ಮತ್ತು ಕಲ್ಲು ಗಣಿಗಾರಿಕೆ

**11. ಭೂಕಂಪನಕ್ಕೆ ಕಾರಣವಾಗಿರುವ ಮಾನವನ ಕೃತ್ಯ**

A) ಮಿತಿಮೀರಿದ ಮರಳು ಮತ್ತು ಕಲ್ಲು ಗಣಿಗಾರಿಕೆ B) ಅಂತರ್ ಗುಹೆ ಮೇಲ್ಛಾವಣಿಯ ಕುಸಿತ

C) **ಅಣೆಕಟ್ಟುಗಳ ನಿರ್ಮಾಣ ಮಾಡುವುದು** D) ರಸ್ತೆಗಳನ್ನು ನಿರ್ಮಾಣ ಮಾಡುವುದು

**12. ಭಾರತದಲ್ಲಿ ಈವರೆಗೆ ಸಂಭವಿಸಿರುವ ಬಹಳಷ್ಟು ಭೂಕಂಪನ ಗಳಿಗೆ ಕಾರಣ**

A) ಜಲಾಶಯಗಳ ನೀರಿನ ಭಾರ B) ಅಂತರ್ ಗುಹೆ ಮೇಲ್ಛಾವಣಿಯ ಕುಸಿತ

C) **ಭೂಫಲಕಗಳ ಚಲನೆ** D) ಶಿರಾ ಸ್ತರಭಂಗ ಮತ್ತು ಮಡಿಕೆ

# ಅರ್ಥಶಾಸ್ತ್ರ

## 1.ಅಭಿವೃದ್ಧಿ

**1. ಒಂದು ರಾಷ್ಟ್ರ ಒಂದು ವರ್ಷದಲ್ಲಿ ಉತ್ಪಾದಿಸಿದ ಸರಕು ಸೇವೆಗಳ ಮೌಲ್ಯವನ್ನು ------ಎನ್ನುವವರು.**

A) ಅಭಿವೃದ್ಧಿ B) ಅನಾಭಿವೃದ್ಧಿ C) ತಲಾ ಆದಾಯ D) **ರಾಷ್ಟ್ರೀಯ ಆದಾಯ**

**2. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ** .........

A) ಸಾಮಾನ್ಯ ಸಭೆ B) **ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ** C)ವಿಶ್ವ ಬ್ಯಾಂಕ್ D)ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ

**3. ಮಾನವ ಅಭಿವೃದ್ಧಿ ಸೂಚಿ (HDI) ಎಂದರೆ** ............

A) ಆಹಾರ ,ಆರೋಗ್ಯ ಮತ್ತು ನೈರ್ಮಲ್ಯ ಸ್ವಚ್ಛ ಪರಿಸರದ ಲಭ್ಯತೆ .

B) ಆಹಾರ, ವಸತಿ, ಶಿಕ್ಷಣ ಸೌಲಭ್ಯಗಳ ಲಭ್ಯತೆ.

C) **ನಿರೀಕ್ಷಿತ ಜೀವಿತಾವಧಿ, ಶಿಕ್ಷಣದ ಮಟ್ಟ ತಲಾ ಆದಾಯ ಇವುಗಳ ಸಾರವೇ ಆಗಿದೆ** .

D) ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿ.

**4. ನಿರೀಕ್ಷಿತ ಜೀವಿತಾವಧಿಯನ್ನು ಮಾನವನ ಆರೋಗ್ಯವನ್ನು ಆಧರಿಸಿ ಅಳೆಯಲಾಗುತ್ತಿದೆ.ಹಾಗಾದರೆ-ಶಿಕ್ಷಣದ ಮಟ್ಟವನ್ನು ಹೇಗೆ ಅಳೆಯಲಾಗುತ್ತದೆ** ?.

A) **ಸಾಕ್ಷರತೆಯ ಪ್ರಮಾಣದಿಂದ** B)ರಾಷ್ಟ್ರೀಯ ಆದಾಯದಿಂದ C)ತಲಾ ಆದಾಯದಿಂದ D)ಜನರ ಜೀವನ ಮಟ್ಟದಿಂದ

**5. 'ಮಾನವ ಅಭಿವೃದ್ಧಿ ಸೂಚಿ' ಎಂಬ ಮಾನದಂಡವನ್ನು ರೂಪಿಸಿದವರು ...**.....

A) ವಿಶ್ವಸಂಸ್ಥೆ B) ವಿಶ್ವ ಬ್ಯಾಂಕ್ C) **ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ** D) ಯುನೆಸ್ಕೊ

**6. ತಲಾ ಆದಾಯವನ್ನು ಹೇಗೆ ಕಂಡುಹಿಡಿಯಬಹುದು** ....

A) ಜನಸಂಖ್ಯೆಯನ್ನು ರಾಷ್ಟ್ರೀಯ ವರಮಾನದಿಂದ ಭಾಗಿಸಿದಾಗ ದೊರೆಯುವುದು.

B) **ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ದೊರೆಯುವುದು.**

C) ರಾಷ್ಟ್ರೀಯ ವರಮಾನ ಮತ್ತು ಜನಸಂಖ್ಯೆಯನ್ನು ಕೂಡಿದಾಗ ದೊರೆಯುವುದು .

D) ಒಂದು ರಾಷ್ಟ್ರದ ವರಮಾನದಲ್ಲಿ ವೆಚ್ಚವನ್ನು ಕಳೆದಾಗ ತೊರೆಯುವುದು

**7. ಲಿಂಗಾನುಪಾತ ಎಂದರೆ** ...

A) ಪ್ರತಿ 100 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯಾಗಿದೆ .

B) **ಪ್ರತಿ 1000 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯಾಗಿದೆ.**

C) ದೇಶದಲ್ಲಿರುವ ಒಟ್ಟು ಪುರುಷ ಮತ್ತು ಮಹಿಳೆಯರ ಸಂಖ್ಯೆ .

D) ಪುರುಷ ಮತ್ತು ಮಹಿಳೆಯರ ಸಾಕ್ಷರತೆಯ ಪ್ರಮಾಣ .

**8. 2011 ರ ಜನಗಣತಿಯ ಪ್ರಕಾರ ಭಾರತದಲ್ಲಿದ್ದ ಲಿಂಗಾನುಪಾತವು..**

A) 935 B)**945** C) 955 D) 965

**9. ಲಿಂಗಾನುಪಾತವೂ ಏಕೆ ಕುಸಿಯುತ್ತಿದೆ ಎಂದರೆ....**

A) ತಾಯಂದಿರ ಮರಣ ಪ್ರಮಾಣದಲ್ಲಿ ಹೆಚ್ಚಳ . B) ಅಪೌಷ್ಟಿಕತೆ ಮತ್ತು ಕೆಲಸದ ಅಧಿಕ ಒತ್ತಡ .

C) ತಾಯಂದಿರ ಅನಾರೋಗ್ಯ ಸಮಸ್ಯೆಗಳು . D) **ತಾಯಿಯ ಗರ್ಭದಲ್ಲಿರುವಾಗಲೇ ಹೆಣ್ಣು ಭ್ರೂಣಗಳನ್ನು ಪತ್ತೆ ಹಚ್ಚಿ ಹತ್ಯೆ ಮಾಡುವ ಕೆಟ್ಟ ಪರಂಪರೆ ಬೆಳೆಯುತ್ತಿರುವುದು** .

**10. 2011 ರ ಜನಗಣತಿಯ ಪ್ರಕಾರ ಪುರುಷ ಮತ್ತು ಮಹಿಳೆಯರ ಸಾಕ್ಷರತೆಯ ಪ್ರಮಾಣ** .

A)**ಶೇ.65.46 ಮತ್ತು ಶೇ.82.14** B)ಶೇ.82.14 ಮತ್ತು ಶೇ.65.46 C)ಶೇ.46.65 ಮತ್ತು ಶೇ.82.14 D)ಶೇ.74.14 ಮತ್ತು ಶೇ. 82.14

**11. ಮಾನವ ಅಭಿವೃದ್ಧಿ............ಗಳ ವಿಸ್ತರಣೆಯನ್ನು ಸೂಚಿಸುತ್ತದೆ.**

A) ಉತ್ಪಾದನಾ ಸಾಮರ್ಥ್ಯ B) ವಿತರಣೆಯ ಸಾಮರ್ಥ್ಯ C) **ಮಾನವನ ಸಾಮರ್ಥ್ಯ** D) ಪೊರೈಕೆಯ ಸಾಮರ್ಥ್ಯ

**12. 2014ರ ಮಾನವ ಅಭಿವೃದ್ಧಿ ಸೂಚಿಯಲ್ಲಿ ಭಾರತದ ಸ್ಥಾನ**

A) 110 B) 120 C) 130 D) **135**

**13. ಅನಾಭಿವೃದ್ಧಿ ರಾಷ್ಟ್ರದಲ್ಲಿ ಪ್ರಮುಖವಾಗಿ..........ಕಡಿಮೆ ಇರುವುದು**

A) **ತಲಾ ವರಮಾನ** B) ಬಡತನ C) ಜನಸಂಖ್ಯೆ D) ನಿರುದ್ಯೋಗ

**14. 2012ರ ಮಾನವ ಅಭಿವೃದ್ಧಿ ಸೂಚಿಯಂತೆ ಭಾರತದಲ್ಲಿ ನಿರೀಕ್ಷಿತ ಜೀವಿತಾವಧಿ.........**

A) 60 B) **65.8** C) 63.3 D) 70.2

**15. 2012ರ ಮಾನವ ಅಭಿವೃದ್ಧಿ ಸೂಚಿಯಂತೆ ಭಾರತದ ತಲಾ ವರಮಾನವು ..........ಡಾಲರ ಗಳಷ್ಟಿತ್ತು**

A) 3340 B) 3780 C) **3203** D) 4203

## 2, ಗ್ರಾಮೀಣಾಭಿವೃದ್ಧಿ

**1. ಪಂಚಾಯತ್ ಸಂಸ್ಥೆಗಳ ಉದ್ಯೋಗ ನಿರ್ಮಾಣ ಹಾಗೂ ಬಡತನ ನಿರ್ಮೂಲನಾ ಯೋಜನೆ ಗೆ ಒಂದು ಉದಾ:---**

A) ಅಂಬೇಡ್ಕರ್- ವಾಲ್ಮೀಕಿ ವಸತಿ ಯೋಜನೆ. B) **ಮಹಾತ್ಮಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ.**

C) ಪ್ರಧಾನಮಂತ್ರಿ ಆವಾಸ್ ಯೋಜನೆ. D) ಆಶ್ರಯ ಯೋಜನೆ.

**2. "ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನುತ್ತೇವೆ." ಇದನ್ನೇ ಗಾಂಧೀಜಿ ಯವರು ---- ಎಂದು ಕರೆದಿದ್ದಾರೆ.**

A) **ಗ್ರಾಮೀಣಾಭಿವೃದ್ಧಿ.** B) ಗ್ರಾಮ ಪಂಚಾಯಿತಿ. C) ಗ್ರಾಮ ಸ್ವರಾಜ್ಯ. D) ಗ್ರಾಮೀಣ ಆಡಳಿತ.

**3. ಭಾರತದ ಆಡಳಿತ ವ್ಯವಸ್ಥೆಯಲ್ಲಿ 73ನೇ ಸಂವಿಧಾನಾತ್ಮಕ ತಿದ್ದುಪಡಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಕಾರಣ...**

A) ಕೇಂದ್ರೀಕೃತ ಆಡಳಿತ ವ್ಯವಸ್ಥೆ ಜಾರಿಗೆ ತಂದಿತು. B) ಸಂಯುಕ್ತ ಸರ್ಕಾರ ವ್ಯವಸ್ಥೆಯನ್ನು ಜಾರಿಗೆ ತಂದಿತು.

C) **ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೊಂಡಿತು** D) ಮೀಸಲಾತಿ ಪದ್ಧತಿಯನ್ನು ಜಾರಿಗೆ ತಂದಿತು.

**4. ಗ್ರಾಮೀಣ ಪ್ರದೇಶಗಳಲ್ಲಿ 'ಮಹಿಳಾ ಸ್ವಸಹಾಯ ಸಂಘ' ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಏಕೆಂದರೆ.....**

A) ಸ್ತ್ರೀಯರಿಗೆ ರಾಜಕೀಯ ಹಕ್ಕುಗಳ ನೀಡಿಕೆ. B) ಲಿಂಗ ತಾರತಮ್ಯದ ನಿವಾರಣೆ.

C)ಮಹಿಳಾ ಶೋಷಣೆಯನ್ನು ತಡೆಗಟ್ಟುವುದು. D) **ಗ್ರಾಮೀಣ ಮಹಿಳೆಯರ ಸಂಘಟನೆ ಮತ್ತು ಆರ್ಥಿಕ ಸ್ವಾವಲಂಬನೆ.**

**5. ಪಂಚಾಯತ್ ಸಂಸ್ಥೆಗಳು ------ ತತ್ವಗಳ ಅಡಿಯಲ್ಲಿ ಕಾರ್ಯ ನಿರ್ವ ಹಿಸುತ್ತವೆ.**

A) ಸಮಾಜವಾದ B) **ವಿಕೇಂದ್ರೀಕರಣ** C) ಧಾರ್ಮಿಕ D) ಜಾತ್ಯಾತೀತ

**6. ಭಾರತ ಸರ್ಕಾರದ 1993 ರ ಸಂವಿಧಾನದ 73ನೇ ತಿದ್ದುಪಡಿ ಕಾಯ್ದೆಯು ಈ ಕೆಳಗಿನ ಯಾವ 3 ಹಂತದ ಪಂಚಾಯತಿ ವ್ಯವಸ್ಥೆ ಯನ್ನು ಜಾರಿಗೆ ತಂದಿತು.**

A) ಗ್ರಾಮ ಪಂಚಾಯತಿ,ತಾಲ್ಲೂಕು ಪಂಚಾಯತಿ,ಪಟ್ಟಣ ಪಂಚಾಯತಿ. B) ಗ್ರಾಮಪಂಚಾಯತಿ,ತಾಲ್ಲೂಕು ಪಂಚಾಯತಿ,ನಗರಸಭೆ.

C)**ಗ್ರಾಮ ಪಂಚಾಯತಿ,ತಾಲ್ಲೂಕು ಪಂಚಾಯತಿ,ಜಿಲ್ಲಾ ಪಂಚಾಯತಿ.** D) ನಗರಸಭೆ ನಗರ,ಪಾಲಿಕೆ,ಮಹಾನಗರ ಪಾಲಿಕೆ.

**7. "ಭಾರತದ ನೈಜ ಅಭಿವೃದ್ಧಿ ಎಂದರೆ ಅದು ಗ್ರಾಮಗಳ ಅಭಿವದ್ಧಿ". ಎಂದು ಹೇಳಿದವರು..**

A) ಸರ್ ಎಂ ವಿಶ್ವೇಶ್ವರಯ್ಯ. B) ಜವಾಹರ್ ಲಾಲ್ ನೆಹರು. C) **ಮಹಾತ್ಮ ಗಾಂಧೀಜಿ.** D) ಡಾ. ಬಿ ಆರ್ ಅಂಬೇಡ್ಕರ್.

**8. ಗ್ರಾಮೀಣ ಪ್ರದೇಶಗಳ ಹಿಂದುಳಿಯುವಿಕೆ ಮತ್ತು ಬಡತನಕ್ಕೆ ಅತ್ಯಂತ ಪ್ರಮುಖ ಕಾರಣವೆಂದರೆ...**

A) **ಕೃಷಿಯ ಸ್ಥಗಿತತೆ ಮತ್ತು ನಿಧಾನಗತಿಯ ಬೆಳವಣಿಗೆ.** B) ಕೃಷಿಯೇತರ ವಲಯಗಳ ಅಭಿವೃದ್ಧಿ.

C) ನೀರಾವರಿ ಮತ್ತು ಭೂ ಸುಧಾರಣೆಗಳು. D) ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿ.

**9. ವಸತಿಹೀನರಿಗೆ ವಸತಿ ಸೌಲಭ್ಯ ವನ್ನು ಒದಗಿಸಿಕೊಡುವುದಕ್ಕಾಗಿ ಜಾರಿಗೆ ತಂದಿರುವ ವಸತಿ ಯೋಜನೆಗಳಿಗೆ ಒಂದೆರಡು ಉದಾಹರಣೆ...**

